ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 28 ಶನಿವಾರ 2026

46

ಸಂಪುಟ: 46 | ಸಂಚಿಕೆ: 336 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಆಕ್ರೊಪೊಲೀಸ್ ಅಪಾರ್ಟ್‌ಮೆಂಟ್‌ನಲ್ಲಿ ಶ್ರೀರಾಮನವಮಿ ಆಚರಣೆ



ಮೈಸೂರಿನ ಬೋಗಾದಿ–ಗದ್ದಿಗೆ ಮುಖ್ಯ ರಸ್ತೆಯಲ್ಲಿರುವ ಆಕಾರ್ ಆಕ್ರೊಪೊಲೀಸ್ ಅಪಾರ್ಟ್‌ಮೆಂಟ್‌ನಲ್ಲಿ ಶ್ರೀ ರಾಮನವಮಿಯನ್ನು ಭಕ್ತಿ ಭಾವದಿಂದ ಆಚರಿಸಲಾಯಿತು. ಸಂಘದ ಅಧ್ಯಕ್ಷ ರವೀಶ್ ಮತ್ತು ಸದಸ್ಯೆ ಅನುರಾಧ ಮತ್ತಿತರರು ಉಪಸ್ಥಿತರಿದ್ದರು.

ಕೃಷ್ಣಮೂರ್ತಿಪುರಂನಲ್ಲಿ ಶ್ರೀ ರಾಮನವಮಿ ಆಚರಣೆ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದಲ್ಲಿ ಶ್ರೀ ರಾಮನವಮಿ ಅಂಗವಾಗಿ ಶ್ರೀ ರಾಮನಿಗೆ ವಿಶೇಷ ಪೂಜೆ ಹಾಗೂ ಅಭಿಷೇಕ ನೆರವೇರಿಸಲಾಯಿತು. ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಮಾಧವ್ ರಾವ್, ವಿಕ್ರಮ ಅಯ್ಯಂಗಾರ್, ಶೇಷಾದ್ರಿ, ಶ್ರೀನಿವಾಸ್, ಕೃಷ್ಣ, ಅಶ್ವಥ್ ನಾರಾಯಣ್ ಇನ್ನಿತರರು ಹಾಜರಿದ್ದರು.

ಸಮರ್ಥನಂ ಸಂಸ್ಥೆಯಲ್ಲಿ ಶ್ರೀರಾಮನವಮಿ ಆಚರಣೆ



ಮೈಸೂರು, ಮಾ. 27– ಮೈಸೂರು ವಿಜಯನಗರ 2ನೇ ಹಂತದಲ್ಲಿರುವ ಸಮರ್ಥನಂ ಅಂಗವಿಕಲರ ಸಂಸ್ಥೆಯಲ್ಲಿ ಶ್ರೀ ರಾಮನವಮಿ ಆಚರಿಸಲಾಯಿತು.

ಈ ವಿಶೇಷ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿ ಹಾಗೂ ಸ್ವಯಂಸೇವಕರು ಸಾರ್ವಜನಿಕರಿಗೆ ಹಾಗೂ ಭಕ್ತಾದಿಗಳಿಗೆ ಪಾನಕ ಮತ್ತು ತಂಪಾದ ಮಜ್ಜಿಗೆ ವಿತರಣೆ ಮಾಡಿದರು. ಬೇಸಿಗೆ ಬಿಸಿಲಿನ ನಡುವೆಯೂ ಈ ಸೇವಾ ಕಾರ್ಯದಿಂದ ಜನರಿಗೆ ತಂಪು ಹಾಗೂ ಸಂತೋಷ ಲಭಿಸಿತು.

ಕಾರ್ಯಕ್ರಮದಲ್ಲಿ ಸಮರ್ಥನಂ ಸಂಸ್ಥೆ ಮೈಸೂರು ವಿಭಾಗದ ಸಂಯೋಜಕ ಶಿವರಾಜು, ಶಾಲೆಯ ಮುಖ್ಯೋಪಾಧ್ಯಾಯರಾದ ಭ್ರಮಾರಂಭ, ಆರ್. ಸುಬ್ರಮಣಿ, ಮಹಾಂತೇಶ್, ಚೈತ್ರಕುಮಾರಿ, ಬೃಂದಾ ಬಾಯಿ, ಪದ್ಮ, ಸ್ಪರ್ಶ, ವಿದ್ಯಾವತಿ, ಎಸ್. ಲತಾ, ಸೇರಿದಂತೆ ಸಂಸ್ಥೆಯ ಸದಸ್ಯರು, ಉನ್ನತ ಶಿಕ್ಷಣ ವಿದ್ಯಾರ್ಥಿಗಳು, ತರಬೇತಿ ಪಡೆಯುತ್ತಿರುವ ವಿಕಲಚೇತನರು ವಿದ್ಯಾರ್ಥಿಗಳು ಹಾಗೂ ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು.

ಶ್ರೀರಾಮತಾರಕ ಮಂತ್ರ ಹೋಮ



ಮೈಸೂರಿನ ಎನ್‌ಆರ್ ಮೊಹಲ್ಲಾದಲ್ಲಿರುವ ಶ್ರೀದತ್ತಪೀಠದ ಶ್ರೀ ಗಾಯತ್ರಿ ಶ್ರೀರಾಮ ಮಂದಿರದಲ್ಲಿ ಶ್ರೀ ರಾಮೋತ್ಸವದ ಅಂಗವಾಗಿ ಶ್ರೀರಾಮತಾರಕ ಮಂತ್ರ ಹೋಮದ ಪೂರ್ಣಾಹುತಿಯನ್ನು ಅವಧೂತ ದತ್ತಪೀಠದ ಪ್ರಧಾನ ಅರ್ಚಕ ವೇ ಬ್ರ ಶ್ರೀ ಫಣಿರಾಜ್ ದತ್ತ ನೆರವೇರಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠ ಕುಮಾರ್, ಸಮಿತಿ ಸದಸ್ಯ ಎಂ.ಆರ್.ಬಾಲಕೃಷ್ಣ, ರಾಮಮಂದಿರದ ಎಂ.ಚಂದ್ರಶೇಖರ್ ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಪಿಂಚಣಿ ಹಣದಲ್ಲಿ ವೈದ್ಯಕೀಯ ಸಮಸ್ಯೆ ಇರುವವರಿಗೆ ನೆರವು



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಿವೃತ್ತ ಶಿಕ್ಷಕ ರಾಜೇಂದ್ರ ಇಬ್ಬರಿಗೆ ಧನ ಸಹಾಯ ನೀಡಿದರು.

ಮೈಸೂರು, ಮಾ.27(ಜಿಎ)–ಮಗನ ಹುಟ್ಟುಹಬ್ಬದ ಅಂಗವಾಗಿ ಪಿಂಚಣಿ ಹಣವನ್ನು ಸಮಾಜಕ್ಕೆ ಒಳಿತಾಗಬೇಕೆಂಬ ಉದ್ದೇಶದಿಂದ ಚಾಮರಾಜನಗರ ಹೆಬ್ಬಸೂರಿನ ರಾಜೇಂದ್ರ ಅವರು ವೈದ್ಯಕೀಯ ಸಮಸ್ಯೆಯಿಂದ ಬಳಲುತ್ತಿರುವ ಇಬ್ಬರಿಗೆ ಧನಸಹಾಯ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಿವೃತ್ತ ಶಿಕ್ಷಕ ರಾಜೇಂದ್ರ ಮಾತನಾಡಿ, ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವದ ಸಂಭ್ರಮವನ್ನು ದುಂದು ವೆಚ್ಚಕ್ಕೆ ಮೀಸಲಿಡದೇ ಸಮಾಜಕ್ಕೆ ಏನಾದರೂ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ಕಳೆದ 10 ವರ್ಷದಿಂದ ಈ ರೀತಿ ಮಾಡಲಾಗುತ್ತಿದ್ದು, ಈಗ ಇಶ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಿ ಆ ಮೂಲಕ ಮಾಡುತ್ತಿದ್ದೇನೆ. ತಮಗೆ ಪ್ರಚಾರ ಪಡೆಯಬೇಕೆಂಬ ಉದ್ದೇಶವಿಲ್ಲ. ಆದರೆ ಈ ಕಾರ್ಯದಿಂದ ಇತರರೂ ಪ್ರೇರಣೆಗೊಳ್ಳಲಿ ಎಂಬುದಷ್ಟೇ ತಮ್ಮ ನಿರೀಕ್ಷೆಯಾಗಿದೆ ಎಂದರು.

ತಲೆಸ್ಸೆಮಿಯಾ ಸಮಸ್ಯೆಯಿಂದ ಬಳಲುತ್ತಿರುವ ಐದು ವರ್ಷದ ಓರ್ವ ಬಾಲಕಿ ಹಾಗೂ ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿರುವ ಮತ್ತೋರ್ವ ಯುವಕನಿಗೆ ಒಂದಷ್ಟು ಹಣ ಹಾಗೂ ಮೈಸೂರು ಪಾಕ್ ನೀಡಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದರು. ಈ ಸಂದರ್ಭದಲ್ಲಿ ನಾಗಿನಿ ಮತ್ತಿತರರು ಉಪಸ್ಥಿತರಿದ್ದರು.

ಇಂದು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪದವಿ ಪ್ರದಾನ ಸಮಾರಂಭ

ಮೈಸೂರು, ಮಾ.27(ಜಿಎ)–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪದವಿ ಪ್ರದಾನ ಸಮಾರಂಭವನ್ನು ಮಾ.28ರಂದು ಮಧ್ಯಾಹ್ನ 3 ಗಂಟೆಗೆ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಾಚಾರ್ಯರಾದ ಡಾ.ಬಿ.ಆರ್.ಜಯಕುಮಾರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭದಲ್ಲಿ ಸಂಸದ ಡಾ.ಸಿ.ಎನ್.ಮಂಜುನಾಥ್ ಪದವಿ ಪ್ರದಾನ ಭಾಷಣ ಮಾಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ ಭಾಗವತ್ ವಹಿಸುವರು. ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಉಪಸ್ಥಿತರಿರುವರು ಎಂದರು.

2024–25ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿಎ, ಬಿಕಾಂ, ಬಿಬಿಎ, ಬಿಸಿಎ, ಬಿಎಸ್‌ಸಿ ಹಾಗೂ ಬಿಬಿಎನಲ್ಲಿ ಒಟ್ಟು 323 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. ಇವರಲ್ಲಿ 176 ಮಂದಿ ಉನ್ನತ ಶ್ರೇಣಿ, 122 ವಿದ್ಯಾರ್ಥಿಗಳು ಪ್ರಥಮ ದರ್ಜೆ, 26 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನ ಪಡೆಯುತ್ತಿದ್ದಾರೆ. ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಪದವಿ ವಿಭಾಗದ 409 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. 84 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 315 ವಿದ್ಯಾರ್ಥಿಗಳು ಪ್ರಥಮ ದರ್ಜೆ, 20 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನ ನಾಲ್ವರು ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆಯುತ್ತಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಸಿ.ಕೆ. ರೇಣುಕಾರ್ಯ, ಶ್ರುತಿ ಪೊಣಚ್ಚ, ಡಾ.ಹೆಚ್.ಶ್ರೀಧರ್ ಉಪಸ್ಥಿತರಿದ್ದರು.

ಮಹಿಳೆಯರು ಸಂಭ್ರಮಿಸುವ ದಿನವೇ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ: ಲಲಿತಾ ಜಿಟಿಡಿ

ಮೈಸೂರು, ಮಾ.27(ಜಿಎ)– ಮೈಸೂರಿನ ವಿಜಯನಗರ ನಾಲ್ಕನೇ ಹಂತದಲ್ಲಿರುವ ಸೇವಾಯಾನ ಸಂಸ್ಥೆಯ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮವನ್ನು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಲಲಿತಾ ಜಿ.ಟಿ.ದೇವೇಗೌಡರು ಉದ್ಘಾಟಿಸಿ ಮಾತನಾಡಿ, ಬದಲಾಗುತ್ತಿರುವ ಮಹಿಳೆಯರ ಸ್ಥಾನಮಾನಗಳ ಬಗ್ಗೆ ಹೆಮ್ಮೆ ಪಡುತ್ತಾ ಮಹಿಳೆಯರು ಸಂಭ್ರಮಿಸುವ ಸುದಿನವೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದರು.

ಮೈಸೂರಿನ ಸೇವಾಯಾನ ಸಂಸ್ಥೆ ರಾಜ್ಯದ ಮೂಲೆ–ಮೂಲೆಗಳಿಂದ ಬಂದಿರುವ ಅಸಹಾಯಕ ವೃದ್ಧರಿಗೆ ಉಚಿತವಾಗಿ ನೆಲೆ ನೀಡಿದೆ. ಸ್ಥಳೀಯ ಹೆಣ್ಣು ಮಕ್ಕಳಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ನಿವೃತ್ತ ಶಿಕ್ಷಕರು, ಪ್ರಾಧ್ಯಾಪಕರುಗಳು ಇಲ್ಲಿಗೆ ಬಂದು ಇಲ್ಲಿನ ಹಿರಿಯರ ಜೊತೆ ಹಾಡು–ಹರಟೆ–ಕೌಶಲಗಳೊಡನೆ ಸಮಾನವಾಗಿ ಬೆರೆತು ಆನಂದಿಸುತ್ತಿದ್ದಾರೆ. ಇದೆಲ್ಲವನ್ನು ನೋಡುವುದೇ ಆನಂದವೆನಿಸುತ್ತಿದೆ. ಇಂತಹ ಸಂಸ್ಥೆಗೆ ಸರ್ಕಾರ ಹಾಗೂ ಇನ್ನಿತರೆ ಸಂಘ–ಸಂಸ್ಥೆಗಳ ಕಡೆಯಿಂದ ನಿರಂತರ ನೆರವು ದೊರೆಯುವಂತಾಗಬೇಕು. ಎಂದು ಆಶಿಸಿ, ಪ್ರತಿಭಾವಂತ ಹೆಣ್ಣುಮಗಳೊಬ್ಬಳಿಗೆ ಹೊಲಿಗೆ ಯಂತ್ರವನ್ನು ವಿತರಿಸಿದರು.

ನಗರಪಾಲಿಕೆ ಮಾಜಿ ಸದಸ್ಯೆ ಪ್ರೇಮ ಶಂಕರಗೌಡ ಮಾತನಾಡಿ, ಹಿಂದಿನ ಕಾಲದಲ್ಲಿ ದುಷ್ಟರ ಹಾವಳಿಯಿಂದ ರಕ್ಷಣೆ ಕೋರಿ ಶಕ್ತಿದೇವತೆಗಳ ಮೊರೆಹೋಗುತ್ತಿದ್ದರು ಎಂಬ ಮಾತುಗಳನ್ನು ನಾವು ಕೇಳಿದ್ದೇವೆ. ಅಂತೆಯೇ ಪ್ರತಿಯೊಂದು ಮನೆಯ ಹೆಣ್ಣುಮಕ್ಕಳು ಶಕ್ತಿ ದೇವತೆಗಳಾದರೆ ಅ ಮನೆಯ ಕಷ್ಟ, ದಾರಿದ್ರ್ಯ ಕಳೆದು ಕುಟುಂಬ ಮುಂದುವರೆಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಈ ವೇಳೆ ಮಹಿಳಾ ಸೇವಾಯಾನದ ವೃದ್ಧ ಮಹಿಳೆಯರು ಅಕ್ಕಮಹಾದೇವಿ, ಸಾಲುಮರದ ತಿಮ್ಮಕ್ಕ, ಬಿ.ಜಯಶ್ರೀ ಹಾಗೂ ಸುಧಾಮೂರ್ತಿಯವರ ಸಾಧನೆಗಳ ಬಗ್ಗೆ ಮಾತನಾಡಿದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ನಗರ ಸಭಾ ಆರೋಗ್ಯಾಧಿಕಾರಿ ನೇತ್ರ, ನಿವೃತ್ತ ಮುಖ್ಯೋಪಾಧ್ಯಾಯಿನಿ ಶುಭಾಮಣಿ, ಸಂಸ್ಥೆಯ ಆಪ್ತ ಸಮಾಲೋಚಕಿ ಜಾಹ್ನವಿ, ಪ್ರೊ.ಶಶಿಕಲಾ, ಸೇವಾಯಾನ ಸಂಸ್ಥೆಯ ಅಧ್ಯಕ್ಷೆ ಪ್ರಭಾಮಣಿ, ಜೋನ್ ಕುಂದಾಲ್, ಯೋಗ ಒಕ್ಕೂಟದ ಅಧ್ಯಕ್ಷ ಬಿ.ಪಿ. ಮೂರ್ತಿ, ಸ್ಥಳೀಯ ಮುಖಂಡರಾದ ಲೇಡಿಟ್ ಮಂಜು, ಶೃತಿ, ಸವಿತಾ ಮತ್ತಿತರರು ಉಪಸ್ಥಿತರಿದ್ದರು.



ಸೇವಾಯಾನ ಸಂಸ್ಥೆಯ ವತಿಯಿಂದ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಲಲಿತಾ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಸಾಧಕರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ



ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರವು ಕಲೆಮನೆ ಸಭಾಂಗಣದಲ್ಲಿ 70ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ರಾಮನವಮಿ, ನೃತ್ಯೋತ್ಸವ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸಾಧಕರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಆಯೋಜಿಸಿತ್ತು. ಈ ವೇಳೆ ಜಿ.ಆರ್.ವಿಜಯಲಕ್ಷ್ಮಿ ಹಾಗೂ ರಾಜೇಶ್ವರಿ ರವಿ ಅವರನ್ನು ಭರತನಾಟ್ಯ ನೃತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅನುಪಮಾ ಸೇವೆ ಸಲ್ಲಿಸುತ್ತಿರುವ ಎಎಂಬಿ ಕಾಲೇಜಿನ ಪ್ರಾಂಶುಪಾಲರಾದ ಸೌಮ್ಯ ಎಸ್ ಅವರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ವಿವಿ ಪ್ರಸಕ್ತ ಬಜೆಟ್‌ಗೆ ಸಿಂಡಿಕೇಟ್ ಸದಸ್ಯ ಡಾ.ಚಂದ್ರಶೇಖರ್ ಆಕ್ಷೇಪ

ಮೈಸೂರು, ಮಾ.27(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ 2026–27ನೇ ಸಾಲಿನ 56.07 ಕೋಟಿ ರೂ. ಕೊರತೆ ಬಜೆಟ್ ಮಂಡನೆಯಲ್ಲಿ ಕಾನೂನು ನಿಯಮ ಉಲ್ಲಂಘನೆ, ಹಣಕಾಸು ಅಸಂಗತತೆಗಳು ಮತ್ತು ಪಾರದರ್ಶಕತೆಯಲ್ಲಿ ಲೋಪಗಳಾಗಿವೆ ಎಂದು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಆರೋಪಿಸಿದ್ದಾರೆ.

440.35 ಕೋಟಿ ರೂ. ವೆಚ್ಚ ಹಾಗೂ 56.07 ಕೋಟಿ ರೂ.ಕೊರತೆ(ಶೇ.16.5ರಷ್ಟು) ತೋರಿಸಲಾಗಿದೆ. ಹಣಕಾಸು ನಿಯಂತ್ರಣ ತತ್ವಗಳ ಪ್ರಕಾರ ಶೇ.3 ಕ್ಕಿಂತ ಕೊರತೆ ಹೆಚ್ಚಾಗಿರುವುದು ವಿವಿಯ ಹಣಕಾಸು ವ್ಯವಸ್ಥೆ ಹದಗೆಟ್ಟಿರುವುದನ್ನು ಸೂಚಿಸುತ್ತಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 46(1)(ಎ) ಸೆಕ್ಷನ್ ಪ್ರಕಾರ ಅನುದಾನವನ್ನು ವಿವಿ ನಿಧಿಯ ಭಾಗವಾಗಿ ತೋರಿಸಬೇಕು. ಆದರೆ, ಕಾನೂನು ಉಲ್ಲಂಘಿಸಿ, ಕೇಂದ್ರ ಸರ್ಕಾರ ಪಿಎಂ–ರೂಸಾ ಯೋಜನೆಯಡಿ ನೀಡಿರುವ 35 ಕೋಟಿ ರೂ. ಅನುದಾನವನ್ನು ಮರೆಮಾಚಲಾಗಿದೆ ಎಂದು ದೂರಿದ್ದಾರೆ.

ಪರೀಕ್ಷಾ ಚಟುವಟಿಕೆಗಳಿಗೆ ಹೊರಗುತ್ತಿಗೆ ನೀಡುವ ವೆಚ್ಚವನ್ನು 3 ಕೋಟಿ ರೂ.ನಿಂದ 8 ಕೋಟಿ ರೂಗೆ ಏರಿಕೆ ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ, ಒಪ್ಪಂದದ ವಿವರ ಮತ್ತು ಪಾವತಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇಲ್ಲ. ಬಜೆಟ್ ದಸ್ತಾವೇಜುಗಳಲ್ಲಿ, ಅಂಕಿ–ಅಂಶಗಳಲ್ಲಿ ಗಂಭೀರ ಅಸಂಗತತೆಗಳು ಕಂಡುಬಂದಿವೆ. ಅಲ್ಲದೆ ಸಂಶೋಧನಾ ಅನುದಾನದಲ್ಲಿ ಕುಸಿತ ಕಂಡುಬಂದಿರುವುದರಿಂದ ಪ್ರಸ್ತಕ ಸಾಲಿನ ವಿವಿ ಬಜೆಟ್‌ಗೆ ಅಸಮ್ಮತಿ ಸೂಚಿಸಿರುವುದಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.3.2026 ಶನಿವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ– ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಪಿಸಿಓಡಿ ತೊಂದರೆ, ಬೊಜ್ಜು ನಿವಾರಣೆ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಮೈಗ್ರೇನ್, ತಲೆನೋವು, ಕಿಡ್ನಿ ತಪಾಸಣೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ :** ಮಕ್ಕಳಿಗಾಗಿ ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಆಸ್ಪತ್ರೆ ಆವರಣ, ಕೆಬಿಎಲ್ ಬಡಾವಣೆ, ಬೆಳಗ್ಗೆ 8 ರಿಂದ.

■ **ವ್ಯವಹಾರ ನಿರ್ವಹಣಾ ಅಧ್ಯಯನ ವಿಭಾಗ, ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ :** ಗೋಲ್ಡನ್ ಜ್ಯೂಬಿಲಿ ಸಮಾರೋಪ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ,ಬೆಳಗ್ಗೆ 9.30 ರಿಂದ.

■ **ಅನ್ನಪೂರ್ಣ ಐ ಹಾಸ್ಪಿಟಲ್:** ಯುಗಾದಿ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, #199 ಸಾಯಿಪಾದಂ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.

■ **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ :** ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10 ರಿಂದ.

■ **ದಿ ಆರ್ಗನೈಸೇಷನ್ ಫಾರ್ ದ ಡೆವಲಪ್‌ಮೆಂಟ್ ಆಫ್ ಪೀಪಲ್ ಮತ್ತು ಮಹಿಳೋದಯ ಮಹಿಳಾ ಒಕ್ಕೂಟ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಅಧ್ಯಕ್ಷತೆ : ಮೈಸೂರಿನ ಧರ್ಮಾಧ್ಯಕ್ಷ ಡಾ. ಫ್ರಾನ್ಸಿಸ್ ಸೆರಾವೊ ಎಸ್‌ಜೆ, ಉದ್ಘಾಟನೆ : ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಅತಿಥಿಗಳು : ಜಿಪಂ ಉಪ ಕಾರ್ಯದರ್ಶಿ ಬಿ.ಎಂ. ಸವಿತಾ, ಬಸವರಾಜು, ಡಾ. ರಚನಾ ಮಹೇಶ್, ಉಮೇಶ್ ರೇವಂಕರ್, ವೈ.ಎಸ್. ಚಕ್ರವರ್ತಿ, ಹರ್ದಿಪ್ ಸಿಂಗ್ ತೂರ್, ಸಿಸ್ಟರ್ ನ್ಯಾನ್ಸಿ ಲೋಬೋ, ಬಸವರಾಜು, ಸ್ಥಳ: ಸಂತ ಫಿಲೋಮಿನಾ ಒಳಾಂಗಣ ಕ್ರೀಡಾಂಗಣ, ಬನ್ನಿಮಂಟಪ, ಬೆಳಗ್ಗೆ 10.30ಕ್ಕೆ.

■ **ಮಹಾರತ್ನ ಟ್ರಸ್ಟ್ :** ಬೆಳಗ್ಗೆ 11ಕ್ಕೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ರಾಜ್ಯ ಮಟ್ಟದ ಭಜನಾ ಸ್ಪರ್ಧೆ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಎಂ.ಡಿ. ಗೋಪಿನಾಥ್, ಶ್ರೀಮತಿ ದಿವ್ಯ ಸಚ್ಚಿದಾನಂದ, ಮೈಸೂರು ಮಹಾಲಿಂಗ, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ. ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಡಾ. ಆರ್. ನಳಿನಿ, ಮ.ನ. ಲತಾ ಮೋಹನ್, ಶ್ರೀಮತಿ ಇಂದಿರಾ ನಟರಾಜ್, ಅಧ್ಯಕ್ಷತೆ : ಸಿ.ವಿ. ಪಾರ್ಥಸಾರಥಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶ್ರೀ ಅಗ್ನಿಬನ್ನಿರಾಯ ಜಯಂತ್ಯುತ್ಸವ ಸಮಿತಿ :** ಶ್ರೀ ಅಗ್ನಿಬನ್ನಿರಾಯ ಜಯಂತಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ, ಉಪಸ್ಥಿತರು : ಪಶುಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್ ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಇತರರು. ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 11.30ಕ್ಕೆ

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ಪದವಿ ಪ್ರದಾನ ಸಮಾರಂಭ, ಪದವಿ ಪ್ರದಾನ ಭಾಷಣ : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು, ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು : ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ನಿರ್ದೇಶಕರಾದ ಡಾ. ಸಿ.ಕೆ. ರೇಣುಕಾರ್ಯ, ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರೀಮತಿ ಶ್ರುತಿ ಪೊಣಚ್ಚ, ಡೀನ್–ಶೈಕ್ಷಣಿಕ ಡಾ. ಹೆಚ್. ಶ್ರೀಧರ, ಸ್ಥಳ : ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ:** ನೂತನ ಕಟ್ಟಡ ಪ್ರಾರಂಭೋತ್ಸವ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ರೇಷ್ಮೆ ಸಚಿವ ಕೆ. ವೆಂಕಟೇಶ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ: ನಂ. 30/1, ಸೇಂಟ್ ಥಾಮಸ್ ಸ್ಕೂಲ್ ಹತ್ತಿರ, ವಿಶ್ವೇಶ್ವರನಗರ, ಸಂಜೆ 4ಕ್ಕೆ.

■ **ನಿರಂತರ ಫೌಂಡೇಷನ್, ಅಭಿರುಚಿ ಪ್ರಕಾಶನ :** ಮಹೇಶ್ ಎಲಕುಂಚವಾರ್ ಅವರ ನಾಟಕ ಪಾರ್ಟಿ ಪುಸ್ತಕ ಬಿಡುಗಡೆ ಸಮಾರಂಭ, ಅನುವಾದ : ಪ್ರಸಾದ್ ಕುಂದೂರು, ಉಪಸ್ಥಿತರು : ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಚಿದಂಬರರಾವ್ ಜಂಬೆ, ಜಯಂತ್ ಕಾಯ್ಕಿಣಿ, ಡಿ.ಎಸ್. ಚೌಗಲೆ, ಸತೀಶ್ ತಿಪಟೂರು, ಅಭಿರುಚಿ ಗಣೇಶ್, ಸ್ಥಳ: ವನರಂಗ, ರಂಗಾಯಣ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ : 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ –ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಟ್ ಕ್ರಾಪ್ ಟೆಕ್, ಮೈಸೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ ವಿ. ಭಟ್. ಹಾಗೂ ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ –ಡಾ.ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಆಯುಷ್ ವಾಣಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿದ್ವಾನ್ ರಾಜಕುಮಾರ್ ಭಾರತಿ–ಯುಗಳ ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ: ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ರೂಪಾಯಿ ನಿನ್ನ ನುಂಗಿತ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಮೀನು ಸಾಕಾಣಿಕೆ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿ ಕೃಷಿ ನವೋದ್ಯಮಗಳ ಪಾತ್ರ ಈ ಕುರಿತು ಮಾತನಾಡುತ್ತಾರೆ ವಿರಾಜಪೇಟೆ ತಾಲ್ಲೂಕು ಗುಯ್ಯಾ ಗ್ರಾಮದ ಅಕ್ವಾವೆಂಚರ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಪಿ.ಐ. ಶ್ಯಾಮ್ ಅಯ್ಯಪ್ಪ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ನಾಟಕ– ಯಶೋಧರ ಚರಿತೆ–ಜನ್ನನ ಕಾವ್ಯದ ನಾಟಕ ರೂಪ, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಶ್ರೀರಾಮ ನವಮಿ ಕಾರ್ಯಕ್ರಮಗಳು



■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ರಾಮನವಮಿ ಕಾರ್ಯಕ್ರಮಗಳು, ಬೆಳಗ್ಗೆ 9.30 ರಿಂದ ಶ್ರೀರಾಮ ಪಟ್ಟಾಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5 ರಿಂದ ವಿದುಷಿ ಶ್ರೀಮತಿ ಕೃಪಾಫಡ್ಕೆ ಅವರ ಶಿಷ್ಯರಿಂದ ಭರತನಾಟ್ಯ, ಸ್ಥಳ: ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ಶ್ರೀ ರಾಮಮಂದಿರ :** 60ನೇ ವರ್ಷದ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ಶ್ರೀ ರಾಮತಾರಕ ಹೋಮ, ಶ್ರೀ ಆಂಜನೇಯ ಹೋಮ, ಸಂಜೆ 6.30ಕ್ಕೆ ವಿದುಷಿ ಶ್ರೀಮತಿ ಡಾ. ವೀಣಾ ರವಿಕುಮಾರ್, ವಿದುಷಿ ಶ್ರೀಮತಿ ಡಾ. ವಾಣಿ ಸೇತು ಮಾಧವನ್ ಅವರಿಂದ ವೀಣಾವಾದನ, ವಿದ್ವಾನ್ ಡಾ. ಎಂ.ಜಿ. ನರಹರಿ ಅವರಿಂದ ವಯೋಲಿನ್ ವಾದನ, ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮಮಂದಿರ, 16ನೇ ಕ್ರಾಸ್, ಜಯನಗರ.

■ **ಕಲಾ ಉತ್ಸವ ಟ್ರಸ್ಟ್, ಮೈಸೂರು ಹಾಗೂ ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀ ರಾಮಮಂದಿರ :** ಶ್ರೀ ರಾಮನವಮಿ ಅಂಗವಾಗಿ ಮಕ್ಕಳ ವೇಷಭೂಷಣ ಸ್ಪರ್ಧೆ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು, ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಶ್ರೀ ರಾಮಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಶ್ರೀ ರಾಮ ಸೇವಾ ಮಂಡಲಿ :** 73ನೇ ವರ್ಷದ ಶ್ರೀ ರಾಮೋತ್ಸವ, ಸಂಜೆ 5.30ಕ್ಕೆ ಶಿವರಂಜನಿ ಭಜನಾ ಮಂಡಳಿ ಅವರಿಂದ ಭಜನೆ, ಸಂಜೆ 6.30ಕ್ಕೆ ವಿದ್ವಾನ್ ಮಾನಸನಯನ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ರಾಮಸೇವಾ ಮಂಡಲಿ, ಶ್ರೀ ಅವನಿಶಂಕರ ಮಠ, 4ನೇ ಮುಖ್ಯ ರಸ್ತೆ, ವಿದ್ಯಾರಣ್ಯಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟೆಬಲ್ ಟ್ರಸ್ಟ್ ಮೈಸೂರು ಉತ್ತರ :** 32ನೇ ಶ್ರೀರಾಮನವಮಿ ಸಂಗೀತೋತ್ಸವ–2026, ಸಂಜೆ 5.15 ರಿಂದ ಚಂದನ ಆರ್.ಸಂಜಯ್–ಶ್ರೀಲಲಿತ–ಸುಮುಖ್ ಅವರಿಂದ ಗಾಯನ, ಸಂಜೆ 6.15 ರಿಂದ ವಿದುಷಿ ಡಾ. ಎಸ್.ವಿ. ಸಹನ ಮತ್ತು ವಿದ್ವಾನ್ ಎ.ಪಿ. ಶ್ರೀನಿವಾಸ್ ಅವರಿಂದ ವೀಣಾ–ಪಿಟೀಲು ದ್ವಂದ್ವ ವಾದನ, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ. ಓಂಕಾರ್‌ರಾವ್–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ ಮೈಸೂರು.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತೋತ್ಸವ–2026, ವಿದ್ವಾನ್ ರಾಮಕೃಷ್ಣಮೂರ್ತಿ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಸಾಯಿ ರಕ್ಷಿತ್–ಪಿಟೀಲು, ವಿದ್ವಾನ್ ಡೆಲ್ಲಿ ಸಾಯಿರಾಮ್ –ಮೃದಂಗ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6ಕ್ಕೆ.

■ **ಶ್ರೀ ಶ್ರೀ ಹರಿದಾಸರ ಕೂಟ ಸಮಿತಿ :** ಶ್ರೀ ಚೆಲುವ ನಾರಾಯಣಸ್ವಾಮಿ ವೈರಮುಡಿ ಉತ್ಸವ ಕಾರ್ಯಕ್ರಮ, ಸ್ಥಳ: ಶ್ರೀ ರಾಮಮಂದಿರ, ಗಾಂಧಿನಗರ, ಸಂಜೆ 7ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 28 ಶನಿವಾರ 2026


46

ಸಂಪುಟ: 46 | ಸಂಚಿಕೆ: 336 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಸಾಲ ತೀರಿಸಿದ ಕುಮಾರಣ್ಣ ಬೇಕೋ... ಸಾಲ ಹೊರಿಸಿದ ಸಿದ್ದರಾಮಯ್ಯ ಬೇಕೋ...

ಕೋಟೆ ಜನರ ಮುಂದೆ ನಿಖಿಲ್ ಕುಮಾರಸ್ವಾಮಿ ಪ್ರಶ್ನೆ

ಹೆಚ್.ಡಿ.ಕೋಟೆ, ಮಾ.27– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಮತದಾರರು ಈಗಾಗಲೇ ಪಣ ತೊಟ್ಟಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ದುರಾಡಳಿತ ಹಾಗೂ ಜನ ವಿರೋಧಿ ನೀತಿಗಳೇ ಕಾರಣ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಸಂತೇಮಾಳದ ಆವರಣದಲ್ಲಿ ಶುಕ್ರವಾರ ತಾಲೂಕು ಜೆಡಿಎಸ್ ವತಿಯಿಂದ ಆಯೋಜಿಸಿದ್ದ 'ಜನರೊಂದಿಗೆ ಜನತಾದಳ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ವಿಧಾನ ಸಭಾ ಚುನಾವಣೆ



ನಿಖಿಲ್ ಕುಮಾರಸ್ವಾಮಿ ಅವರನ್ನ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಕರೆ ತರಲಾಯಿತು.

ಹೆಚ್.ಡಿ.ಕೋಟೆಗೂ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. 1989ರ ವಿಧಾನಸಭಾ ಚುನಾವಣೆಯಲ್ಲಿ ಕೇವಲ 2 ಕ್ಷೇತ್ರವನ್ನು ಪಕ್ಷ ಗೆದ್ದಾಗ ಹೆಚ್.ಡಿ.ಕೋಟೆ ಕ್ಷೇತ್ರವೂ ಒಂದಾಗಿತ್ತು. ಹಾಗಾಗಿ ದೇವೇಗೌಡರ ಕುಟುಂಬಕ್ಕೆ ಕೋಟೆ ಕೇವಲ ವಿಧಾನಸಭಾ ಕ್ಷೇತ್ರ ಆಗದೆ ಕ್ಷೇತ್ರದ ಜನರ ಬಗ್ಗೆ ವಿಶೇಷ ಒಲವನ್ನು ಹೊಂದಿದೆ. 2028ರ ಚುನಾವಣೆಗೆ ಕೆ.ಎಂ.ಕೃಷ್ಣನಾಯಕರೇ ಈ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಲಿದ್ದು, ಮುಂದಿನ ಎನ್‌ಡಿಎ ಮೈತ್ರಿಕೂಟದ ಸರ್ಕಾರದಲ್ಲಿ ಕೃಷ್ಣನಾಯಕರು ಶಾಸಕರಾಗಿರಲಿದ್ದಾರೆ.

- ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ.

ಇನ್ನೂ 2 ವರ್ಷ ಬಾಕಿ ಇರುವಂತೆಯೇ ಮತದಾರರು ಆಡಳಿತ ರೂಢ ಕಾಂಗ್ರೆಸ್ ವಿರುದ್ಧ ಮತ ಚಲಾಯಿಸಲು ಮುಂದಾಗಿರುವುದು ಸಮೀಕ್ಷೆಗಳ ಅಂಕಿ ಅಂಶಗಳಲ್ಲಿ ಕಂಡು ಬರುತ್ತಿದೆ ಎಂದರು.

ಹೆಚ್‌ಡಿಕೆ ಮತ್ತೊಮ್ಮೆ ಮುಖ್ಯಮಂತ್ರಿ: ನಮ್ಮ ಪಕ್ಷ ಒಂದು ಜಾತಿ, ಧರ್ಮಕ್ಕೆ ಸೀಮಿತವಾಗದೇ ಎಲ್ಲಾ ಜಾತಿ, ಧರ್ಮಗಳನ್ನು ಪ್ರೀತಿಸುವ ಏಕೈಕ ಪಕ್ಷವಾಗಿದ್ದು, ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಅತ್ಯಧಿಕ ಸ್ಥಾನಗಳನ್ನು ಗೆಲ್ಲುವ ಮೂಲಕ ಹೆಚ್.ಡಿ. ಕುಮಾರಸ್ವಾಮಿ ಅವರು ಮತ್ತೊಮ್ಮೆ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ಮೂಲಕ ಮುಖ್ಯಮಂತ್ರಿಯಾಗಲಿದ್ದಾರೆ ಎಂದರು.

ಕುಮಾರಣ್ಣ ಮುಖ್ಯಮಂತ್ರಿ ಆಗಬೇಕು ಅನ್ನುವುದು ನಿಖಿಲ್ ಕುಮಾರಸ್ವಾಮಿ ಭಾವನೆಯಲ್ಲ. ನಾನು ರಾಜ್ಯ ಪ್ರವಾಸ ಮಾಡಿದ್ದ ಸಂದರ್ಭದಲ್ಲಿ ಜನ ಕುಮಾರಣ್ಣ ಅವರ ಆಡಳಿತವನ್ನು ನೆನೆಸಿಕೊಂಡಿದ್ದನ್ನು ನಾನು ಹತ್ತಿರದಿಂದ ನೋಡಿದ್ದೇನೆ ಎಂದರು.

ಈ ಹಿಂದೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ರಾಜ್ಯದ ರೈತರ ಸಾವಿರಾರು ಕೋಟಿ ಸಾಲ ಮನ್ನಾ ಮಾಡಿ ರೈತರ ಹಿತ ಕಾಪಾಡುವ ಕೆಲಸ ಮಾಡಿದ್ದರು. ಅಂತಹ ಕುಮಾರಸ್ವಾಮಿ ಬೇಕೋ ಅಥವಾ ಪ್ರತಿ ಕುಟುಂಬದ ಮೇಲೆ 4 ಲಕ್ಷ ಸಾಲ ಹೊರಿಸಿರುವ ಸಿದ್ದರಾಮಯ್ಯ ಸರ್ಕಾರ ಬೇಕೋ ಎಂಬುದನ್ನು ನೀವೇ ನಿರ್ಧರಿಸಿ ಎಂದರು. ▶ 10ನೇ ಪುಟಕ್ಕೆ

ಇಂದಿನಿಂದ ಐಪಿಎಲ್ ಧಮಾಕ



ಬೆಂಗಳೂರಲ್ಲಿ ಆರ್‌ಸಿಬಿ–ಎಸ್‌ಆರ್‌ಹೆಚ್ ಉದ್ಘಾಟನಾ ಪಂದ್ಯ

ಮೈಸೂರು, ಮಾ.27(ವಿವಿಹೆಚ್)– ಇಂಡಿಯನ್ ಪ್ರೀಮಿಯರ್ ಲೀಗ್–2026ರ ಆವೃತ್ತಿಯು ನಾಳೆಯಿಂದ(ಮಾ.28) ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ನಡುವಿನ ಪಂದ್ಯದ ಮೂಲಕ 2026ರ ಐಪಿಎಲ್‌ಗೆ ಅದ್ಧೂರಿ ಚಾಲನೆ ದೊರೆಯಲಿದೆ.

ಕ್ರಿಕೆಟ್ ಅಭಿಮಾನಿಗಳು ಬರೋಬ್ಬರಿ 2 ತಿಂಗಳಿಗೂ ಅಧಿಕ ಕಾಲ 'ಇಂಡಿಯನ್ ಪ್ರೀಮಿಯರ್ ಲೀಗ್' ಕ್ರಿಕೆಟ್ ಹಬ್ಬ ಸಂಭ್ರಮಿಸಲು ಕಾದು ಕುಳಿತಿದ್ದಾರೆ. ಈ ಬಾರಿ 65 ದಿನಗಳ ಕಾಲ ನಡೆಯಲಿರುವ 19ನೇ ಆವೃತ್ತಿಯ ಐಪಿಎಲ್‌ನಲ್ಲಿ 10 ತಂಡಗಳು 70 ಪಂದ್ಯಗಳನ್ನು ಆಡಲಿವೆ. ಜೊತೆಗೆ ಪ್ಲೇಆಫ್‌ನಲ್ಲಿ 4 ಪಂದ್ಯಗಳು ಆಡಲಿವೆ. ಉದ್ಘಾಟನಾ ಪಂದ್ಯ ಆಡುತ್ತಿರುವ ಆರ್‌ಸಿಬಿ ಮತ್ತು ಎಸ್‌ಆರ್‌ಹೆಚ್ ತಂಡಗಳು ಐಪಿಎಲ್‌ನಲ್ಲಿ ಈವರೆಗೆ 26 ಬಾರಿ ಮುಖಾಮುಖಿಯಾಗಿವೆ. ಇದರಲ್ಲಿ 13 ಬಾರಿ ಎಚ್‌ಆರ್‌ಹೆಚ್ ಗೆದ್ದಿದ್ದರೆ, ಆರ್‌ಸಿಬಿ 11 ಬಾರಿ ಗೆಲುವು ದಾಖಲಿಸಿದೆ. 2 ಪಂದ್ಯಗಳು ರದ್ದಾಗಿವೆ.


ಇನ್ನೂ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹೈ ಸ್ಕೋರಿಂಗ್ ಪಂದ್ಯ ನಡೆಯಲಿದ್ದು, ಸಮಬಲದ ಕಾದಾಟವನ್ನು ಅಭಿಮಾನಿಗಳು ಕಣ್ತುಂಬಿಕೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ.

ಈ ಬಾರಿಯ ಉದ್ಘಾಟನಾ ಸಮಾರಂಭ ಇಲ್ಲ: 18ನೇ ಆವೃತ್ತಿಯ ಐಪಿಎಲ್ ಚಾಂಪಿಯನ್ ಆಗಿ ಸಂಭ್ರಮಿಸಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ▶ 10ನೇ ಪುಟಕ್ಕೆ

SSLCಯಲ್ಲಿ ಇನ್ನು ಹಿಂದಿ ಸೇರಿದಂತೆ

ತೃತೀಯ ಭಾಷೆಗಳು ನಗಣ್ಯ

- ಈ ಸಾಲಿನಿಂದಲೇ ತೃತೀಯ ಭಾಷಾ ಪರೀಕ್ಷೆ ಕಡ್ಡಾಯವಲ್ಲ
- ಹಾಗಾಗಿ ಎಸ್‌ಎಸ್‌ಎಲ್‌ಸಿ ಒಟ್ಟಾರೆ ಅಂಕ 625 ರಿಂದ 525ಕ್ಕೆ ಇಳಿಕೆ
- ತೃತೀಯ ಭಾಷೆಗಳಿಗೆ ಅಂಕ ನಮೂದಿಸದೇ ಬರೀ ಗ್ರೇಡ್ ಅನುಸರಣೆ





ಬೆಂಗಳೂರು, ಮಾ.27(ಕೆಎಂಶಿ)– ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಒತ್ತಡ ಕಡಿಮೆ ಮಾಡಲು ಇನ್ನು ಮುಂದೆ ಹಿಂದಿ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕ ಇರುವುದಿಲ್ಲ.

ಈ ವರ್ಷದಿಂದಲೇ ತೃತೀಯ ಭಾಷಾ ಪರೀಕ್ಷೆ ಕಡ್ಡಾಯವಲ್ಲ. ಈ ಸಂಬಂಧ ಸರ್ಕಾರ ಇನ್ನೆರಡು ದಿನದಲ್ಲೇ ಅದೇಶ ಹೊರಡಿಸಲಿದೆ.

ಸರ್ಕಾರದ ಈ ನಿರ್ಧಾರದಿಂದ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಒಟ್ಟಾರೆ ಅಂಕ 625ಕ್ಕೆ ಬದಲು 525ಕ್ಕೆ ಇಳಿಕೆ ಆಗಲಿದೆ. ತುರ್ತು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ತೃತೀಯ ಭಾಷೆಗಳಿಗೆ ಇನ್ನು ಮುಂದೆ ಅಂಕಗಳ ಬದಲು ಗ್ರೇಡ್ ನೀಡಿ, ಗ್ರೇಡಿಂಗ್ ವ್ಯವಸ್ಥೆಗೆ ಒಳಪಡಿಸಲಾಗುವುದು ಎಂದರು.

ಇನ್ನು ಮುಂದೆ ತೃತೀಯ ಭಾಷೆಯಲ್ಲಿ ಪಾಸ್ ಅಥವಾ ಫೇಲ್ ಎಂಬ ಪದ್ಧತಿ ಇರುವುದಿಲ್ಲ. ಅಂತಿಮ ಫಲಿತಾಂಶದ ಅಂಕಗಳಿಗೆ ತೃತೀಯ ಭಾಷೆ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ. ಬದಲಿಗೆ ಎ, ಬಿ, ಸಿ, ಡಿ ಹೀಗೆ ಗ್ರೇಡಿಂಗ್ ನೀಡಲಾಗುವುದು.

ಹಿಂದಿ, ಸಂಸ್ಕೃತ, ತುಳು, ಮರಾಠಿ, ಅರೇಬಿಕ್ ಸೇರಿದಂತೆ ಪಠ್ಯಕ್ರಮದಲ್ಲಿರುವ ಎಲ್ಲಾ ತೃತೀಯ ಭಾಷೆಗಳಿಗೂ ಈ ನಿಯಮ ಅನ್ವಯವಾಗಲಿದೆ.

ತೃತೀಯ ಭಾಷಾ ವಿಷಯ ಪರೀಕ್ಷೆಗೆ 100 ಅಂಕಗಳು ನಿಗದಿಪಡಿಸಿದ್ದರೂ, ಅಂಕಪಟ್ಟಿಯಲ್ಲಿ ಒಟ್ಟಾರೆ 525 ಅಂಕಗಳೆಂದು ನಮೂದಿಸಲಾಗುತ್ತದೆ.

ಹಿಂದಿ ಹೇರಿಕೆ ತಡೆಯುವ ಬಗ್ಗೆ ಮುಖ್ಯಮಂತ್ರಿಗಳೂ ಆಸಕ್ತಿ ತೋರಿದ್ದಾರೆ. ಕನ್ನಡ ಪರ ಸಂಘಟನೆಗಳೂ ಪಠ್ಯಕ್ರಮದಿಂದಲೇ ಹಿಂದಿ ಭಾಷೆ ಪಠ್ಯ ಕೈಬಿಡುವಂತೆ ಆಗ್ರಹಿಸಿವೆ.

ತೃತೀಯ ಭಾಷೆಯಲ್ಲೇ ಅತೀ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗಿ ಫಲಿತಾಂಶದ ಮೇಲೆ ಭಾರೀ ಪರಿಣಾಮ ಬೀರುತ್ತಿರುವುದಲ್ಲದೆ, ಹಿಂದಿ ತೇರ್ಗಡೆಯಾಗದ ವಿದ್ಯಾರ್ಥಿಗಳ ಕಲಿಕಾ ಭವಿಷ್ಯವೇ ಮಂಕಾಗುತ್ತಿತ್ತು. ಕಳೆದ ಸಾಲಿನಲ್ಲಿ ತೃತೀಯ ಭಾಷೆಯಲ್ಲಿ 1.64 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾದರೆ, ಇದರಲ್ಲಿ ಹಿಂದಿ ಪರೀಕ್ಷೆ ತೇರ್ಗಡೆ ಆಗದವರ ಸಂಖ್ಯೆ 1.48 ಲಕ್ಷ ಇದ್ದರು. ಇದನ್ನು ಗಮನದಲ್ಲಿಟ್ಟುಕೊಂಡು ತೃತೀಯ ಭಾಷೆ ಹಿಂದಿಗೆ ಅಂಕ ಬದಲು ಗ್ರೇಡ್ ನಿಗದಿಪಡಿಸಲಾಗುತ್ತಿದೆ. ಕನ್ನಡ ಪರ ಸಂಘಟನೆಗಳು ಹಿಂದಿ ಭಾಷಾ ಹೇರಿಕೆ ಅಗತ್ಯವಿಲ್ಲ ಎಂದು ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿ ಸಹ ದ್ವಿಭಾಷಾ ಸೂತ್ರ ತಂದರೆ ಒಳ್ಳೆಯದು ಎಂದಿದ್ದಾರೆ. ಈಗ ತ್ರಿಭಾಷಾ ಸೂತ್ರ ಇದೆ. ಇದನ್ನು ಬದಲಿಸಲು ಕಾನೂನು ತಜ್ಞರು ಮತ್ತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಶೀಘ್ರವೇ ನಿರ್ಧಾರ ಕೈಗೊಳ್ಳಲಾಗುವುದು.

ಕನ್ನಡ ಪರ ಸಂಘಟನೆಗಳು, ಹಿಂದಿ ಹೇರಿಕೆ ವಿರೋಧಿಸಿ ಪರೀಕ್ಷಾ ಕೇಂದ್ರಗಳಿಗೆ ಮುತ್ತಿಗೆ ಹಾಕುವುದು ಬೇಡ ಎಂದು ಮನವಿ ಮಾಡಿದ ಸಚಿವರು, ಹೋರಾಟಗಾರರ ಕೂಗಿನ ಪರವಾಗಿ ಸರ್ಕಾರ ಮೊದಲ ಹೆಜ್ಜೆ ಇಟ್ಟಿದೆ ಎಂದರು.

ಮಕ್ಕಳ ವಯೋಮಿತಿ: ಕಳೆದ ಗುರುವಾರ 1ನೇ ತರಗತಿ ಪ್ರವೇಶ ವಯೋಮಿತಿಯನ್ನು 6 ವರ್ಷಕ್ಕೆ ಬದಲಾಗಿ, 5 ವರ್ಷ 10 ತಿಂಗಳಿಗೆ ನಿಗದಿಪಡಿಸಲಾಗಿದೆ. ಎಲ್‌ಕೆಜಿ ಸೇರ್ಪಡೆಗೆ 3 ವರ್ಷ 10 ತಿಂಗಳು, ▶ 10ನೇ ಪುಟಕ್ಕೆ

ಪೆಟ್ರೋಲ್ ಅಬಕಾರಿ ಸುಂಕ 3 ರೂ.ಗೆ; ಡೀಸೆಲ್ ಮೇಲಿನ ಸುಂಕ ಶೂನ್ಯಕ್ಕೆ

ಕೇಂದ್ರ ಸರ್ಕಾರ ಮಹತ್ವದ ಘೋಷಣೆ

ಲಾಕ್‌ಡೌನ್ ಇಲ್ಲ; ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ

ನವದೆಹಲಿ: ಕೇಂದ್ರ ಸರ್ಕಾರವು ಇಂದು ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ 3 ರೂ.ಗೆ ಇಳಿಸಿ, ಡೀಸೆಲ್ ಮೇಲಿನ ಸುಂಕವನ್ನು ಸಂಪೂರ್ಣವಾಗಿ ರದ್ದು ಗೊಳಿಸಿದೆ. ಇದರಿಂದಾಗಿ ಕಚ್ಚಾ ತೈಲದ ದರ ಏರಿಕೆಯಿಂದ ಜನರ ಮೇಲೆ ಬೀಳಬಹುದಾಗಿದ್ದ ಹೆಚ್ಚುವರಿ ಹೊರೆ ತಪ್ಪಿಸಿದಂತಾಗಿದೆ.



ಇದರೊಂದಿಗೆ ಡೀಸೆಲ್ ರಫ್ತು ಮೇಲಿನ ವಿಂಡ್‌ಫಾಲ್ ತೆರಿಗೆಯನ್ನು ಲೀಟರ್‌ಗೆ 21.5 ರೂಪಾಯಿ ಎಂದು ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರ ಘೋಷಿಸಿದ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕ ಕಡಿತವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ವಾಗತಿಸಿದ್ದು, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ಕಚ್ಚಾ ತೈಲದ ಬೆಲೆ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಗ್ರಾಹಕರನ್ನು ಅದರ ಪರಿಣಾಮದಿಂದ ರಕ್ಷಿಸುವುದೇ ಈ ಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದ್ದಾರೆ.

ಲಾಕ್ ಡೌನ್ ಹೇರಿಕೆ ಇಲ್ಲ: ಇಂಧನ ಕೊರತೆ ಉಂಟಾಗುವ ಸಾಧ್ಯತೆ ಹಿನ್ನೆಲೆ ಸರ್ಕಾರ ಲಾಕ್ ಡೌನ್ ರೀತಿಯ ಕ್ರಮಗಳನ್ನು ಪರಿಗಣಿಸಬಹುದು ಎಂಬ ವದಂತಿಗಳನ್ನು ಸಚಿವೆ ನಿರ್ಮಲಾ ಸೀತಾರಾಮನ್ ತಳ್ಳಿಹಾಕಿದ್ದಾರೆ. ಯಾವುದೇ ಲಾಕ್ ಡೌನ್ ಇರುವುದಿಲ್ಲ. ಕೆಲವು ನಾಯಕರು ಲಾಕ್‌ಡೌನ್ ಬರುತ್ತದೆ, ಇಂಧನ ಕೊರತೆ ಉಂಟಾಗುತ್ತದೆ ಎಂದು ಹೇಳುತ್ತಿರುವುದು ನನಗೆ ಆಶ್ಚರ್ಯವಾಗುತ್ತಿದೆ. ಅವು ಸಂಪೂರ್ಣವಾಗಿ ಆಧಾರರಹಿತ ಹೇಳಿಕೆಗಳು. ರಾಜಕೀಯ ವಲಯದಲ್ಲಿರುವವರಿಂದ ಇಂತಹ ಮಾತುಗಳು ಕೇಳಿಬರುವುದು ಬೇಸರದ ಸಂಗತಿ. ಕೋವಿಡ್ ಸಮಯದಲ್ಲಿ ಕಂಡಂತೆ ಯಾವುದೇ ಲಾಕ್‌ಡೌನ್ ಇರಲಾರದು ಎಂದು ಸ್ಪಷ್ಟಪಡಿಸಿದರು. ▶ 10ನೇ ಪುಟಕ್ಕೆ

ಭಾರತದಲ್ಲಿ ಸಾಕಷ್ಟು ತೈಲ ದಾಸ್ತಾನಿದೆ: ವಾಣಿಜ್ಯ ಎಲ್‌ಪಿಜಿ ಪೂರೈಕೆ ಶೇ.70ಕ್ಕೆ ಹೆಚ್ಚಳ

ನವದೆಹಲಿ: ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ಅನಿಲ ಪೂರೈಕೆಗೆ ಅಡ್ಡಿಯಾಗಿರುವಂತೆಯೇ ಭಾರತದಲ್ಲಿ ಸಾಕಷ್ಟು ಕಚ್ಚಾ ತೈಲ ದಾಸ್ತಾನು ಇದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಶುಕ್ರವಾರ ಪುನರುಚ್ಚರಿಸಿದೆ.



ಜಂಟಿ ಅಂತರ ಸಚಿವಾಲಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ (ಮಾರ್ಕೆಟಿಂಗ್ ಮತ್ತು ಅನಿಲ ತೈಲ ಸಂಸ್ಕರಣಾ) ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ, ದೇಶದಲ್ಲಿ ಪ್ರಸ್ತುತ ಸೂಕ್ತ ರೀತಿಯಲ್ಲಿ ಕಚ್ಚಾ ತೈಲ ನಿರ್ವಹಣೆ ಮಾಡಲಾಗುತ್ತಿದೆ. ಮುಂದಿನ ಎರಡು ತಿಂಗಳುಗಳಿಗೆ ಆಗುವಷ್ಟು ಇಂಧನ ಪೂರೈಕೆಯಿದೆ. ಸಂಸ್ಕರಣಾಗಾರಗಳು ಪೂರ್ಣ ಅಥವಾ ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ದೇಶೀಯ ಎಲ್‌ಪಿಜಿ ಉತ್ಪಾದನೆಯು ಸುಮಾರು ಶೇ. 20 ರಷ್ಟು ಹೆಚ್ಚಾಗಿದೆ ಎಂದರು. ಇರಾನ್ ವಿರುದ್ಧ ▶ 10ನೇ ಪುಟಕ್ಕೆ

ದುಬಾರಿಯಾದರೂ ಮೈಸೂರಲ್ಲಿ ಸೌದೆ ಒಲೆಗೆ ಹೋಟೆಲ್‌ಗಳಿಂದ ಭಾರೀ ಡಿಮ್ಯಾಂಡ್

■ ನಾಲ್ಕು ವಿವಿಧ ರೀತಿಯ ಸೌದೆ ಒಲೆಗಳಿಗೆ ಬಹುಬೇಡಿಕೆ ■ ಕೆಲವೇ ದಿನಗಳೀಚೆಗೆ 8 ರಿಂದ 10 ಸಾವಿರ ಬೆಲೆ ಏರಿಕೆ ■ ಸೌದೆ ಒಲೆ ಮೊರೆ ಹೋದ ಹೋಟೆಲ್‌ಗಳು

ಮೈಸೂರು, ಮಾ.27(ಬಿಎಲ್‌ಯು)– ವಾಣಿಜ್ಯ ಸಿಲಿಂಡರ್ ಪೂರೈಕೆ ಕಡಿತಗೊಂಡಿರುವ ಹಿನ್ನೆಲೆಯಲ್ಲಿ ಹೋಟೆಲ್‌ನವರು ಅನಿವಾರ್ಯವಾಗಿ ಸೌದೆ ಒಲೆ ಮೊರೆ ಹೋಗಿದ್ದಾರೆ. ಕೆಲವು ದಿನಗಳ ತನಕ ಕೇಳುವವರೇ ಇಲ್ಲದ ಸೌದೆ ಒಲೆಗೆ ಈಗ ಎಲ್ಲಿಲ್ಲದ ಡಿಮ್ಯಾಂಡ್ ಬಂದಿದೆ.

ಮಧ್ಯಪ್ರಾಚ್ಯ ಯುದ್ಧದ ನಂತರ ದೇಶದಲ್ಲಿ ವಾಣಿಜ್ಯ ಸಿಲಿಂಡರ್ ಸರಬರಾಜು ಸಂಪೂರ್ಣ ಸ್ಥಗಿತವಾಗಿದೆ. ಹೋಟೆಲ್‌ನವರು ತಮ್ಮಲ್ಲಿ ಸ್ಟಾಕ್ ಇದ್ದ ಸಿಲಿಂಡರ್ ಬಳಸಿಕೊಂಡು ಹೇಗೋ ಮೂರ್ನಾಲ್ಕು ದಿನ ನಿರ್ವಹಣೆ ಮಾಡಿದರು. ತರುವಾಯ ದುಬಾರಿ ಬೆಲೆ ತೆತ್ತು ಕಾಳಸಂತೆಯಲ್ಲಿ ಸಿಲಿಂಡರ್ ಖರೀದಿಸಿ ಕೆಲವು ದಿನ ದೂಡಿದರು. ಆದರೆ, ಈಗ ಕಾಳಸಂತೆಯಲ್ಲೂ ಸಿಲಿಂಡರ್ ಸಿಗದ ಪರಿಸ್ಥಿತಿ ಎದುರಾಗಿದೆ. ನಿತ್ಯ 10 ರಿಂದ 15 ಸಿಲಿಂಡರ್ ಬಳಸುತ್ತಿದ್ದವರಿಗೆ ಈಗ 3 ಸಿಲಿಂಡರ್ ಮಾತ್ರವೇ ಲಭ್ಯವಿದೆ.



ಮೈಸೂರಿನಲ್ಲಿ ಭಾರೀ ಬೇಡಿಕೆ ಇರುವ ಸೌದೆ ಒಲೆಗಳು

ಹಾಗಾಗಿ ಅನಿವಾರ್ಯವಾಗಿ ಹೋಟೆಲ್‌ನವರು ಸೌದೆ ಒಲೆ ಮೊರೆ ಹೋಗಿದ್ದಾರೆ. ಮೈಸೂರಿನ ನಜರ್‌ಬಾದ್‌ನಲ್ಲಿರುವ ಸೂರ್ಯ ಸೌದೆ ಒಲೆ ಮಾಲೀಕರಾದ ಬಾನುಪ್ರಕಾಶ್, ಹಲವು ವರ್ಷಗಳಿಂದ ಸ್ವತಃ ಸೌದೆ ಒಲೆ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಹಾಗೆಯೇ ಬೆಂಗಳೂರಿನ ಚಂದಾಪುರದಲ್ಲಿರುವ ಕಾರ್ಖಾನೆಯಿಂದ ▶ 10ನೇ ಪುಟಕ್ಕೆ

ಒಂದು ಸಿಲಿಂಡರ್‌ಗೆ 200 ರೂ. ಸೌದೆ ಸಮ




ಒಂದು ಸಿಲಿಂಡರ್ ಬಳಕೆ, 200 ರೂಪಾಯಿ ಸೌದೆಗೆ ಸಮವಾಗಿದೆ. ಸಿಲಿಂಡರ್‌ಗಿಂತಲೂ ಸೌದೆ ಒಲೆ ಬಳಕೆಯಿಂದ ಬಹಳಷ್ಟು ಉಳಿತಾಯ ಮಾಡಬಹುದು. ಒಂದು ಸಿಲಿಂಡರ್‌ಗೆ ಈಗ 930 ರೂಪಾಯಿ ಇದೆ. ಇಷ್ಟು ಹಣ ಕೊಟ್ಟು ಸಿಲಿಂಡರ್ ಖರೀದಿ ಮಾಡುವ ಬದಲು ಕಡಿಮೆ ಖರ್ಚಿನಲ್ಲಿ ಸೌದೆಯಿಂದ ಆಹಾರ ತಯಾರಿಸಿದರೆ ಸುಮಾರು 700 ರೂಪಾಯಿ ಉಳಿತಾಯವಾಗಲಿದೆ. ಸೌದೆ ಒಲೆ ಬಳಸಿ ಎಂದು ಬಹಳಷ್ಟು ಜನರಿಗೆ ನಾನೇ ಸಲಹೆ ನೀಡುತ್ತಿದ್ದೆ. ಆದರೆ, ಯಾರೂ ನನ್ನ ಮಾತಿಗೆ ಕಿವಿಗೊಡುತ್ತಿರಲಿಲ್ಲ. ಆದರೆ ಈಗ ಅನಿವಾರ್ಯವಾಗಿ ಸೌದೆ ಒಲೆಗೆ ದುಂಬಾಲು ಬಿದ್ದಿದ್ದಾರೆ. **-ಭಾನುಪ್ರಕಾಶ್**

ಸೌದೆ ಸಿಗಲ್ಲ ಎಂಬ ಚಿಂತೆ ಬೇಡ; ಅದಕ್ಕೂ ಒಂದು ದಾರಿ ಇದೆ!

ಸೌದೆ ಒಲೆಯೇನೊ ಖರೀದಿ ಮಾಡಿದ್ದೇವೆ, ಸೌದೆಗೇನು ಮಾಡುವುದು ಎಂಬ ಚಿಂತೆ ಬೇಡ. ಅವಶ್ಯವಿರುವ ಸೌದೆ ಸುಲಭವಾಗಿ ದೊರೆಯುತ್ತದೆ.

ಮೈಸೂರಿನಲ್ಲಿ ನೂರಾರು ಸಾ ಮಿಲ್‌ಗಳಿವೆ. ಮನೆಗೆ ಬೇಕಾದ ಬಾಗಿಲು, ಚೌಕಟ್ಟು ಸೇರಿದಂತೆ ಇತರೆ ಅಗತ್ಯಗಳಿಗಾಗಿ ಮರ ಕತ್ತರಿಸಲಾಗುತ್ತದೆ. ಪ್ಲೈನಿಂಗ್ ಮಾಡುವಾಗ ಅದರ ಚಕ್ಕೆ, ಅಳಿದುಳಿದ ಭಾಗ ದೊರೆಯುತ್ತದೆ. ಜೊತೆಗೆ ಪೀಠೋಪಕರಣ ಮಾಡುವಾಗ ಬಳಕೆಗೆ ಬಾರದ ಕೆಲವು ಕಟ್‌ಪೀಸ್‌ಗಳಿರುತ್ತವೆ. ಸಾ ಮಿಲ್‌ಗಳಲ್ಲಿ ಇಂತಹ ಮರದ ಕಟ್‌ಪೀಸ್‌ಗಳನ್ನು ಸೌದೆ ಒಲೆಗೆ ಬಳಸಿಕೊಳ್ಳಬಹುದಾಗಿದೆ. ಇದುವರೆಗೆ ಸಾ ಮಿಲ್‌ಗಳ ಮರದ ಕಟ್‌ಪೀಸ್ ಕೇಳುವವರೇ ಇರಲಿಲ್ಲ. ಈಗ ಇದಕ್ಕೆ ಕೂಡ ಬೇಡಿಕೆ ಹೆಚ್ಚಾಗಿದ್ದು, ಬೆಲೆಯೂ ದುಬಾರಿಯಾಗಿದೆ. ಇನ್ನು ಸೌದೆ ಡಿಪೋಗಳಲ್ಲಂತೂ ಸೌದೆ ಬೆಲೆ ಕೈ ಸುಡುವಂತಿದೆ. ಇದೇನೆ ಇರಲಿ, ಬಹಳಷ್ಟು ವಸ್ತುಗಳು ನಮಗೆ ಅನುಪಯುಕ್ತ ಕೆಲಸಕ್ಕೆ ಬರುವುದಿಲ್ಲ ಎಂದೆಲ್ಲಾ ಮೂಗು ಮುರಿಯುತ್ತಿದ್ದವರು ಈಗ ಅನಿವಾರ್ಯವಾಗಿ ಅದರ ಮೇಲೆಯೇ ಅವಲಂಬಿತರಾಗಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಗುಂಡ ತನ್ನ ಹೆಂಡತಿಯನ್ನು ಪೆಟ್ರೋಲ್ ಬಂಕ್ ಸ್ವಲ್ಪ ದೂರದಲ್ಲೇ ಇಳಿಸಿ ಬೈಕಿಗೆ ಪೆಟ್ರೋಲ್ ಹಾಕಿಸುತ್ತಿದ್ದ.

ಪೆಟ್ರೋಲ್ ಬಂಕ್ ಹುಡುಗ : ಯಾಕ್ ಸರ್ ಮೇಡಂನ ಅಲ್ಲೇ ಇಳಿಸಿ ಬಂದು ಪೆಟ್ರೋಲ್ ಹಾಕಿಸಿಕೊಳ್ಳುತ್ತಿದ್ದೀರಿ?

ಗುಂಡ ಪೆಟ್ರೋಲ್ ಬಂಕ್‌ನಲ್ಲಿ ಹಾಕಿದ್ದ ಬೋರ್ಡ್ ತೋರಿಸಿದ. ಅದರ ಮೇಲೆ ಹೀಗೆ ಬರೆದಿತ್ತು. 'ಸ್ಫೋಟಕ ವಸ್ತುಗಳನ್ನು ದೂರ ಇರಿಸಿ'.

ಮೈಸೂರು ಮಿತ್ರ

ಶನಿವಾರ, ಮಾರ್ಚ್ 28, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಜೀವನದಲ್ಲಿ ಸಾಧನೆಗಿಂತ
ನೆಮ್ಮದಿಯಾಗಿರೋದು ಮುಖ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನಿಹನಿಗೂಡಿದರೆ ಹಳ್ಳ; ತೆನೆತೆನೆಗೂಡಿದರೆ ಬಳ್ಳ

ನಿಮ್ಮ ಪತ್ರಗಳು

ಅವಘಡಕ್ಕೂ ಮುನ್ನ ವಿದ್ಯುತ್ ಕಂಬ ಸರಿಪಡಿಸಿ



ಮಾನ್ಯರೆ,

ಮೈಸೂರು ತಾಲೂಕು, ಜಯಪುರ ಹೋಬಳಿ ಗೋಪಾಲಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನಗರ್ತಹಳ್ಳಿ ಗ್ರಾಮದಲ್ಲಿ ವಿದ್ಯುತ್ ಕಂಬ ಅಪಾಯಕಾರಿ ಸ್ಥಿತಿಯಲ್ಲಿದೆ. ಹಲವು ವರ್ಷಗಳಿಂದ ತುಂಬಾ ವಾಲಿದ್ದು, ಮನೆಗಳ ಮೇಲೆ ಬೀಳುವ ಸ್ಥಿತಿಯಲ್ಲಿದೆ. ಇದರ ಫೋಟೋ ಸಹಿತ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕೆಲ ದಿನಗಳ ಹಿಂದೆ ಚರಂಡಿ ಕಾಮಗಾರಿ ನಡೆಯುತ್ತಿದ್ದ ಪರಿಣಾಮ ಈ ಅಪಾಯಕಾರಿ ಕಂಬದ ಬುಡದಲ್ಲಿ ಮಣ್ಣು ಸಡಿಲವಾಗಿದೆ. ಜೋರು ಗಾಳಿ ಬೀಸಿದರೆ ಉರುಳಿಬೀಳುವ ಆತಂಕ ಸೃಷ್ಟಿಯಾಗಿದೆ. ಅನಾರೋಗ್ಯದಿಂದ ತಂದೆ ಹಾಸಿಗೆ ಹಿಡಿದಿದ್ದು, ತುಂಬಾ ಕಷ್ಟದಿಂದ ಜೀವನ ನಡೆಸುತ್ತಿದ್ದೇವೆ. ಏನಾದರೂ ಕಂಬ ಮನೆ ಮೇಲೆ ಬಿದ್ದು ಅವಘಡ ಸಂಭವಿಸಿದರೆ ಯಾರು ಹೊಣೆ? ದಯಮಾಡಿ ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಅಪಾಯಕಾರಿ ವಿದ್ಯುತ್ ಕಂಬ ಸರಿಪಡಿಸಬೇಕೆಂದು ಮನವಿ ಮಾಡುತ್ತೇನೆ.

–ಮಣಿಕಂಠ ಚಿಕ್ಕೀರಯ್ಯನಗರ್ತಹಳ್ಳಿ ಗ್ರಾಮ, ಮೈಸೂರು ತಾ.

ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಐಪಿಎಲ್ ಪಂದ್ಯಾವಳಿ ಎಷ್ಟು ಸಮಂಜಸ



ಮಾನ್ಯರೆ,

ಪಶ್ಚಿಮ ಏಷ್ಯಾದ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧ ಇಂದು 28ನೇ ದಿನಕ್ಕೆ ಕಾಲಿಟ್ಟಿದೆ. ಸದ್ಯದ ಪರಿಸ್ಥಿತಿಯನ್ನು ಗಮನಿಸಿದರೆ ಅಮೆರಿಕ ತನ್ನ ಪ್ರತಿಷ್ಠೆಗಾಗಿ ನಡೆಸುತ್ತಿರುವ ಈ ಯುದ್ಧ ಸದ್ಯಕ್ಕಂತೂ ನಿಲ್ಲುವ ಸೂಚನೆಗಳು ಕಾಣುತ್ತಿಲ್ಲ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ದಿನಗಳು ಕೋವಿಡ್ ಕಾಲಘಟ್ಟದ ಪರಿಸ್ಥಿತಿಗಿಂತಲೂ ಭೀಕರವಾಗಿರಬಹುದು, ಅದನ್ನು ಎದುರಿಸಲು ದೇಶದ ಜನತೆ ಸಿದ್ಧರಾಗಿರಬೇಕು ಎಂದು ಈಗಾಗಲೇ ಕರೆ ನೀಡಿದ್ದಾರೆ. ಅಲ್ಲದೆ, ಕೆಲವು ಸಾಮಾಜಿಕ ಜಾಲ ತಾಣಗಳಲ್ಲಿ ದೇಶದಲ್ಲಿ ಮತ್ತೆ ಲಾಕ್‌ಡೌನ್ ಜಾರಿಯಾಗಬಹುದೆಂಬ ಸುದ್ದಿ ಹರಿದಾಡುತ್ತಿವೆ.

ದೇಶದ ಇಂದಿನ ಈ ಬಿಕ್ಕಟ್ಟುಗಳ ನಡುವೆ ಇದೇ 28/03/2026 ಶನಿವಾರದಿಂದ ಐಪಿಎಲ್ ಹೆಸರಿನ ಸಾವಿರಾರು ಕೋಟಿಗಳ ಶ್ರೀಮಂತರ ಜೂಜಿನ ಕ್ರಿಕೆಟ್ ಆರಂಭವಾಗುತ್ತಿದೆ. ಇದೊಂದು ದೇಶದಲ್ಲಿ ಬಹುದೊಡ್ಡ ಜೂಜಿನ ದಂಧೆಯಾಗಿದೆ. ಕೆಲವು ಗ್ರಾಮೀಣ ಪ್ರದೇಶದಲ್ಲಿ ಐಪಿಎಲ್ ಚಟಕ್ಕೆ ಬಿದ್ದು ಮನೆ–ಮಠ ಕಳೆದು ಕೊಂಡವರಿದ್ದಾರೆ. ಇಂತಹ ಸಂದಿಗ್ಧ ಸಂದರ್ಭದಲ್ಲೂ ಐಪಿಎಲ್ ಬೇಕೆ? ಯಾರೋ ನಾಲ್ಕಾರು ಶ್ರೀಮಂತರ ಮೋಜು–ಮಸ್ತಿಗೋಸ್ಕರ ಐಪಿಎಲ್ ಅವಶ್ಯಕತೆ ಏನಿದೆ?. ಅಲ್ಲದೆ, ನಿನ್ನೆ ಮುಕ್ತಾಯಗೊಂಡ ವಿಧಾನಸಭಾ ಅಧಿವೇಶನದಲ್ಲಿ ಹಲವು ಶಾಸಕರು ನಮಗೆ ಐಪಿಎಲ್ ಫ್ರೀ ಪಾಸ್ ಕೊಡಿಸಿ ಎಂದು ಸಭಾಧ್ಯಕ್ಷರನ್ನು ಗೋಗರೆದಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಪ್ರಜ್ಞಾವಂತ ನಾಗರಿಕರು ಈ ಬಾರಿಯ ಐಪಿಎಲ್ ಅನ್ನು ರದ್ದುಪಡಿಸುವಂತೆ ಸರ್ಕಾರಕ್ಕೆ ಒತ್ತಡ ಹಾಕಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಮೂಕ ಜೀವಿಗಳಿಗೆ ನೆರವಾಗೋಣ

ಮಾನ್ಯರೇ,



ಮಾರ್ಚ್ ತಿಂಗಳು ಕಳೆಯುವ ಮೊದಲೇ ಸೂರ್ಯ ದೇವ ತನ್ನ ಪ್ರತಾಪವನ್ನು ತೋರಿಸಲಾರಂಭಿಸಿದ್ದಾನೆ. ಬಿಸಿಲ ಬೇಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಕೆರೆ, ಕಟ್ಟೆಗಳು ಬತ್ತುತ್ತಿವೆ. ಮನುಷ್ಯರಾದ ನಮಗೆ ಬಾಯಾರಿಕೆಯಾದರೆ ಮನೆಯಲ್ಲೇ ಅಥವಾ ಅಂಗಡಿಗೆ ಹೋಗಿ ಪಡೆದು ನೀರು ಕುಡಿಯುತ್ತೇವೆ, ಆದರೆ ಒಂದು ಹನಿ ನೀರಿಗಾಗಿ ಕಿಲೋಮೀಟರ್‌ಗಟ್ಟಲೆ ಅಲೆಯುವ ನಮ್ಮ ಸುತ್ತಮುತ್ತಲಿನ ಆ ಮೂಕ ಪ್ರಾಣಿ–ಪಕ್ಷಿಗಳ ಪಾಡೇನು? ಈ ಬೇಸಿಗೆಯಲ್ಲಿ ಕೇವಲ ನಮ್ಮ ಬಗ್ಗೆ ಮಾತ್ರವಲ್ಲದೆ, ಈ ಭೂಮಿಯ ಸಹಜೀವಿಗಳ ಬಗ್ಗೆಯೂ ನಮಗೆ ಕಾಳಜಿ ಇರಲಿ.

ಈ ನಿಟ್ಟಿನಲ್ಲಿ ನಾವು ದೊಡ್ಡ ಮಟ್ಟದ ಸಮಾಜ ಸೇವೆ ಮಾಡದಿದ್ದರೂ, ಮನೆಯ ತಾರಸಿಯ ಮೇಲೆ ಅಥವಾ ಬಾಲ್ಕನಿಯಲ್ಲಿ ಒಂದು ಮಣ್ಣಿನ ಪಾತ್ರೆಯಲ್ಲಿ ಪ್ರತಿದಿನ ಶುದ್ಧವಾದ ನೀರನ್ನು ಇಡೋಣ. ಬೀದಿ ಬದಿಯ ನಾಯಿಗಳು ಅಥವಾ ಹಸು–ಕರುಗಳು ನೆರಳಿಗಾಗಿ ಮನೆಯ ಮುಂದೆ ಬಂದರೆ ಅವುಗಳನ್ನು ಓಡಿಸದೆ, ಸಾಧ್ಯವಾದರೆ ನೀರು ಮತ್ತು ಅತಿಯಾಗಿ ಬಿಸಿಯಿರದ ಆಹಾರವನ್ನು ನೀಡೋಣ. ನಮ್ಮ ಇಂತಹ ಪುಟ್ಟ ಹವ್ಯಾಸಗಳು ಇನ್ನೊಂದು ಜೀವದ ಪ್ರಾಣ ಉಳಿಸಬಹುದು. ಆದುದರಿಂದ, ನಾವೆಲ್ಲರೂ ನಮ್ಮ ಶಕ್ತ್ಯಾನುಸಾರ ಈ ಮೂಕ ಜೀವಿಗಳಿಗೆ ನೆರವಾಗೋಣ ಎಂದು ಈ ಮೂಲಕ ಮನವಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000


ಚಿಂತನೆ

ಅಯ್ಯೋ...! ಅಧಃಪತನದತ್ತ ಆದರ್ಶದ ತಲೆಮಾರು!!

ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಮೂವತ್ತು ವರ್ಷಗಳಿಗೆ ಒಂದು ತಲೆಮಾರು ಎಂದು ಲೆಕ್ಕ ಹಾಕುವ ಸಂಪ್ರದಾಯವಿದೆ. ಈ ಮೂವತ್ತು ವರ್ಷವನ್ನು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಹುಟ್ಟಿ, ಬೆಳೆದು, ತಮ್ಮ ಮಕ್ಕಳನ್ನು ಪಡೆಯುವ ಸರಾಸರಿ ಸಮಯ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಸಾಮಾನ್ಯವಾಗಿ ಪೂರ್ಣಾಯಸ್ಸು ಹೊಂದಿದ ಒಬ್ಬ ವ್ಯಕ್ತಿ ತಾನು ಬದುಕಿರುವಾಗಲೇ ತನ್ನನ್ನೂ ಸೇರಿ ಮೂರು ತಲೆಮಾರುಗಳನ್ನು ಕಾಣಬಹುದು. ಈ ರೀತಿಯ ತಲೆಮಾರಿನವರ ಮನಸ್ಥಿತಿ ಸಾಮಾನ್ಯವಾಗಿ ಒಂದೇ ರೀತಿಯಾಗಿರುತ್ತದೆ. ಇದಕ್ಕೆ ಅವರು ಬೆಳೆದ ಅಂದಿನ ಸಾಮಾಜಿಕ ವ್ಯವಸ್ಥೆ ಹಾಗೂ ಕುಟುಂಬದ ಕಟ್ಟುಪಾಡುಗಳೂ ಕಾರಣವಾಗಿರಬಹುದು. ಸಾಮಾನ್ಯವಾಗಿ ದೀರ್ಘಾಯಸ್ಸು ಎಂದರೆ ಸುಮಾರು 66 ರಿಂದ 70 ವರ್ಷ ದಾಟುವುದು ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಇಂದು ಸುಮಾರು 60–70 ವರ್ಷ ದಾಟಿದವರು ಮೂರನೆಯ ತಲೆಮಾರಿನವರು ಎಂದು ಪರಿಗಣಿತರಾಗುತ್ತಾರೆ. ಸಾಮಾನ್ಯವಾಗಿ ಮನುಷ್ಯನ ಗರಿಷ್ಠ ಆಯಸ್ಸು 120 ವರ್ಷಗಳು. ಅದಕ್ಕಿಂತ ವಯಸ್ಸಾದವರು ಅಲ್ಲಲ್ಲಿ ಕಂಡುಬರುತ್ತಾರಾದರೂ ಅವರ ಜನ್ಮ ದಾಖಲೆಗಳನ್ನು ಅನುಮಾನದಿಂದ ನೋಡಲಾಗುತ್ತದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ 80–90 ವರ್ಷ ಬದುಕಿದ್ದರೆ ಅದನ್ನು ಪವಾಡ ಸದೃಶ ಎಂಬಂತೆ ನೋಡಲಾಗುತ್ತಿದೆ.

ಈ ಹಿಂದೆ ಪ್ರಖ್ಯಾತ ಪ್ರವಚನಕಾರರಾಗಿದ್ದ ಪ್ರೊ. ಕೆ.ಎಸ್.ನಾರಾಯಣಾ ಚಾರ್ಯರು, ರಾಮಾಯಣ ಪ್ರವಚನವನ್ನು ಶ್ರೀರಾಮನು ಸಂಚರಿಸಿದ ಸ್ಥಳಗಳಲ್ಲಿಯೇ, ಅಲ್ಲಿಯ ವಿಶೇಷತೆ ಹಾಗೂ ರಾಮಾಯಣ ಸಂಬಂಧಿ ವಿಷಯಗಳನ್ನು ತಿಳಿಸಲು ಒಂದಷ್ಟು ಆಸಕ್ತ ಆಸ್ತಿಕ ಜನರನ್ನು ಪ್ರವಾಸದ ರೀತಿಯಲ್ಲಿ ಕರೆದುಕೊಂಡು ಹೋಗಿದ್ದರು. ಹಾಗೆ ಹೋದಾಗ, ಒಂದು ಸ್ಥಳದಲ್ಲಿ ಎಲ್ಲರಿಗೂ ಶ್ರೀರಾಮನ ಪಾದುಕೆಗಳನ್ನು ನೀಡಿದರು. ಆ ಪಾದುಕೆಗಳನ್ನು ಒಬ್ಬರು ಪ್ರಾಯೋಜಿಸಿದ್ದರು. ಹೀಗೆ ನೀಡಿದ ಪಾದುಕೆಗಳು ಸುಮಾರು 13 ಅಂಗುಲ (ಒಂದು ಅಡಿಗೂ ಮೀರಿದ್ದು) ಉದ್ದವಿತ್ತು. ಸಾಮಾನ್ಯವಾಗಿ ಇಂದಿನ ಜನಾಂಗದಲ್ಲಿ ದೊಡ್ಡ ಪಾದ ಎಂದರೆ ಹತ್ತು ಅಥವಾ ಹನ್ನೊಂದು ಅಂಗುಲ. ಸರಾಸರಿ ಒಂಬತ್ತು ಅಂಗುಲದ ಪಾದಗಳೇ ಜಾಸ್ತಿ. ಹಾಗಾಗಿ ಈ ಪಾದುಕೆಗಳನ್ನು ಪಡೆದವರು ಇದೇನು ಇಷ್ಟೊಂದು ಬೃಹತ್ ಪಾದುಕೆಗಳು? ಎಂದು ಪ್ರಶ್ನಿಸಿದಾಗ, ಅವರು ನೀಡಿದ ಉತ್ತರ ಆಶ್ಚರ್ಯಕರವಾಗಿತ್ತು. ಶ್ರೀರಾಮ ಹಾಗೂ ಆ ಕಾಲದ ವ್ಯಕ್ತಿಗಳು ಹನ್ನೆರಡು ಅಡಿಗಳಿಗಿಂತ ಎತ್ತರವಾಗಿದ್ದರು. ಅದರ ಬಗ್ಗೆ ವರ್ಣನೆಗಳಿವೆ. ಹಾಗಾಗಿ ಈ ಪಾದುಕೆಯನ್ನು ದೊಡ್ಡದಾಗಿ ಅಣಿಗೊಳಿಸಲಾಗಿದೆ. ಶ್ರೀರಾಮ ಇದ್ದದ್ದು ತ್ರೇತಾಯುಗ ಅದಕ್ಕೆ ಹಿಂದಿನದ್ದು ಸತ್ಯಯುಗ. ಆ ಯುಗದಲ್ಲಿ ಜನರು ಹದಿನೈದು ಅಡಿಗಳಿಗಿಂತ ಎತ್ತರವಾಗಿದ್ದರು. ಒಂದೊಂದು ಯುಗ ಮುಗಿದಂತೆ ಮನುಷ್ಯನ ಎತ್ತರ ಕಡಿಮೆಯಾಗುತ್ತಿದೆ. ಈಗ ಕಲಿಯುಗದಲ್ಲಿ ನಮ್ಮ ಗರಿಷ್ಠ ಎತ್ತರ ಆರು ಅಡಿಗಳಾಗಿವೆ. ಮುಂದಿನ ದಿನಗಳಲ್ಲಿ ಈ ಎತ್ತರ ಕಡಿಮೆಯಾಗುತ್ತದೆ ಎಂದು ಮಾಹಿತಿ ನೀಡಿದ್ದರು. ಅದರಲ್ಲೂ ಹನುಮಂತನಂತಹ ವ್ಯಕ್ತಿಗೆ ದೇಹವನ್ನು ಹಿಗ್ಗಿಸಿಕೊಳ್ಳುವ ಶಕ್ತಿ ಇತ್ತು ಅದರಿಂದಾಗಿ ಅವನು ದೊಡ್ಡದಾಗಿ ಬೆಳೆದು ರಾಮ, ಲಕ್ಷ್ಮಣರನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ಸಾಗಿದ್ದ ಎಂಬ ಮಾಹಿತಿಯನ್ನೂ ಅವರು ನೀಡಿದ್ದರು. ಅಂದರೆ ಯುಗದಿಂದ ಯುಗಕ್ಕೆ ಮಾನವನ ಬೆಳವಣಿಗೆ ಹಾಗೂ ಆಯಸ್ಸು ಕಡಿಮೆಯಾಗುತ್ತಾ ಹೋಗುತ್ತಿದೆ.

ಇದು ಪ್ರಕೃತಿ ನಿಯಮ. ಹಾಗಾಗಿ ತಲೆಮಾರಿನಿಂದ ತಲೆಮಾರಿಗೆ ನಮ್ಮ ಬೆಳವಣಿಗೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತಿದೆ. ಈಗ 70–80 ವರ್ಷ ದಾಟಿದವರನ್ನು ಕೇಳಿದಾಗ ಅವರು ತಮ್ಮ ಹಿಂದಿನ ತಲೆಮಾರಿನವರು ಎಷ್ಟು ಆರೋಗ್ಯವಂತರಾಗಿದ್ದರು, ಎಷ್ಟು ಸಮಾಜ ಮುಖಿಯಾಗಿದ್ದರು, ಆ ಕಾಲ ಎಷ್ಟು ಸುಭಿಕ್ಷವಾಗಿತ್ತು ಎಂದು ಹೇಳುತ್ತಾರೆ. ಇತ್ತೀಚೆಗೆ ಒಂದು ಗೋಷ್ಠಿಯಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರ ಸಾಧನೆಗೆ ಅವಕಾಶಗಳು ಹಾಗೂ ಸಾಧನೆಗಳು ಎಂಬ ಬಗ್ಗೆ ಮಾತುಗಳಿದ್ದವು. ಅದರಲ್ಲಿ



> ನಾವೇ ಈಗ 40–50 ವರ್ಷದವರಾಗಿದ್ದರೆ ನಮ್ಮ ಬಾಲ್ಯದ ದಿನಗಳು ಹಾಗೂ ಮನೆಯ ವಾತಾವರಣ ಗಮನಿಸಿದರೆ, ಆಗ ಯಾವುದೇ ಆಧುನಿಕ ಸಲಕರಣೆಗಳು ಇರಲಿಲ್ಲ. ಮನೆಯವರೆಲ್ಲಾ ಒಟ್ಟಾಗಿ ತಿನ್ನುತ್ತಿದ್ದುದು, ಮಲಗುತ್ತಿದ್ದುದು ನಮಗೆ ನೆನಪಾಗಿ ವಿಸ್ಮಯವೆನಿಸುತ್ತದೆ. ಅಷ್ಟಾದರೂ ಆ ಕಾಲವೇ ಚೆನ್ನಾಗಿತ್ತು, ನಿಜವಾಗಿಯೂ ನಾವು ನಮ್ಮ ಬಾಲ್ಯವನ್ನು ಸಂತೋಷವಾಗಿಯೇ ಕಳೆದೆವು ಎಂದೇ ಹೇಳುತ್ತಾರೆ. ಇನ್ನು ಅದಕ್ಕಿಂತ ಹಿರಿಯರಾದವರು ತಮ್ಮ ಬಾಲ್ಯದ ದಿನಗಳು ಅದಕ್ಕಿಂತಲೂ ಸಂತೋಷಕರವಾಗಿತ್ತು. ಈಗ ಬರೀ ಥಳಕು–ಬಳಕಿನ ಜೀವನ ಎಂದೇ ಹೇಳುತ್ತಾರೆ.

ಸಾಧನೆ ಎಂದರೆ ದೊಡ್ಡ ಪ್ರಶಸ್ತಿ ಪಡೆಯುವುದು ಮಾತ್ರವಲ್ಲ, ನಾವು ಇತರರಿಗಿಂತ ತುಸು ಭಿನ್ನವಾದವರು ಎಂಬುದೂ ಒಂದು ಸಾಧನೆಯೇ ಎಂಬ ಮಾತುಗಳು ಕೇಳಿಬಂದವು.

ಅದರಲ್ಲಿ ಸುಮಾರು 65 ವರ್ಷದ ಒಬ್ಬ ಮಹಿಳೆ ಮಾತನಾಡುತ್ತಾ ತಮಗೆ ತಮ್ಮ ತಾಯಿಯೇ ಆದರ್ಶ. ಹೇಗೆಂದರೆ ಅವರು ಅವರ ತಂದೆ–ತಾಯಿಯ 27ನೆಯ ಮಗಳು ಎಂದು ಹೇಳಿದರು. ಮುಂದೆ ಅವರೂ ಹತ್ತು ಮಕ್ಕಳ ತಾಯಿಯಾದರು. ನಮ್ಮ ತಂದೆ ಒಬ್ಬ ಶಾಲಾ ಶಿಕ್ಷಕರು. ಆದರೂ ಇಷ್ಟು ಮಕ್ಕಳನ್ನು ಅವರ ಅಲ್ಪ ವೇತನದಲ್ಲಿಯೇ ನಿಭಾಯಿಸುತ್ತಿದ್ದರು. ನಮಗೆ ಆಗ ಯಾವುದೂ ಕೊರತೆ ಎನಿಸುತ್ತಿರಲಿಲ್ಲ ಎಂದು ಹೇಳಿದರು. ಇದು ಉತ್ಪ್ರೇಕ್ಷೆಯ ಮಾತಾಗಿರಲಿಲ್ಲ. ಇಂದು ಒಂದೆರಡು ಮಕ್ಕಳನ್ನು ಹೆತ್ತಲ್ಲಿ ಮಹಿಳೆಯರು ಬಸವಳಿದಿರುತ್ತಾರೆ. ಹಾಗಿದ್ದರೆ ಹಿಂದಿನವರು ಹೇಗೆ ಡಜನ್‌ಗಟ್ಟಲೆ ಮಕ್ಕಳನ್ನು ಹಡೆಯುತ್ತಿದ್ದರು? ವಿಸ್ಮಯವೇ ಸರಿ!

ಇದೆಲ್ಲಾ ಕಾಲಕ್ಕೆ ಅನುಗುಣವಾಗಿ ಆಗುತ್ತಿರುತ್ತದೆ ಎಂಬುದನ್ನು ಗಮನಿಸಬೇಕು. ನಾವೇ ಈಗ 40–50 ವರ್ಷದವರಾಗಿದ್ದರೆ ನಮ್ಮ ಬಾಲ್ಯದ ದಿನಗಳು ಹಾಗೂ ಮನೆಯ ವಾತಾವರಣ ಗಮನಿಸಿದರೆ, ಆಗ ಯಾವುದೇ ಆಧುನಿಕ ಸಲಕರಣೆಗಳು ಇರಲಿಲ್ಲ. ಮನೆಯವರೆಲ್ಲಾ ಒಟ್ಟಾಗಿ ತಿನ್ನುತ್ತಿದ್ದುದು, ಮಲಗುತ್ತಿದ್ದುದು ನಮಗೆ ನೆನಪಾಗಿ ವಿಸ್ಮಯವೆನಿಸುತ್ತದೆ. ಅಷ್ಟಾದರೂ ಆ ಕಾಲವೇ ಚೆನ್ನಾಗಿತ್ತು, ನಿಜವಾಗಿಯೂ ನಾವು ನಮ್ಮ ಬಾಲ್ಯವನ್ನು ಸಂತೋಷವಾಗಿಯೇ ಕಳೆದೆವು ಎಂದೇ ಹೇಳುತ್ತಾರೆ. ಇನ್ನು ಅದಕ್ಕಿಂತ ಹಿರಿಯರಾದವರು ತಮ್ಮ ಬಾಲ್ಯದ ದಿನಗಳು ಅದಕ್ಕಿಂತಲೂ ಸಂತೋಷಕರವಾಗಿತ್ತು. ಈಗ ಬರೀ ಥಳಕು–ಬಳಕಿನ ಜೀವನ ಎಂದೇ ಹೇಳುತ್ತಾರೆ.

ಈಗ ಅತ್ಯಂತ ಸಂತೋಷದ ಬಾಲ್ಯದ ದಿನಗಳನ್ನು ಕಳೆದ ಒಂದು ತಲೆಮಾರು ಅಸ್ತಂಗತವಾಗುವ ಹಂತದಲ್ಲಿದೆ. ಈಗ ವಯಸ್ಸಾದವರನ್ನು ಕಂಡಾಗ ಅವರು ಈಗಿನ ಪೀಳಿಗೆಗಿಂತ ಹೆಚ್ಚು ಆರೋಗ್ಯವಂತರಾಗಿ ಕಂಡುಬರುತ್ತಾರೆ. ಇತ್ತೀಚೆಗೆ ಭೇಟಿಯಾದ ಒಬ್ಬರು 75 ವರ್ಷದ ಹಿರಿಯರು, ತಾವು ಈವರೆಗೆ ಖಾಯಿಲೆ ಎಂದು ಯಾವುದೇ ವೈದ್ಯರ ಬಳಿಗೆ ಹೋಗಿಲ್ಲ ಎಂದು ಹೆಮ್ಮೆಯಿಂದ ಹೇಳಿಕೊಂಡರು. ಅದು ನಿಜವೂ ಸಹ. ಅವರಿಗೆ ಸಕ್ಕರೆ ಖಾಯಿಲೆ, ರಕ್ತದೊತ್ತಡ ಸೇರಿದಂತೆ ಯಾವುದೇ ಆರೋಗ್ಯದ ಸಮಸ್ಯೆಯಿಲ್ಲ. ಅವರು ಈಗಲೂ ಹತ್ತಾರು ಕಿಲೋ ಮೀಟರು ನಡೆದೇ ಹೋಗಬಲ್ಲರು. ಹತ್ತಿರದ ಪ್ರಯಾಣಕ್ಕೆ ಕಾಲೇ ಸರಿಯಾದ ವಾಹನ ಎಂಬುದು ಅವರ ನಿಲುವು. ಸ್ವಲ್ಪ ದೂರ ಎಂದಾದರೆ ಬಸ್ಸು ಸರಿ. ಈ ಕಾರು ಇತ್ಯಾದಿಗಳಲ್ಲಿ ಹೋಗುವುದು ನನಗೆ ಇಷ್ಟವಾಗುವುದಿಲ್ಲ ಎನ್ನುತ್ತಾರೆ. ಅವರ ಈ ಅಭ್ಯಾಸ ಹಾಗೂ ಮನೋಭಾವ ಅವರನ್ನು ಇಂದಿಗೂ ಆರೋಗ್ಯವಂತರಾಗಿ ಇರುವಂತೆ ಮಾಡಿದೆ. ವಿಶೇಷ ಎಂದರೆ ಅವರ ಮಕ್ಕಳು, ಮೊಮ್ಮಕ್ಕಳು ಆಗಾಗ್ಗೆ ವೈದ್ಯರ ಬಳಿಗೆ ಚಿಕಿತ್ಸೆಗಾಗಿ ಹೋಗುತ್ತಾರೆ. ಇದನ್ನು ಅವರು ಹಾಸ್ಯವಾಗಿ ಆರೋಗ್ಯವೇ ಭಾಗ್ಯ ಎಂದು ಹಿಂದಿನವರು ಹೇಳಿದ್ದು ಇವರಿಗೆ ಈಗ ಅರ್ಥವಾಗುತ್ತಿದೆ. ಎಲ್ಲದಕ್ಕೂ ವಾಹನ ಬೇಕು, ತಿನ್ನಲು ಬಾಯಿಗೆ ರುಚಿಯಾದದ್ದು ಬೇಕು. ಆಹಾರ ಸೇವನೆಯಲ್ಲಿ ಯಾವುದೇ ಶಿಸ್ತು ಇಲ್ಲ ಎಂದು ಹೇಳುತ್ತಾರೆ. ಇದು ನಿಜ ಎನಿಸುತ್ತದೆ. ಹಿರಿಯರ ಆಹಾರ ಪದ್ಧತಿ ಗಮನಿಸಿದಾಗ, ಅವರು ಎಂದಿಗೂ ಬಾಯಿ ರುಚಿಗಾಗಿ ತಿಂದವರಲ್ಲ. ಹಾಗೆಯೇ ತಮಗೆ, ತಮ್ಮ ಆರೋಗ್ಯಕ್ಕೆ ಒಗ್ಗುವುದಿಲ್ಲ ಎಂಬಂತಹ ಪದಾರ್ಥಗಳನ್ನು, ಯಾರು ಎಷ್ಟೇ ಒತ್ತಾಯ ಮಾಡಿದರೂ ತಿನ್ನುವುದಿಲ್ಲ. ಸಮಯಕ್ಕೆ ಸರಿಯಾಗಿ ಆಹಾರ ಸೇವನೆ ಹಾಗೂ ಅಗತ್ಯವಿದ್ದಷ್ಟು ಮಾತ್ರ ಆಹಾರ ಸೇವನೆ ಎಂಬುದು ಅವರ ದಿನಚರಿಯಾಗಿರುತ್ತದೆ.

ಹಾಗೆಂದು ನಾವು ಇಂದು ಆಧುನಿಕ ಉಪಕರಣಗಳನ್ನು ಬಳಸುತ್ತಿರುವುದು ಸರಿಯಲ್ಲ ಎಂಬ ಅರ್ಥವಲ್ಲ. ಈ ಆಧುನಿಕ ಉಪಕರಣಗಳನ್ನು ಕಂಡುಹಿಡಿದಿದ್ದು ನಮ್ಮ ಉಪಯೋಗಕ್ಕೆ ಬರಲಿ ಎಂದು. ಆದರೆ ನಾವು ಕ್ರಮೇಣ ಅದರ ದಾಸರಾಗಿ ಪರಿವರ್ತಿತರಾಗಿ, ಇಂದು ಅವು ನಮ್ಮನ್ನು ಆಳುತ್ತಿವೆ. ಹಿಂದಿನ ತಲೆಮಾರಿನ ಜೀವನದ ಬಗ್ಗೆ ಒಮ್ಮೆ ಅವಲೋಕಿಸ ಬೇಕು. ಅಂದರೆ ಹಿಂದಿನ ಎರಡು ಅಥವಾ ಮೂರು ತಲೆಮಾರಿನವರ ಜೀವನ ಕ್ರಮ ಹೇಗಿತ್ತು ಎಂಬುದನ್ನು ಅಭ್ಯಸಿಸಿದರೆ ನಮಗೆ ನಮ್ಮ ಜೀವನದ ಬಗ್ಗೆ ಒಂದಷ್ಟು ಹಿತಕರವಾದ ಮಾಹಿತಿಗಳು ದೊರಕಬಹುದು. ಆಗ ಏರ್‌ಕಂಡಿಷನ್, ಫ್ಯಾನ್‌ಗಳಿರಲಿಲ್ಲ. ಜೇಬಿನಲ್ಲಿ ಫೋನು ಇರುತ್ತಿರಲಿಲ್ಲ, ಹಾಗೆಯೇ ಜೇಬಿನಲ್ಲಿ ಹೆಚ್ಚು ಹಣವೂ ಇರುತ್ತಿರಲಿಲ್ಲ. ಆದರೂ ಆ ತಲೆಮಾರು ನೂರು ವರ್ಷ ಬದುಕುತ್ತಿದ್ದರು, ಕೇವಲ ಬದುಕುತ್ತಿದ್ದರು ಎಂಬುದಲ್ಲ, ಸಂತೋಷವಾಗಿ ಬದುಕಿದ್ದರು. ಆ ತಲೆಮಾರಿನ ಜನರು ಪ್ರೀತಿಯನ್ನು ಹಂಚುವವರಾಗಿದ್ದರು. ನಮಗೆಲ್ಲಾ ನೆನಪಿದೆ, ಮನೆಯಲ್ಲಿ ಹತ್ತಾರು ಜನರಿದ್ದಾಗ ತಾಯಿ ರಾತ್ರಿ ಹೊತ್ತು ಎಲ್ಲರನ್ನೂ ಒಟ್ಟಾಗಿ ಕೂರಿಸಿ ಕೈತುತ್ತು ಹಾಕುತ್ತಿದ್ದುದು. ಆಹಾರ ಹೆಚ್ಚಾಗಿದ್ದರೂ ಅದು ಖಾಲಿಯಾಗುತ್ತಿತ್ತು. ಕಡಿಮೆಯಾದರೆ ಎಲ್ಲರಿಗೂ ಅದರ ಸಮಾನ ಹಂಚಿಕೆಯಾಗುತ್ತಿತ್ತು. ಅಲ್ಲಿ ತುತ್ತು ನೀಡುವ ಕೈಗಳಲ್ಲಿ ಪ್ರೀತಿ ಇತ್ತು. ಈಗಿನ ಮಕ್ಕಳಿಗೆ ಕೈತುತ್ತು ಎಂಬುದೇ ಗೊತ್ತಿಲ್ಲ. ಹಿಂದೆ ಸಣ್ಣ ಮಕ್ಕಳು ಊಟ ಮಾಡಲು ಹಠ ಮಾಡಿದರೆ ಮನೆಯ ಹೊರಗೆ ಚಂದ್ರನನ್ನು ತೋರಿಸುತ್ತಾ, ಹಾಡು ಹೇಳುತ್ತಾ ಮಗುವಿಗೆ ಊಟ ಮಾಡಿಸುತ್ತಿದ್ದರು. ಇಂದು ಮಕ್ಕಳು ಊಟ ಮಾಡಲು ಹಠ ಮಾಡಿದರೆ ಕೈಗೆ ಒಂದು ಮೊಬೈಲ್ ಕೊಟ್ಟು ಊಟವನ್ನು ಬಾಯಿಗೆ ತುರುಕಲಾಗುತ್ತಿದೆ. ಆ ಊಟದೊಂದಿಗೆ ಪ್ರೀತಿಯಿಲ್ಲ, ವಾತ್ಸಲ್ಯದ ಮಾತುಗಳಿಲ್ಲ. ತಾನು ಏನು ತಿಂದೆ ಎಂದು ಮಗುವಿಗೂ ಗೊತ್ತಾಗುವುದಿಲ್ಲ. ಇದನ್ನು ಈಗಿನ ಮಕ್ಕಳ ತಾಯಿಯರಿಗೆ ತಿಳಿಸಿದರೆ, ನಮಗೆ ಅಷ್ಟೊಂದು ಪುರುಸೊತ್ತಿಲ್ಲ. ಮಗು ಹೇಗೆ ತಿಂದರೇನು, ಅದು ಅದರ ಹೊಟ್ಟೆಗೆ ಸೇರಿದರೆ ಸಾಕಲ್ಲವೇ ಎಂಬ ಆಲಸ್ಯ ಮನೋಭಾವ ಇಂದು ಹೆಚ್ಚಾಗಿ ಕಂಡುಬರುತ್ತದೆ. ಮಗು ಹಾಗೂ ತಾಯಿಯ ನಡುವೆ ಇರಬೇಕಾದ ಬಾಂಧವ್ಯ, ಇಂದು ಮಗು ಹಾಗೂ ಮೊಬೈಲ್ ನಡುವಿನ ಬಾಂಧವ್ಯ ಎಂಬಂತೆ ಆಗಿ ಹೋಗಿದೆ. ಇದನ್ನು ಇಂದು ಸರಿಪಡಿಸಿಕೊಳ್ಳುವ ಮನೋಭಾವ ಇಲ್ಲದಿರುವುದರಿಂದ ಮಕ್ಕಳನ್ನು ಆಗಾಗ್ಗೆ ವೈದ್ಯರಲ್ಲಿಗೆ ಕರೆದುಕೊಂಡು ಹೋಗುವಂತಾಗಿದೆ.

ಮೈಸೂರು ವಿವಿ ವ್ಯವಹಾರ ನಿರ್ವಹಣೆ ಅಧ್ಯಯನಕ್ಕೆ 50ರ ಸಂಭ್ರಮ



> ಅಂದಿನ ಉಪಕುಲಪತಿಗಳಾಗಿದ್ದ ದಿ. ಪ್ರೊ. ದೇ. ಜವರೇಗೌಡ(ದೇಜಗೌ) ಮತ್ತು ವಾಣಿಜ್ಯ ವಿಭಾಗದ ಅಂದಿನ ಮುಖ್ಯಸ್ಥರಾಗಿದ್ದ ದಿ. ಡಾ. ಜೆ.ಕೆ.ಇರಾನಿ ಇವರ ನೇತೃತ್ವದಲ್ಲಿ 1974ರಲ್ಲಿ ವ್ಯವಹಾರ ನಿರ್ವಹಣೆಯ ಅಧ್ಯಯನ ವಿಭಾಗವು ಪ್ರಾರಂಭವಾಯಿತು.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೈಗಾರಿಕೆ ಮತ್ತು ಹಣಕಾಸಿನ ವಲಯದಲ್ಲಿ ಆಧುನಿಕ ನಿರ್ವಹಣಾ ಕೌಶಲ್ಯದಿಂದ ನಿಭಾಯಿಸುವ ಹೊಣೆಗಾರಿಕೆಯು ಹೆಚ್ಚಾಗ ತೊಡಗಿತ್ತು. ದೇಶದ ಬೆಳವಣಿಗೆಯಲ್ಲಿ ತಾಂತ್ರಿಕ ಕೌಶಲ್ಯದ ಜೊತೆಗೆ ನಿಪುಣ ವ್ಯವಸ್ಥಾಪಕರ ಅಗತ್ಯ ಸ್ಪಷ್ಟವಾಗಿ ಕಾಣಿಸಿತ್ತು. ದ್ವಿತೀಯ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಭಾರೀ ಕೈಗಾರಿಕೆಗಳು ಮತ್ತು ಸಾರ್ವಜನಿಕ ಕ್ಷೇತ್ರದ ವಿಸ್ತರಣೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲು ಸಿದ್ಧವಾಗಿದ್ದವು. 'ಲೈಸನ್ಸರಾಜ' ದಂತಹ ಜಟಿಲ ವ್ಯವಸ್ಥೆಯನ್ನು ನಿಭಾಯಿಸಲು ಸಮರ್ಥ ವ್ಯವಸ್ಥಾಕರು ಅತ್ಯಗತ್ಯವಾದರು. ಆದ್ದರಿಂದ ನಿರ್ವಹಣ ಶಿಕ್ಷಣದ ಹೊಸ ಶಕೆ ಭಾರತದಂತಹ ದೇಶದಲ್ಲಿ, ದೇಶದ ಅಭಿವೃದ್ಧಿಗೆ ಪೂರಕವಾದ ಪ್ರಮುಖ ಆದ್ಯತೆಯಾಯಿತು.

ಈ ಕ್ಷಿಪ್ರ ಪ್ರಗತಿ ಮತ್ತು ಅಗತ್ಯತೆಯನ್ನು ಮನಗಂಡು 1961 ರಲ್ಲಿ ದೇಶದ ಮೊಟ್ಟ ಮೊದಲ ಐಐಎಂ ಅಂದಿನ ಕಲ್ಕತಾದಲ್ಲಿ ಪ್ರಾರಂಭವಾಯಿತು. ಅದೇ ವರ್ಷ ಅಹಮದಾಬಾದ್‌ನಲ್ಲೂ ಸಹ ಐಐಎಂ ಪ್ರಾರಂಭವಾಯಿತು. ಈ ಶಿಕ್ಷಣ ಸಂಸ್ಥೆಗಳು 1970 ರ ವೇಳೆಗೆ ಕೈಗಾರಿಕಾ ವಲಯದ ಮೇಲೆ ಪರಿಣಾಮವನ್ನು ಬೀರಲು ಆರಂಭಿಸಿದ್ದವು. ಈ ಮಹತ್ವದ ಕಾಲಘಟ್ಟದಲ್ಲಿ 1973ರಲ್ಲಿ ಬೆಂಗಳೂರಿನಲ್ಲಿ ದೇಶದ ಮೂರನೇ ಐಐಎಂ ಜನ್ಮ ತಾಳಿತು.

1916ರಲ್ಲಿ ಕರ್ನಾಟಕ ಸಾಂಸ್ಕೃತಿಕ ರಾಜಧಾನಿಯಲ್ಲಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯವು ಭಾರತದ ನಿರ್ವಹಣಾ ಶಿಕ್ಷಣದ ಈ ಹೊಸಯುಗವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅಂದಿನ ಉಪಕುಲಪತಿಗಳಾಗಿದ್ದ ದಿ.ಪ್ರೊ. ದೇ. ಜವರೇಗೌಡ(ದೇಜಗೌ) ಮತ್ತು ವಾಣಿಜ್ಯ ವಿಭಾಗದ ಅಂದಿನ ಮುಖ್ಯಸ್ಥರಾಗಿದ್ದ ದಿ. ಡಾ. ಜೆ.ಕೆ.ಇರಾನಿ ಇವರ ನೇತೃತ್ವದಲ್ಲಿ 1974ರಲ್ಲಿ ವ್ಯವಹಾರ ನಿರ್ವಹಣೆಯ ಅಧ್ಯಯನ ವಿಭಾಗವು ಪ್ರಾರಂಭವಾಯಿತು. ಮೊದಲು ಈ ವಿಭಾಗದ ಪಾಠ–ಪ್ರವಚನಗಳು ವಾಣಿಜ್ಯ ವಿಭಾಗದ ಆವರಣದಲ್ಲೇ ಪ್ರಾರಂಭಗೊಂಡು, ವಿಶ್ವವಿದ್ಯಾನಿಲಯದ ಗಣಿತ ಶಾಸ್ತ್ರ ಮನೋವಿಜ್ಞಾನ, ಸಂಖ್ಯಾಶಾಸ್ತ್ರ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರುಗಳ ಸಮೂಹವು ವಿಭಾಗದ ಬೆಂಬಲಕ್ಕೆ ನಿಂತದ್ದು ಅವಿಸ್ಮರಣೀಯ. ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಆರಂಭಗೊಂಡ ಈ ವಿಭಾಗವು, ನಂತರದ ಸ್ವಲ್ಪ ಅವಧಿಯನ್ನು ಇಂದಿನ ಎಸ್‌ಎಸ್‌ಸಿ ಕಟ್ಟಡದಲ್ಲಿ ಮುಂದುವರೆದ ಮೆಲುಕುಗಳು ಹಿರಿಯ ವಿದ್ಯಾರ್ಥಿಗಳ ಸ್ಮೃತಿ ಪುಟಗಳಲ್ಲಿ ದಾಖಲಾಗಿದೆ.

ಡಾ.ಜೆ.ಕೆ.ಇರಾನಿಯವರ ನಂತರ, ಪ್ರೊ. ಮುನಿರಾಮಪ್ಪ ಈ ವಿಭಾಗವನ್ನು ಮುನ್ನಡೆಸಿದ್ದರು.

ಅದೇ ಸಮಯದಲ್ಲಿ ಅಮೇರಿಕಾದಲ್ಲಿ ಅಧ್ಯಯನ ಮಾಡಿ, ಕೆಲ ಕಾಲ ಧಾರವಾಡ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದ್ದ ಪ್ರೊ.ಎಂ. ವೆಂಕಟೇಶ್ 1983–84ರಲ್ಲಿ ಈ ವಿಭಾಗಕ್ಕೆ ಸೇರ್ಪಡೆಗೊಂಡರು. ಅವರ ಅವಿರತ ಶ್ರಮದ ಫಲವಾಗಿ ಎಂಬಿಎ ವಿಭಾಗಕ್ಕೆ ಸಂಖ್ಯಾಶಾಸ್ತ್ರ ವಿಭಾಗ ಮೊದಲ ಮಹಡಿಯನ್ನು ವಿಶ್ವವಿದ್ಯಾನಿಲಯವು ನಿಯುಕ್ತಿಗೊಳಿಸಿತು.

1984–86ರ ಸಮಯದಲ್ಲಿ ಸಂಸ್ಥೆಗೆ ಪ್ರೊ. ಎಂ. ವೆಂಕಟೇಶ್‌ರವರ ಜೊತೆಗೆ ಶ್ರಮಿಸಿದವರಲ್ಲಿ ಪ್ರೊ. ಫ್ರಾನ್ಸಿಸ್ ಚೆಲುನಿಲಂ ಸಹ ಪ್ರಮುಖರು. ಪ್ರೊ. ಸಿ.ಎ. ಫ್ರಾನ್ಸಿಸ್‌ರವರು ರಚಿಸಿರುವ Business Environment ಹಾಗೂ Business and Government ಮುಂತಾದ ಪುಸ್ತಕಗಳು ಇಂದಿಗೂ ವ್ಯವಹಾರ ಶಾಸ್ತ್ರ ವಿದ್ಯಾರ್ಥಿಗಳಿಗೆ ದಾರಿದೀಪ ವಾಗಿದೆ. ಜೊತೆಗೆ ಇವರ ಪುಸ್ತಕಗಳು ದೇಶ ಹಾಗೂ ವಿದೇಶಗಳಲ್ಲಿ ಮನ್ನಣೆ ಪಡೆದಿದೆ.

ಈ ಸಂಸ್ಥೆಗೆ 1992ರಲ್ಲಿ ಪ್ರೊ. ಡಿ.ಆನಂದ್, 1996–97ರ ಸಾಲಿನಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ನಿರ್ವಹಣಾ ಶಾಸ್ತ್ರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದ ಪ್ರೊ.ಬಿ.ಶಿವರಾಜ್ ಸೇರಿಕೊಳ್ಳುತ್ತಾರೆ. 1999ರಲ್ಲಿ ಪ್ರೊ.ಬಿ. ಆರ್.ಅನಂತನ್ ಈ ವಿಭಾಗವನ್ನು ಸೇರಿಕೊಳ್ಳುತ್ತಾರೆ. ಇವರು ಮುಂದೆ ಬೆಳಗಾವಿಯ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿಗಳಾಗಿಯೂ ಸೇವೆ ಸಲ್ಲಿಸುತ್ತಾರೆ. ಜೊತೆಗೆ ಪ್ರೊ. ನಾಗರಾಜು ವಿಭಾಗವನ್ನು ಮುನ್ನಡೆಸಲು ಬೆನ್ನೆಲುಬಾಗುತ್ತಾರೆ.

1974 ರಲ್ಲಿ ಕೇವಲ 30 ವಿದ್ಯಾರ್ಥಿಗಳ ಪ್ರವೇಶ ಅವಕಾಶದಿಂದ ಪ್ರಾರಂಭಿಸಲ್ಪಟ್ಟ ಈ ವಿಭಾಗವು, 1999 ರಲ್ಲಿ ಹೆಚ್ಚಾದ ಬೇಡಿಕೆ ಮತ್ತು ನಿರ್ವಹಣಾ ಶಾಸ್ತ್ರವನ್ನು ಹೆಚ್ಚು ಪಸರಿಸುವ ದೃಷ್ಟಿಯಿಂದ partially self-finance ಯೋಜನೆಯಡಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು 60ಕ್ಕೆ ಏರಿಸಲಾಯಿತು. ನಂತರ 2004ರಲ್ಲಿ ಈ ಸಂಖ್ಯೆ 120ಕ್ಕೆ ಏರಿಕೆಯಾಗಿ, ಪ್ರಸ್ತುತ ಈ ಸಂಖ್ಯೆಯು 180ಕ್ಕೆ ತಲುಪಿದೆ. ಪ್ರತಿ ವರ್ಷ 25ಕ್ಕೂ ಹೆಚ್ಚು ವಿದೇಶಿ ವಿದ್ಯಾರ್ಥಿಗಳು ನಿರ್ವಹಣಾ ಶಾಸ್ತ್ರವನ್ನು ಅಭ್ಯಾಸಿಸುತ್ತಿರುವುದು ವಿಶೇಷ.

ಈ ವಿಭಾಗವು ಪ್ರಾರಂಭವಾದ ವರ್ಷದಿಂದ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆ ಮತ್ತು ಸಂದರ್ಶನ ಮೂಲಕ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿದ್ದು, ಇದು ಪ್ರಸ್ತುತ ವ್ಯವಸ್ಥೆಯಲ್ಲಿನ ಪಾರದರ್ಶಕತೆಯ ಕೈಗನ್ನಡಿಯಾಗಿದೆ.

2002ರಲ್ಲಿ ಅಂದಿನ ಉಪಕುಲಪತಿಗಳಾಗಿದ್ದ ಪ್ರೊಎಸ್. ಎನ್.ಹೆಗ್ಡೆಯವರ ಸಂಪರ್ಕ ಮತ್ತು ಶ್ರಮದಿಂದ ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದ ಶ್ರೇಷ್ಠ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬರಾದ, ದೂರದ ಅಮೇರಿಕಾದ ಮಿಶಿಗನ್‌ನಲ್ಲಿ ನೆಲೆಗೊಂಡು ಅತ್ಯಂತ ಯಶಸ್ವಿ ಉದ್ಯಮಿಯಾಗಿರುವ ಡಾ.ಬಿ.ಎನ್. ಬಹದ್ದೂರ್ ಅವರ ಉದಾರ ಕೊಡುಗೆಯಿಂದ (3 ಕೋಟಿ ರೂ.) ಮೈಸೂರಿನ ಉತ್ತರದ ಅಂಚಿನಲ್ಲಿ ಡಾ.ಬಿ.ಎನ್. ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸೈನ್ಸ್ ಎಂಬ ನಾಮಕರಣದೊಂದಿಗೆ ಎಂ.ಬಿ.ಎ ವಿಭಾಗವು ಸುಸಜ್ಜಿತವಾಗಿ ರೂಪುಗೊಂಡು ತನ್ನ ಮರು ಹುಟ್ಟನ್ನು ಪಡೆದುಕೊಂಡಿತು. ಈ ಸಂಸ್ಥೆಯಲ್ಲಿ ಪ್ರೊ. ಆಯೇಷಾ ಶರೀಫ್, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರೊ.ಹೆಚ್.ಎನ್.ರಮೇಶ್ ಮತ್ತು ಹಲವಾರು ಅತಿಥಿ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಜ್ಞಾನದ ಬುತ್ತಿಯನ್ನ ಹೆಚ್ಚಿಸಿದ್ದನ್ನು ಮರೆಯಲು ಸಾಧ್ಯವಿಲ್ಲ.

1995ರಿಂದ ಈ ವಿಭಾಗದ ವಿದ್ಯಾರ್ಥಿಗಳ ಸಮೂಹದ ವತಿಯಿಂದ ರಾಜ್ಯಮಟ್ಟದ ಸಾಹಿತ್ಯ, ನಿರ್ವಹಣಾ ಕೌಶಲ್ಯ ಹಾಗೂ ಸಾಂಸ್ಕೃತಿಕ ಉತ್ಸವವನ್ನು 'ಮಂತ್ರ' MANTRA(Management The Rewarding Attitude) ಆಯೋಜಿಸಲಾಗುತ್ತಿದ್ದು, ಈ ಕಾರ್ಯಕ್ರಮವು ಹೆಚ್ಚು ಪ್ರಶಂಸೆ ಯನ್ನು ಪಡೆದಿದೆ. ಈ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಪ್ರಸುತ್ತ ದೇಶ–ವಿದೇಶಗಳ ಹಲವು ಕಂಪನಿಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ತಮ್ಮ ಯಶಸ್ಸಿನಿಂದ ಈ ಶಿಕ್ಷಣ ಸಂಸ್ಥೆಯ ರಾಯಭಾರಿಗಳಾಗಿ, ಉದ್ಯಮಿಗಳಾಗಿ ದೇಶದ ಪ್ರಗತಿಗೆ ಮತ್ತು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಬೆನ್ನೆಲುಬಾಗಿದ್ದಾರೆ.

ಇದೇ ಶನಿವಾರ 28ರಂದು ಈ ವಿಭಾಗವು ಸುವರ್ಣ ಮಹೋತ್ಸವದ ಸಂಭ್ರಮದ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಆಯೋಜಿಸಿದೆ. ಕಾರ್ಯಕ್ರಮವನ್ನು ವಿವಿ ಕುಲಪತಿ ಪ್ರೊಎನ್.ಕೆ. ಲೋಕನಾಥ್ ಉದ್ಘಾಟನೆ ಮಾಡಲಿದ್ದು, ಇದೇ ವಿಭಾಗದ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿಯಾದ ಬ್ರಿಗೇಡ್ ಗ್ರೂಪ್ ಕಾರ್ಯನಿರ್ವಾಹಕ ಅಧ್ಯಕರಾದ ಶ್ರೀ ಎಂ.ಆರ್. ಜೈಶಂಕರ್ ಸಮಾರೋಪ ಭಾಷಣ ಮಾಡಲಿದ್ದಾರೆ. ಜೊತೆಗೆ ಈ ವಿಭಾಗದಲ್ಲಿ ನಾಲ್ಕು ದಶಕಗಳ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿರುವ ಪ್ರೊ. ಡಿ.ಆನಂದ್ ಅವರ ಬೀಳ್ಕೊಡುಗೆ ಮತ್ತು ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಅಧಿಕೃತ ಚಾಲನೆಯನ್ನು ನೀಡಲಾಗುತ್ತಿದೆ.



ಭಾನುಪ್ರಕಾಶ್ .ಎಲ್
ಹವ್ಯಾಸಿ ಬರಹಗಾರರು
(ಈ ಸಂಸ್ಥೆಯ 2004–06ನೇ ಸಾಲಿನ ವಿದ್ಯಾರ್ಥಿ)

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಂಸದ ಯದುವೀರ್ ಒಡೆಯರ್ ಹುಟ್ಟುಹಬ್ಬ



ಮೈಸೂರು–ಕೊಡಗು ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹುಟ್ಟುಹಬ್ಬದ ಅಂಗವಾಗಿ ಇತ್ತೀಚೆಗೆ ಪ್ರತಾಪ್ ಸಿಂಹ ಸ್ನೇಹ ಬಳಗದ ವತಿಯಿಂದ ಒಂಟಿಕೊಪ್ಪಲು ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ಕಲಿಸು ಫೌಂಡೇಶನ್‌ನ ನಿಖಿಲೇಶ್, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಮಹಿಳಾ ಮೋರ್ಚಾದ ಚಂದ್ರಕಲಾ, ನೇತ್ರ ಮುಖಂಡರಾದ ಅಶೋಕ್, ಶ್ರೀನಿವಾಸ್, ಜಗದೀಶ್, ಸುರೇಶ್, ಗೋಪಿ, ಯೋಗೇಶ್, ನಾಗೇಶ್, ಗೋವಿಂದ, ಗೋಪಾಲ್, ಸ್ವಾಮಿ, ಯಶಸ್ ಮತ್ತಿತರರಿದ್ದರು.

ಇರಾನ್ ಶಸ್ತ್ರಾಗಾರದ ಮೇಲೆ ಇಸ್ರೇಲ್ ದಾಳಿ

ದುಬೈ: ಇರಾನ್ ಜತೆಗೆ ಕದನ ವಿರಾಮ ಒಪ್ಪಂದ ಮಾತುಕತೆಗೆ ಅಮೆರಿಕ ಪ್ರಯತ್ನ ನಡೆಸುತ್ತಿದ್ದರೆ, ಇನ್ನೊಂದೆಡೆ ಇಸ್ರೇಲ್, ಇರಾನ್ ಮೇಲಿನ ದಾಳಿಯನ್ನು ತೀವ್ರಗೊಳಿಸಿದೆ. ಟೆಹರಾನ್ ಹೃದಯಭಾಗದಲ್ಲಿರುವ ಶಸ್ತ್ರಾಸ್ತ್ರ ತಯಾರಿಕಾ ಘಟಕವನ್ನು ಕೇಂದ್ರವಾಗಿಸಿ ಇಸ್ರೇಲ್ ಸೇನೆ ಶುಕ್ರವಾರ ವೈಮಾನಿಕ ದಾಳಿ ನಡೆಸಿದೆ. ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ದಕ್ಷಿಣ ಲೆಬನಾನ್‌ನ ಬೈರೂತ್‌ನಲ್ಲೂ ಶಕ್ತವಾದ ದಾಳಿ ಮುಂದುವರಿದಿದೆ.

ಇರಾನ್ ಕೂಡ ಕೊಲ್ಲಿ ರಾಷ್ಟ್ರಗಳ ಮೇಲಿನ ದಾಳಿಯನ್ನು ಮುಂದುವರಿಸಿದೆ. ಕುವೈತ್ ಮತ್ತು ಯುಎಇನಲ್ಲೂ ಕ್ಷಿಪಣಿ ದಾಳಿ ವರದಿಯಾಗಿವೆ. ಕುವೈತ್‌ನ ಪ್ರಮುಖ ವಾಣಿಜ್ಯ ಬಂದರು ಶುವೈಖ್‌ಗೆ ಇರಾನ್ ಕ್ಷಿಪಣಿ ದಾಳಿಯಿಂದ ಹಾನಿಯಾಗಿದೆ ಎಂದು ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ.

ಇಸ್ರೇಲ್ ನಾಗರಿಕರ ಮೇಲೆ ದಾಳಿ ನಡೆಸಿದರೆ ಇರಾನ್ ಭಾರಿ ಬೆಲೆ ತೆತ್ತಬೇಕಾಗುತ್ತದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲಿ ಕಾಟ್ಜ್ ಎಚ್ಚರಿಕೆ ನೀಡಿದ್ದಾರೆ.

ಒತ್ತಡ ಹೇರಲಿ: ಪಶ್ಚಿಮ ಏಷ್ಯಾ ಸಂಘರ್ಷದಿಂದ ಸತತ ನಾಲ್ಕನೆಯ ವಾರವೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಯಲ್ಲಿ ಭಾರಿ ಏರಿಳಿತವಾಗುತ್ತಿದೆ. ಜಿ 7 ರಾಷ್ಟ್ರಗಳ ಶೃಂಗಸಭೆಯಲ್ಲಿ ಹೊರ್ಮುಜ್ ಜಲಸಂಧಿಯನ್ನು ಎಲ್ಲ ದೇಶಗಳಿಗೆ ಮುಕ್ತಗೊಳಿಸುವ ಬಗ್ಗೆ ಒತ್ತಡ ಹೇರಬೇಕು ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಆಗ್ರಹಿಸಿದ್ದಾರೆ.

ಅಮೆರಿಕದ ಸೇನೆ ಇರುವ ಪ್ರದೇಶಗಳಿಂದ ದೂರ ಉಳಿಯಿರಿ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ (ಐಆರ್‌ಜಿಸಿ) ಗಲ್ಫ್ ರಾಷ್ಟ್ರಗಳ ಜನರಲ್ಲಿ ಮನವಿ ಮಾಡಿದೆ. ಇರಾನ್ ಜತೆಗೆ ಒಪ್ಪಂದ ಮಾತುಕತೆ ಉತ್ತಮವಾಗಿ ನಡೆಯುತ್ತಿದೆ ಎಂಬ ಟ್ರಂಪ್ ಹೇಳಿಕೆಗೆ ಐಆರ್‌ಜಿಸಿ ಪ್ರತಿ ದಾಳಿಯ ತೀಕ್ಷ್ಣ ಎಚ್ಚರಿಕೆ ನೀಡಿದೆ.

ಅಮೆರಿಕ ಸೇನಾಪಡೆಗಳು ನೆಲೆಗೊಂಡಿರುವ ಪ್ರದೇಶಗಳನ್ನು ತೊರೆಯಿರಿ

ಪಶ್ಚಿಮ ಏಷ್ಯಾ ನಾಗರಿಕರಿಗೆ ಇರಾನ್ ಮನವಿ

ಟೆಹ್ರಾನ್, ಮಾ.27– ಇರಾನ್‌ನ ಐಆರ್‌ಜಿಸಿ ನೆರೆಯ ಪಶ್ಚಿಮ ಏಷ್ಯಾದ ದೇಶಗಳ ನಾಗರಿಕರಿಗೆ ಹೊಸ ಎಚ್ಚರಿಕೆ ನೀಡಿದೆ. ಅಮೆರಿಕ ಸೇನಾಪಡೆಗಳು ನೆಲೆಗೊಂಡಿರುವ ಪ್ರದೇಶಗಳನ್ನು ತಕ್ಷಣ ತೊರೆಯಿರಿ ಎಂದು ಐಆರ್‌ಜಿಸಿ ಕೇಳಿಕೊಂಡಿದೆ.

ತಮ್ಮದೇ ಆದ ಮಿಲಿಟರಿ ನೆಲೆಗಳನ್ನು ರಕ್ಷಿಸಿಕೊಳ್ಳುವ ಧೈರ್ಯ ಮತ್ತು ಸಾಮರ್ಥ್ಯದ ಇಲ್ಲದ ಹೇಡಿತನದ ಅಮೆರಿಕನ್–ಜಿಯೋನಿಸ್ಟ್ ಪಡೆಗಳು, ಇಸ್ಲಾಂ ಹೋರಾಟಗಾರರ ಭಯದಿಂದ ಮುಗ್ಧ ನಾಗರಿಕರನ್ನು ಮಾನವ ಗುರಾಣಿಯಾಗಿ ಬಳಸಲು ಪ್ರಯತ್ನಿಸುತ್ತಿವೆ ಎಂದು ಇರಾನ್ ಕಿಡಿಕಾರಿದೆ.

ಇರಾನಿನ ನಾಗರಿಕರನ್ನು ಕೊಂದು ಪ್ರಮುಖ ವ್ಯಕ್ತಿಗಳನ್ನು ಗುರಿಯಾಗಿಸುವ ಅಮೆರಿಕ ಮತ್ತು ಇಸ್ರೇಲಿ ಪಡೆಗಳನ್ನು ನಿರ್ಮೂಲನೆ ಮಾಡುವುದು ನಮ್ಮ ಕರ್ತವ್ಯವಾಗಿರುವುದರಿಂದ, ನಾಗರಿಕರ ಹಾನಿಯನ್ನು ತಪ್ಪಿಸಲು ಯುಎಸ್ ಪಡೆಗಳು ನೆಲೆಗೊಂಡಿರುವ ಪ್ರದೇಶಗಳನ್ನು ತಕ್ಷಣವೇ ತೊರೆಯುವಂತೆ ನಾವು ನಿಮಗೆ ಸಲಹೆ ನೀಡುತ್ತೇವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನ್ ಗಾರ್ಡ್ಸ್ ಕಾರ್ಪ್ಸ್(IRGC) ಕ್ಷಿಪಣಿಗಳು ಮತ್ತು ಡ್ರೋನ್‌ಗಳೊಂದಿಗೆ, ಪಶ್ಚಿಮ ಏಷ್ಯಾದಲ್ಲಿರುವ ಅಮೆರಿಕಾದ ಮಿಲಿಟರಿ ಬೇಸ್‌ಗಳನ್ನು ಮತ್ತು ಇಸ್ರೇಲಿ ಮಿಲಿಟರಿ ಬೇಸ್‌ಗಳನ್ನು ಗುರಿಯಾಗಿಸಿಕೊಂಡು ಆಪರೇಷನ್ ಟ್ರೂ ಪ್ರಾಮಿಸ್ 4ರ ವೇವ್ 83 ಅನ್ನು ಕಾರ್ಯಗತಗೊಳಿಸುವುದಾಗಿ ಘೋಷಿಸಿದೆ.

ಇರಾನ್ ಮಾತುಕತೆಗಳಿಗೆ ಹಪಹಪಿಸುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ ಬೆನ್ನಲ್ಲೇ, ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಇರಾನ್ ನ IRGC ವಕ್ತಾರ ಲೆಫ್ಟಿನೆಂಟ್ ಕರ್ನಲ್ ಇಬ್ರಾಹಿಂ ಝೋಲ್ಫಾಘರಿ ಅವರು, ಮಧ್ಯಪ್ರಾಚ್ಯದಲ್ಲಿ ನಿಮ್ಮ ಆರ್ಥಿಕ ಹೂಡಿಕೆಗಳ ಯಾವುದೇ ಕುರುಹು ಇರುವುದಿಲ್ಲ, ಅಲ್ಲದೆ, ನಮ್ಮ ಉದ್ದೇಶ ನೆರವೇರುವವರೆಗೂ ಹಿಂದಿನ ಇಂಧನ ಮತ್ತು ತೈಲ ಬೆಲೆಗಳನ್ನು ನೀವು ನೋಡಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದ್ದರು.

ನಾಳೆ ಸಂವಾದ

ಮೈಸೂರು, ಮಾ.27(ಎಸ್‌ಪಿಎನ್)– 'ಇಂಧನ, ನೀರು ಸುಸ್ಥಿರ ಮನೆಗಳು' ಕುರಿತು ಭಾನುವಾರ (ಮಾ.29) ಸಂಜೆ 4 ಗಂಟೆಗೆ ನಗರದ ಬೋಗಾದಿಯ ರೈಲ್ವೆ ಬಡಾವಣೆಯ ಇಂಜಿನಿಯರ್ ರಮೇಶ್ ಕಿಕ್ಕೇರಿ ಅವರ ಮನೆಯಲ್ಲಿ ಎಂಜಿಪಿ ವತಿಯಿಂದ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

ದೇಶಾದ್ಯಂತ ಅಡುಗೆ ಅನಿಲ ಸಂಕಷ್ಟ ಸೃಷ್ಟಿಯಾಗಿರುವ ಸಂದರ್ಭದಲ್ಲಿ ಹಸಿತ್ಯಾಜ್ಯಗಳಿಂದ ಅಡುಗೆ ಅನಿಲ ತಯಾರಿಸಿಕೊಳ್ಳುವ ಬಗ್ಗೆ ಸಂವಾದದಲ್ಲಿ ಚರ್ಚಿಸಲಾಗುವುದು. ಹೆಚ್ಚಿನ ವಿವರಗಳಿಗೆ ಮೊ: 8861870006 (ರವಿ ಬಳೆ), 96205 43516 (ರಮೇಶ್ ಕಿಕ್ಕೇರಿ) ಅನ್ನು ಸಂಪರ್ಕಿಸಬಹುದು. ಅಂತೆಯೇ ಯಾದವಗಿರಿಯಿಂದ ಈ ಸಭೆಯಲ್ಲಿ ಪಾಲ್ಗೊಳ್ಳುವವರಿಗೆ ಉಚಿತ ವಾಹನ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಂತರರಾಷ್ಟ್ರೀಯ ಶಾಲೆ, ಮೈಸೂರು

ಒಂದು ಯುಗದಲ್ಲಿ ಸೋಡಿಯಂನ ಪರಮಾಣು ತೂಕ ಅಥವಾ ಮೊದಲ ವಿಶ್ವಯುದ್ಧದ ಆರಂಭದ ದಿನಾಂಕವು ಕೇವಲ ಹುಡುಕಾಟದ ವಿಷಯವಾಗಿದೆ, ನಮ್ಮ ಶಿಕ್ಷಣ ವ್ಯವಸ್ಥೆಗಳು ವಿಷಯ ಪ್ರಸರಣದಿಂದ ಸಂದರ್ಭೋಚಿತ ಅನ್ವಯಕ್ಕೆ ವಿಕಸನಗೊಳ್ಳಬೇಕು. ಮಾಹಿತಿಯು ಅಪರಿಮಿತ ವಾಗಿದೆ ಮತ್ತು ವಾಸ್ತವಿಕ ಜ್ಞಾನವು ಸುಲಭವಾಗಿ ಲಭ್ಯವಿದೆ, ಆದ್ದರಿಂದ ಪ್ರಮುಖ ಪ್ರಶ್ನೆ ನಮ್ಮ ವಿದ್ಯಾರ್ಥಿಗಳು ಏನು ತಿಳಿಯಬೇಕು ಎಂಬುದಲ್ಲ, ಬದಲಿಗೆ ಅವರು ತಿಳಿದಿರುವುದನ್ನು ಏನು ಮಾಡಬಹುದು ಎಂಬುದು. ಆದ್ದರಿಂದ, ನಾವು "**ಏನು ಯೋಚಿಸಬೇಕು**" ಎಂಬುದರಿಂದ "**ಹೇಗೆ ಯೋಚಿಸಬೇಕು**" ಎಂಬುದಕ್ಕೆ ಗಮನವನ್ನು ಬದಲಾಯಿಸಿದಾಗ ವಿದ್ಯಾರ್ಥಿಗಳು ಪ್ರಮುಖ ಕೌಶಲ್ಯಗಳಾದ ವಿಮರ್ಶಾತ್ಮಕ ಚಿಂತನೆ ಮತ್ತು ವಿಚಾರಣೆಯನ್ನು ಅಭಿವೃದ್ಧಿಪಡಿಸುತ್ತಾರೆ. ಈ ಬದಲಾವಣೆಯು ರೋಟ್ ಮೆಮೊರೈಸೇಶನ್ ಮೇಲೆ ಸಮಸ್ಯೆ–ಸಮಾಧಾನವನ್ನು ಪ್ರೋತ್ಸಾಹಿಸುತ್ತದೆ, ಶಿಕ್ಷಣವನ್ನು ಹೆಚ್ಚು ಅರ್ಥಪೂರ್ಣಗೊಳಿಸುತ್ತದೆ. ವಿದ್ಯಾರ್ಥಿ–ಕೇಂದ್ರಿತ ವಿಧಾನದಲ್ಲಿ, ವಿದ್ಯಾರ್ಥಿಗಳು ತಮ್ಮ ಕಲಿಕೆಯ ಮಾಲೀಕತ್ವವನ್ನು ಪಡೆಯುತ್ತಾರೆ, ಇದು ವಿದ್ಯಾರ್ಥಿ ಏಜೆನ್ಸಿಯ ರೂಪದಲ್ಲಿ ಇರುತ್ತದೆ. ಅವರು ನಿಷ್ಕ್ರಿಯ ಮಾಹಿತಿ ಸ್ವೀಕರಿಸುವವರ ಬದಲು ಸಕ್ರಿಯ ಚಿಂತಕರು/ ಸಂಶೋಧಕರಾಗುತ್ತಾರೆ. ಮತ್ತು ಇಲ್ಲಿ ಐಬಿ (ಅಂತರರಾಷ್ಟ್ರೀಯ ಬ್ಯಾಕಲೌರಿಯೇಟ್) ಪ್ರತ್ಯೇಕವಾಗಿ ನಿಲ್ಲುತ್ತದೆ. **ಐಬಿ ಒಂದು ಶಿಕ್ಷಣ ಚೌಕಟ್ಟು ಆಗಿದ್ದು, ಇದನ್ನು 160ಕ್ಕೂ ಹೆಚ್ಚು ದೇಶಗಳಲ್ಲಿ ಗುರುತಿಸಲಾಗಿದೆ, ಇದು ವಿಚಾರಶೀಲ, ಜ್ಞಾನವುಳ್ಳ ಮತ್ತು ಕಾಳಜಿಯುಳ್ಳ ಯುವ ಜಾಗತಿಕ ನಾಗರಿಕರನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಿದೆ, ಅವರು ವೇಗವಾಗಿ ಬದಲಾಗುತ್ತಿರುವ ಜಗತ್ತನ್ನು ಎದುರಿಸಲು ಸಿದ್ಧರಾಗಿರುತ್ತಾರೆ.**

ಐಬಿ ಸಾರ್ವಜನಿಕ ವೆಬ್‌ಸೈಟ್ (www.ibo.org)ನಲ್ಲಿ ಅನೇಕ ಸಂಶೋಧನಾ ವರದಿಗಳು ಲಭ್ಯವಿವೆ, ಇದು ಐಬಿ ಫಲಿತಾಂಶಗಳ ಬಗ್ಗೆ ಸ್ಪಷ್ಟ ದತ್ತಾಂಶವನ್ನು ಒದಗಿಸುತ್ತದೆ ಮತ್ತು ಐಬಿ ವಿದ್ಯಾರ್ಥಿಗಳನ್ನು ಪರೀಕ್ಷೆಗಳಿಗೆ ಮಾತ್ರವಲ್ಲ, ಶಾಲೆಯ ನಂತರದ ಜೀವನಕ್ಕೆ ಸಿದ್ಧಪಡಿಸುತ್ತದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಉದಾಹರಣೆಗೆ, ಯುನೈಟೆಡ್ ಸ್ಟೇಟ್ಸ್‌ನಲ್ಲಿ ಕಾಲೇಜ್ ಸಾಧನೆ ಕುರಿತ ಅಧ್ಯಯನವು ಐಬಿ ವಿದ್ಯಾರ್ಥಿಗಳು ರಾಷ್ಟ್ರೀಯ ಸರಾಸರಿ (64%) ಗಿಂತ ಹೆಚ್ಚಿನ ಕಾಲೇಜ್ ಪ್ರವೇಶ ದರವನ್ನು (74%) ಹೊಂದಿದ್ದಾರೆಂದು ತೋರಿಸಿದೆ. ಯುಕೆಯಲ್ಲಿ ಹೈಯರ್ ಎಜುಕೇಶನ್ ಸ್ಟಾಟಿಸ್ಟಿಕ್ಸ್ ಏಜೆನ್ಸಿ (HESA) ನಡೆಸಿದ ಮತ್ತೊಂದು ಅಧ್ಯಯನವು ಐಬಿ ವಿದ್ಯಾರ್ಥಿಗಳು ಉನ್ನತ ವಿಶ್ವವಿದ್ಯಾಲಯಗಳಿಗೆ ಪ್ರವೇಶ ಪಡೆಯುವ ಸಾಧ್ಯತೆ 57% ಹೆಚ್ಚು ಎಂದು ತೋರಿಸುತ್ತದೆ. 2019ರ ಐಬಿ ಜಾಗತಿಕ ಸಂಶೋಧನಾ ಸಮೀಕ್ಷೆಯು 81% ಐಬಿ ಪದವೀಧರರು ವಿಶ್ವವಿದ್ಯಾಲಯ ಮತ್ತು ವೃತ್ತಿಜೀವನಕ್ಕೆ ಉತ್ತಮವಾಗಿ ಸಿದ್ಧರಾಗಿದ್ದಾರೆಂದು ಭಾವಿಸುತ್ತಾರೆ ಎಂದು ಕಂಡುಹಿಡಿದಿದೆ.

ಈ VUCA ಜಗತ್ತಿನಲ್ಲಿ AI, ತ್ವರಿತ ತಾಂತ್ರಿಕ ಬದಲಾವಣೆ, ಪರಸ್ಪರ ಸಂಪರ್ಕಿತ ಆರ್ಥಿಕತೆಗಳು ಮತ್ತು ಅನಿರೀಕ್ಷಿತ ವೃತ್ತಿ ಮಾರ್ಗಗಳಿಂದ ರೂಪುಗೊಂಡಿದೆ, ವಿಷಯವು ತ್ವರಿತವಾಗಿ ಹಳೆಯದಾಗುತ್ತದೆ, ಆದ್ದರಿಂದ ಅಗತ್ಯವಾದ ಬದುಕುಳಿಯುವ ಕೌಶಲ್ಯಗಳು ವಿಮರ್ಶಾತ್ಮಕ ಚಿಂತನೆ, ಸಂಶೋಧನೆ ಮತ್ತು ಸಮಸ್ಯೆ–ಸಮಾಧಾನ, ಸಂವಹನ ಮತ್ತು ಸಹಯೋಗ, ಸ್ವಯಂ–ನಿರ್ವಹಣೆ ಮತ್ತು ಪ್ರತಿಬಿಂಬ.

ಮೈಸೂರಿಗೆ ಐಬಿ ಏಕೆ ಬೇಕು? ಮೈಸೂರಿ ನಲ್ಲಿ ಸ್ಟಾರ್ಟ್–ಅಪ್ ಅಖಾಡವು ಬೆಳೆಯುತ್ತಿರುವಾಗ, ಬೆಂಗಳೂರಿನೊಂದಿಗೆ ನಿಕಟ ಸಂಬಂಧ ಹೊಂದಿರುವ ಮತ್ತು ಜಾಗತಿಕ ಮಾನ್ಯತೆ ಪಡೆಯುತ್ತಿರುವ ಈ ನಗರವು ಸಾಂಸ್ಕೃತಿಕ ನಗರದಿಂದ ಜ್ಞಾನ ಮತ್ತು ನಾವೀನ್ಯತಾ ಕೇಂದ್ರ ವಾಗಿ ನಿಧಾನವಾಗಿ ವಿಕಸನಗೊಳ್ಳುತ್ತಿದೆ. ಆದರೆ ಉದ್ಯಮಶೀಲತೆ ಕಚೇರಿಗಳಲ್ಲಿ ಪ್ರಾರಂಭವಾಗುವುದಿಲ್ಲ, ತರಗತಿಗಳಲ್ಲಿ ಪ್ರಾರಂಭವಾಗುತ್ತದೆ ಎಂಬುದನ್ನು ಅರಿಯುವುದು ನಿರ್ಣಾಯಕ.

ಉದ್ಯಮಶೀಲತೆಗೆ ಕುತೂಹಲ ಮತ್ತು ಸೃಜನಶೀಲತೆ ಬೇಕಾಗುತ್ತದೆ, ಐಬಿ ತರಗತಿಯು ಇದನ್ನು ಪ್ರೋತ್ಸಾಹಿಸುತ್ತದೆ, ವಿದ್ಯಾರ್ಥಿಗಳಿಗೆ



ಸರಿಯಾದ ಪ್ರಶ್ನೆಗಳನ್ನು ಕೇಳಲು ಮತ್ತು ನಾವೀನ್ಯತಾ ಪರಿಹಾರಗಳನ್ನು ಅನ್ವೇಷಿಸಲು ಪ್ರೇರೇಪಿಸುತ್ತದೆ, ಪ್ರಯತ್ನ, ವೈಫಲ್ಯ ಮತ್ತು ಕಲಿಕೆಯ ವಿಚಾರಣಾ ಚಕ್ರದ ಮೂಲಕ. ಐಬಿ ವಿದ್ಯಾರ್ಥಿಗಳು ತಮ್ಮ ಕಲಿಕೆಯ ಮೇಲೆ ಪ್ರತಿಬಿಂಬಿಸಲು ಸಮಯ ತೆಗೆದುಕೊಳ್ಳುತ್ತಾರೆ, ಅವರು ನಿರಂತರ ಸುಧಾರಣೆಯ ಹಾದಿಯಲ್ಲಿದ್ದಾರೆ ಎಂದು ಖಚಿತಪಡಿಸಿಕೊಳ್ಳುತ್ತಾರೆ.

ಪೋಷಕರಾಗಿ, ನಿಮಗೆ ಒಂದು ಸರಳ ಪ್ರಶ್ನೆಯನ್ನು ಕೇಳಿ "ನಾವು ವಿದ್ಯಾರ್ಥಿಗಳನ್ನು ಪರೀಕ್ಷೆಗಳಿಗೆ ಸಿದ್ಧಪಡಿಸುತ್ತಿದ್ದೇವೆಯೇ ಅಥವಾ ಜೀವನಕ್ಕೆ ಸಿದ್ಧಪಡಿಸುತ್ತಿದ್ದೇವೆಯೇ?" ಮತ್ತು ಉತ್ತರವು ಭವಿಷ್ಯವು ಕೇವಲ ಕಲಿಯುವವರಿಗೆ ಮಾತ್ರವಲ್ಲ, ಯೋಚಿಸುವ, ಸೃಷ್ಟಿಸುವ ಮತ್ತು ನಾಯಕತ್ವ ವಹಿಸುವವರಿಗೆ ಸೇರಿದೆ ಎಂದು ಖಚಿತಪಡಿಸುತ್ತದೆ. ನಮಗೆ ಯೋಚಿಸುವವರು ಬೇಕು, ಜ್ಞಾಪಕಕಾರರು ಅಲ್ಲ, ಸಮಸ್ಯೆ–ಸಮಾಧಾನಕಾರರು ಅಲ್ಲ, ಅನುಯಾಯಿಗಳಲ್ಲ, ನಾವೀನ್ಯತಕಾರರು ಬೇಕು ಮತ್ತು ಐಬಿ ಶಿಕ್ಷಣವು ಅಂತಹ ವ್ಯಕ್ತಿಗಳನ್ನು ಸೃಷ್ಟಿಸಲು ಅನನ್ಯವಾಗಿ ಸ್ಥಾನ ಪಡೆದಿದೆ.

ಉನ್ನತ ಸಾಧಕರಿಗೆ 100% ವಿದ್ಯಾರ್ಥಿವೇತನ
9 ಮತ್ತು 11ನೇ ತರಗತಿಗಳಿಗೆ ಪ್ರವೇಶಗಳು ತೆರೆದಿವೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
+91 9187363687

—Promotional Feature

ಮೈಸೂರು ಮಿತ್ರ

ಶನಿವಾರ 28 ಮಾರ್ಚ್ 2026

ವಿದ್ಯಾರ್ಥಿಗಳಿಂದ ಪಡೆದ ಹಣಕ್ಕೆ ನಕಲಿ ರಸೀದಿ ನೀಡಿ 2.36 ಕೋಟಿ ದುರುಪಯೋಗ

ಖಾಸಗಿ ಶಿಕ್ಷಣ ಸಂಸ್ಥೆಯ ಅಕೌಂಟೆಂಟ್ ಸತೀಶ್ ಸೇರಿ ನಾಲ್ವರ ವಿರುದ್ಧ ಕೇಸ್ ದಾಖಲು

ಮೈಸೂರು, ಮಾ.27(ಎಂಕೆ)– ಖಾಸಗಿ ಶಿಕ್ಷಣ ಸಂಸ್ಥೆಯೊಂದರ ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ಹಣ ಪಡೆದು ನಕಲಿ ರಸೀದಿಗಳನ್ನು ನೀಡಿ ಬರೋಬ್ಬರಿ 2,36,26000 ರೂ. ದುರುಪಯೋಗಪಡಿಸಿಕೊಂಡಿರುವ ನಾಲ್ವರ ವಿರುದ್ಧ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ರಿಂಗ್ ರಸ್ತೆಯ ಆರ್‌ಬಿಐ ಸಮೀಪದಲ್ಲಿರುವ ವಿಕ್ರಂ ಎಜುಕೇಷನ್ ಟ್ರಸ್ಟ್ ಹಾಗೂ ಸನತ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಕೆ.ಸತೀಶ್, ಸಹಾಯಕ ಅಕೌಂಟೆಂಟ್ ಶಿಲ್ಪಾ, ಕ್ಲರ್ಕ್ ಶಾಂತಪೂಜಾ ಹಾಗೂ ಅಟೆಂಡರ್ ಚಂದ್ರು ವಿರುದ್ಧ ಕೇಸ್ ದಾಖಲಾಗಿದೆ.

2005ರಿಂದ ವಿಕ್ರಂ ಎಜುಕೇಷನ್ ಟ್ರಸ್ಟ್ ಮೂಲಕ ಕಾಲೇಜು ಹಾಗೂ ತರಬೇತಿ ಸಂಸ್ಥೆ ನಡೆಸಲಾಗುತ್ತಿದ್ದು, ಸುಮಾರು 800 ವಿದ್ಯಾರ್ಥಿಗಳು ಆರೋಗ್ಯ ಶಿಕ್ಷಣ ಪಡೆಯುತ್ತಿದ್ದಾರೆ. ಕಳೆದ 8 ವರ್ಷಗಳಿಂದ ಟ್ರಸ್ಟ್ ಹಾಗೂ ಇನ್‌ಸ್ಟಿಟ್ಯೂಷನ್‌ನ ಅಕೌಂಟೆಂಟ್ ಆಗಿದ್ದ ಕೆ.ಸತೀಶ್, ಸಹಾಯಕ ಅಕೌಂಟೆಂಟ್ ಶಿಲ್ಪಾ, ಕ್ಲರ್ಕ್ ಶಾಂತಪೂಜಾ ಹಾಗೂ ಅಟೆಂಡರ್ ಚಂದ್ರು, ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ಹಣ ಪಡೆದು ನಕಲಿ ರಸೀದಿಗಳನ್ನು ನೀಡಿ, 2,36, 26000 ರೂ. ಹಣ ದುರುಪಯೋಗ ಪಡಿಸಿಕೊಂಡಿರುವುದು ಇತ್ತೀಚೆಗೆ ನಡೆದ ಆಂತರಿಕ ಪರಿಶೀಲನೆ ವೇಳೆ ಪತ್ತೆಯಾಗಿದೆ ಎಂದು ವಿಕ್ರಂ ಎಜುಕೇಷನ್ ಟ್ರಸ್ಟ್ ಹಾಗೂ ಸನತ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಮ್ಯಾನೇಜಿಂಗ್ ಟ್ರಸ್ಟಿ ಡಾ.ಹೆಚ್.ಎನ್.ಸನತ್ ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ಹಾಗೆಯೇ ಅಕೌಂಟೆಂಟ್ ಕೆ.ಸತೀಶ್, ಟ್ರಸ್ಟ್ ಹಾಗೂ ಕಾಲೇಜಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ನಾಶಪಡಿಸಿರುವ ಶಂಕೆ ಇದ್ದು, ಕಾಲೇಜಿನ ಮೂಲ ದಾಖಲೆಗಳನ್ನು ತನ್ನ ಬಳಿಯೇ ಇಟ್ಟುಕೊಂಡಿದ್ದಾನೆ. ಈತ ಕಚೇರಿ ವ್ಯವಸ್ಥೆಯ ಎಲ್ಲಾ ಡೇಟಾವನ್ನು ಅಳಿಸಿ ಪರಾರಿಯಾಗಿದ್ದು, ನನ್ನ ವೈಯಕ್ತಿಕ ಮ್ಯಾಕ್‌ಬುಕ್ ಮತ್ತು ಲ್ಯಾಪ್‌ಟಾಪ್‌ನಲ್ಲಿದ್ದ ಡೇಟಾ ಹ್ಯಾಕ್ ಮಾಡಿದ್ದಾನೆ. ಜೊತೆಗೆ ನನಗೆ ಜೀವ ಬೆದರಿಕೆ ಹಾಕುತ್ತಿದ್ದು, ಕಚೇರಿಯಿಂದ ತಮ್ಮ ವೈಯಕ್ತಿಕ ದಾಖಲೆಗಳನ್ನು ಕಳವು ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಯುವರಾಜ ಕಾಲೇಜು ಸ್ವಾಯತ್ತತೆ; ವಿವಿಧ ಕೋರ್ಸ್ ಮುಚ್ಚಿರುವ ವಿಚಾರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ. ಲೋಕನಾಥ್ ಹೇಳಿಕೆ ಬರೀ ಸುಳ್ಳೋ...ಸುಳ್ಳು...

● ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ. ಕೆ.ಎಸ್. ರಂಗಪ್ಪ ತೀವ್ರ ಬೇಸರ ● ಪ್ರತಿಭಾನ್ವಿತ ವಿದ್ಯಾರ್ಥಿಗಳೂ ಅಧಿಕ ಶುಲ್ಕ ಭರಿಸಬೇಕಾದ ಸಂಕಷ್ಟ; ಖಾಸಗಿ ಸಂಸ್ಥೆಗಳ ಮೊರೆ ● ವಿವಿಯಲ್ಲಿ ಅನೇಕ ಕೋರ್ಸ್‌ಗಳು ಪ್ರವೇಶವಿಲ್ಲದೆ ಮುಚ್ಚಿವೆ; ವಿವಿಧ ವಿಭಾಗಕ್ಕೆ ಬೀಗ ಹಾಕಲಾಗಿದೆ.

ಮೈಸೂರು, ಮಾ.27(ಎಂಕೆ)– ಯುವರಾಜ ಕಾಲೇಜಿನ ಸ್ವಾಯತ್ತತೆ ಹಿಂಪಡೆದಿರುವುದಕ್ಕೆ ಮೈಸೂರು ವಿವಿ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಗುರುವಾರ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯಲ್ಲಿ 'ಅನಿವಾರ್ಯ ಕಾರಣಕ್ಕೆ ಯುವರಾಜ ಕಾಲೇಜು ಸ್ವಾಯತ್ತತೆ ಹಿಂಪಡೆಯಲಾಗಿದೆ' ಎಂಬ ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ಅವರು, ಯುವರಾಜ ಕಾಲೇಜಿನ ಅನುದಾನದಲ್ಲಿ 1 ಕೋಟಿ ರೂ. ದುರ್ಬಳಕೆ ನಡೆದಿರುವುದರಿಂದ ಆಡಿಟ್ ಆಕ್ಷೇಪ ಉಂಟಾಗಿ ಸ್ವಾಯತ್ತತೆಗೆ ತೊಂದರೆ ಆಗಿದೆ ಎಂಬ ಹೇಳಿಕೆಗೂ ಸ್ವಾಯತ್ತತೆಗೂ ಸಂಬಂಧವೇ ಇಲ್ಲ ಎಂದಿದ್ದಾರೆ.

ಕಳೆದ ಮೂರು ವರ್ಷಗಳಿಂದ ಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿರುವ ಪ್ರೊ.ಎನ್.ಕೆ.ಲೋಕನಾಥ್ ಅವರು, ಈ ದುರ್ಬಳಕೆ ಬಗ್ಗೆ ಯಾಕೆ ಕ್ರಮ ತೆಗೆದುಕೊಂಡಿಲ್ಲ? ಕಳೆದ 25 ವರ್ಷದಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಯುವರಾಜ ಕಾಲೇಜಿಗೆ ಯುಜಿಸಿ ನೀಡಿದ ಸ್ವಾಯತ್ತತೆಯನ್ನು ಈಗ ನಿರಾಕರಿಸಿದರೆ ಕಾಲೇಜಿನ ಮೌಲ್ಯ ಕುಸಿಯಲಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸುಳ್ಳು ಹೇಳಿಕೆ ನೀಡುವ ಮೂಲಕ ಕುಲಪತಿ ಪ್ರೊ.ಲೋಕನಾಥ್, ಸಿಂಡಿಕೇಟ್ ಸದಸ್ಯರು ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರನ್ನು ದಾರಿ ತಪ್ಪಿಸುವ ಕೆಲಸ ಮಾಡಿದ್ದಾರೆ. ಯುವರಾಜ ಕಾಲೇಜಿನ ಸ್ವಾಯತ್ತ ಸ್ಥಾನಮಾನ ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಮತ್ತಷ್ಟು ಗಂಭೀರ ಆರೋಪಗಳು ಕೇಳಿ ಬರುತ್ತಿದ್ದು, ಉಪನ್ಯಾಸಕರಿಂದ 'ಸ್ವಾಯತ್ತತೆ ಬೇಡ' ಎಂಬ ಪತ್ರಗಳನ್ನು ಬಲವಂತವಾಗಿ ಬರೆಯಿಸಿಕೊಂಡು ಅಟಾನಮಸ್ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಕ್ರಮ ಶಿಕ್ಷಣ ಸಂಸ್ಥೆಯ ಸ್ವತಂತ್ರತೆಗೆ ಧಕ್ಕೆ ತರುವಂತದ್ದು ಎಂದಿದ್ದಾರೆ.

ನನ್ನ ಆಡಳಿತಾವಧಿಯಲ್ಲಿ ಯುವರಾಜ ಕಾಲೇಜಿಗೆ 16 ಕೋಟಿ ರೂ.ಅನುದಾನ ತಂದು, ಕಟ್ಟಡ ನಿರ್ಮಾಣ, ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. ನಾನು 2017ರಲ್ಲಿ ನಿವೃತ್ತಿಯಾಗುವ ವೇಳೆಗೂ ಯಾವುದೇ ಆಡಿಟ್ ಆಕ್ಷೇಪ ಇರಲಿಲ್ಲ. ಬೇಕಾದರೆ ಈ ವಿಷಯದ ಬಗ್ಗೆ ಬಹಿರಂಗ ಚರ್ಚೆಗೆ ಸಿದ್ಧನಿದ್ದೇನೆ ಎಂದು ತಿಳಿಸಿದ್ದಾರೆ.

ಎ–ಸ್ಕೀಂ ರದ್ದು; ಮೆರಿಟ್ ವಿದ್ಯಾರ್ಥಿಗಳಿಗೆ ಸಂಕಷ್ಟ: ಮಾನಸ ಗಂಗೋತ್ರಿಯಲ್ಲಿ ಜಾರಿಯಾಗಿದ್ದ 'ಎ–ಸ್ಕೀಂ ಮತ್ತು ಬಿ–ಸ್ಕೀಂ' ವ್ಯವಸ್ಥೆಯಲ್ಲೂ ಬದಲಾವಣೆಗಳಾಗಿರುವುದು ದೊಡ್ಡ ವಿವಾದಕ್ಕೆ ಕಾರಣವಾಗಿದೆ. ಎ–ಸ್ಕೀಂ ಅಡಿಯಲ್ಲಿ ಶೇ.50ರಷ್ಟು ಸೀಟುಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೀಸಲಿಟ್ಟು, ಉಳಿದ ಸೀಟುಗಳನ್ನು ಬಿ–ಸ್ಕೀಂ ಅಡಿಯಲ್ಲಿ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿತ್ತು.

ಮೈಸೂರು ವಿವಿಯಲ್ಲಿ ಪೆನಾಯಿಲ್‌ಗೂ ಹಣ ಇಲ್ಲ

ಮೈಸೂರು ವಿವಿಯ ಆಡಳಿತದ ವಾಸ್ತವ ಸ್ಥಿತಿ ಹೇಗಿದೆ ಎಂದರೆ, ಶೌಚಾಲಯ ಸ್ವಚ್ಛತೆಗೆ ಪೆನಾಯಿಲ್ ಖರೀದಿಸಲು ಹಣದ ಕೊರತೆ ಉಂಟಾಗಿದೆ. ಇನ್ನು ಸಂಶೋಧನೆಗೆ ಅಗತ್ಯವಾದ ರಾಸಾಯನಿಕ ವಸ್ತುಗಳು, ಕಲಿಕಾ ಸಾಧನಗಳ ಖರೀದಿಗೆ ಆರ್ಥಿಕ ನೆರವು ನೀಡುವುದಾದರೂ ಎಲ್ಲಿಂದ!? ದಿನ ನಿತ್ಯದ ನಿರ್ವಹಣೆಗೆ ಸಂಕಷ್ಟಪಡುವಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯದ ಗುಣಮಟ್ಟ ಹೇಗೆ ಉಳಿಯುತ್ತದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ಆತಂಕ ವ್ಯಕ್ತಪಡಿಸಿದ್ದಾರೆ.

ಆದರೆ, ಪ್ರೊ.ಲೋಕನಾಥ್ ಕುಲಪತಿಯಾಗಿ ಅಧಿಕಾರಕ್ಕೆ ಬಂದ ಬಳಿಕ ಎ–ಸ್ಕೀಂ ರದ್ದುಪಡಿಸಲಾಗಿದೆ. ಇದರಿಂದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ಅವಕಾಶದಿಂದ ವಂಚಿತರಾಗಿದ್ದಾರೆ. ಇದರಿಂದ ಅನಿವಾರ್ಯವಾಗಿ ಖಾಸಗಿ ಕಾಲೇಜುಗಳಿಗೆ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದ್ದಾರೆ.

ಅನೇಕ ಕೋರ್ಸ್‌ಗಳಿಗೆ ಬೀಗ: ಮೈಸೂರು ವಿವಿಯಲ್ಲಿ 'ಯಾವುದೇ ಕೋರ್ಸ್ ಮುಚ್ಚಿಲ್ಲ' ಎಂಬ ಕುಲಪತಿ ಲೋಕನಾಥ್ ಅವರ ಹೇಳಿಕೆಯಲ್ಲಿಯೂ ಸತ್ಯಾಂಶವಿಲ್ಲ. ಕಳೆದ 3 ವರ್ಷಗಳಲ್ಲಿ ಅನೇಕ ಕೋರ್ಸ್‌ಗಳ ಸ್ಥಗಿತಗೊಳಿಸಿ, ಅವುಗಳ ವಿಭಾಗಕ್ಕೆ ಬೀಗ ಹಾಕಲಾಗಿದೆ. ಹಾಗಾಗಿ ಶೈಕ್ಷಣಿಕ ವಾತಾವರಣದಲ್ಲಿ ಹಿನ್ನಡೆಯಾಗಿದೆ. ಈ ಕುರಿತು ಆಂತರಿಕ ತನಿಖೆ ನಡೆಸಿ ನಿಜಾಂಶ ಬಹಿರಂಗಪಡಿಸಲಿ ಎಂದು ಆಗ್ರಹಿಸಿದ್ದಾರೆ.

ವಿವಿ ಬೊಕ್ಕಸ ಖಾಲಿ: ನನ್ನ ಆಡಳಿತಾವಧಿಯಲ್ಲಿ ಪೆನ್ಷನರ್ಸ್ ಫಂಡ್, ಜನರಲ್ ಫಂಡ್ ಇತರೆ ಸಂಪನ್ಮೂಲಗಳ ಸೇರಿಸಿ ಸುಮಾರು 400 ಕೋಟಿ ರೂ. ಕಾರ್ಪಸ್ ನಿಧಿ ಸಂಗ್ರಹಿಸಲಾಗಿತ್ತು. ಆದರೆ, ಹಾಲಿ ಕುಲಪತಿಗಳು ಕೇವಲ ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಅತಿಯಾದ ಖರ್ಚು ಮಾಡುತ್ತಿದ್ದಾರೆ. ಇದರಿಂದ ವಿವಿಯ ಬೊಕ್ಕಸ ಖಾಲಿಯಾಗುತ್ತಿದೆ ಎಂದು ತಿಳಿಸಿದ್ದಾರೆ.

ಹೆಚ್‌ಪಿ ಗ್ಯಾಸ್; ಎಸ್‌ಎಂಎಸ್ ಆಧಾರಿತ ಬುಕ್ಕಿಂಗ್ ಸೇವೆ

ಮೈಸೂರು, ಮಾ.27– ಎಲ್‌ಪಿಜಿ ಹೆಚ್‌ಪಿ ಸಿಲಿಂಡರ್ ರೀಫಿಲ್ಲಿಂಗ್(ಮರುಪೂರಣ)ಗಾಗಿ ಎಸ್‌ಎಂಎಸ್ ಆಧಾರಿತ ಬುಕ್ಕಿಂಗ್ ಸೇವೆಯನ್ನು ಮತ್ತೆ ಸಕ್ರಿಯಗೊಳಿಸಲಾಗಿದೆ.

ಗ್ರಾಹಕರು BOOK ಎಂದು ಟೈಪ್ ಮಾಡಿ 88888 23456(ಐವಿಆರ್‌ಎಸ್ ಸಂಖ್ಯೆ)ಕ್ಕೆ ಸಂದೇಶ ಕಳುಹಿಸಿ ಅಥವಾ 9493602222 ಮಿಸ್ಡ್ ಕಾಲ್ ಮಾಡಿ ಎಸ್‌ಎಂಎಸ್ ಆಧಾರಿತ ಬುಕ್ಕಿಂಗ್ ವಿನಂತಿ ಸಲ್ಲಿಸಬಹುದು. ಯಶಸ್ವಿಯಾಗಿ ಬುಕ್ಕಿಂಗ್ ನಂತರ ಗ್ರಾಹಕರಿಗೆ ದೃಢೀಕರಣ ಸಂದೇಶ ರವಾನೆಯಾಗಲಿದೆ ಎಂದು ಭಾರತೀಯ ಎಲ್‌ಪಿಜಿ ವಿತರಕರ ಸಂಘದ(ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ ತಿಳಿಸಿದ್ದಾರೆ.

ದಾವಣಗೆರೆ ಉಪ ಚುನಾವಣೆಗೆ ನಿಯೋಜನೆ



ಮೈಸೂರು, ಮಾ.27– ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯು ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್ ಅವರನ್ನು ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿ, ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಂಜುನಾಥ್ ಆದೇಶ ಹೊರಡಿಸಿದ್ದಾರೆ.

ಇಂದು ವೈರಮುಡಿ ಉತ್ಸವ



ಮೈಸೂರು, ಮಾ.27(ಬಿಎಲ್‌ಯು)– ಮೈಸೂರಿನ ಮೇಟಗಳ್ಳಿಯ ಶ್ರೀ ಚೆಲುವ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ನಾಳೆ (ಮಾರ್ಚ್ 28) ಶ್ರೀ ವೈರಮುಡಿ ಉತ್ಸವ ನಡೆಯಲಿದೆ. ನಾಳೆ ರಾತ್ರಿ 7.30 ಗಂಟೆಗೆ ದೇವಸ್ಥಾನದಲ್ಲಿ ವೈರಮುಡಿ ಕಿರೀಟ ಧಾರಣೆ ನಡೆಯಲಿದ್ದು, 7.45 ಗಂಟೆಗೆ ಉತ್ಸವ ಆರಂಭಗೊಳ್ಳಲಿದೆ. 8.30 ಗಂಟೆಗೆ ಮಹಾ ಮಂಗಳಾರತಿ ನೆರವೇರಲಿದೆ. ತರುವಾಯ ತೀರ್ಥ ಪ್ರಸಾದ ವಿನಿಯೋಗವಿರುತ್ತದೆ.

ಶ್ರೀ ಭೈರವಿ ಗೌಡತಿ ಬಳಗದ ವಾರ್ಷಿಕೋತ್ಸವ; ಮಹಿಳಾ ದಿನಾಚರಣೆ



ಮೈಸೂರಿನ ಶ್ರೀ ಭೈರವಿ ಗೌಡತಿ ಬಳಗದ ಮೂರನೇ ವಾರ್ಷಿಕೋತ್ಸವ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕಿಯರನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.27– ಮೈಸೂರಿನ ಶ್ರೀ ಭೈರವಿ ಗೌಡತಿ ಬಳಗದ ಮೂರನೇ ವಾರ್ಷಿಕೋತ್ಸವ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹೆಬ್ಬಾಳ್ ರಿಂಗ್‌ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ನಿಶ್ಚಲಾನಂದ ಸ್ವಾಮೀಜಿ ಸಾನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕಿಯರಾದ ಜ್ಯೋತಿ ಉಮೇಶ್(ವೈದ್ಯಕೀಯ ಕ್ಷೇತ್ರ), ಅನಿತಾ ನಾರಾಯಣ್(ಕೃಷಿ), ರಶ್ಮಿ ವಿಶ್ವನಾಥ್(ಸಾಹಿತ್ಯ), ಆಶಾ ದೇವರಾಜ್(ಶಿಕ್ಷಣ), ಪರಿಮಳ ಮಂಜುನಾಥ್(ಉದ್ಯಮ) ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಶ್ರೀ ಭೈರವಿ ಗೌಡತಿ ಬಳಗದ ಪ್ರೇಮ ಶಂಕರೇಗೌಡ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕರಾದ ಗೌರಿ ಹರೀಶ್ ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ರಾಜ್ಯ ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ಖಜಾಂಚಿ ಕೆ.ವಿ.ಶ್ರೀಧರ್, ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಸಮಾಜ ಸೇವಕ ಚೇತನ್ ವಿಷಕಂಠೇಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಾದೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಭೈರವಿ ಬಳಗದ ಪ್ರಧಾನ ಕಾರ್ಯದರ್ಶಿ ರೇಣುಕಾ ಜಗದೀಶ್, ನಿರ್ದೇಶಕರಾದ ರಾಜೇಶ್ವರಿ ನಾಗರಾಜ್, ಗಾಯತ್ರಿ ಜಗದೀಶ್, ನಾಗಮಣಿ ಸುಬ್ರಮಣ್ಯ, ಸವಿತ ಗೋವಿಂದೇಗೌಡ, ಕಲಾವತಿ, ರಾಧಾ ಜಯರಾಮ್ ಸೇರಿದಂತೆ ಬಳಗದ ಎಲ್ಲಾ ಗೌಡತಿ ಸದಸ್ಯರು ಉಪಸ್ಥಿತರಿದ್ದರು.

ದಾವಣಗೆರೆ ದಕ್ಷಿಣ ಕಣದಿಂದ ಹಿಂದೆ ಸರಿದ ಸಾದಿಕ್ ಪೈಲ್ವಾನ್

ಬೆಂಗಳೂರು, ಮಾ.27– ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಂಡಾಯದ ಬಾವುಟ ಹಾರಿಸಿದ್ದ ಸಾದಿಕ್ ಪೈಲ್ವಾನ್, ಕಣದಿಂದ ಹಿಂದೆ ಸರಿದಿದ್ದಾರೆ.



ಉಪಚುನಾವಣೆಗೆ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಮಲ್ಲಿಕಾರ್ಜುನ್‌ಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದರಿಂದ ಅಸಮಾಧಾನಗೊಂಡು ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಸಾದಿಕ್, ನಾನು ಪೈಲ್ವಾನ್ ಅಖಾಡದಂತೆ ಚುನಾವಣೆಯಲ್ಲೂ ಪಟ್ಟು ಹಾಕಿ ಗೆಲುವು ಸಾಧಿಸುವುದು ಚೆನ್ನಾಗಿ ಗೊತ್ತಿದೆ ಎಂದು ಅಬ್ಬರಿಸಿದ್ದರು. ಆದರೆ ಇದೀಗ ತಾವು ಕಣದಿಂದ ಹಿಂದೆ ಸರಿದಿರುವುದಾಗಿ ಘೋಷಿಸಿದ್ದಾರೆ.

ಈ ವೇಳೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾದಿಕ್ ಪೈಲ್ವಾನ್ ಅವರು ನನಗೆ ಬಹಳ ವರ್ಷಗಳಿಂದ ಪರಿಚಯವಿದ್ದಾರೆ. ಮೈಸೂರಿನ ಕುಸ್ತಿ ಅಖಾಡಗಳಲ್ಲಿ ಅವರು ಪಾಲ್ಗೊಂಡಾಗ ನಾನು ಭೇಟಿಯಾಗುತ್ತಿದ್ದೆ. ಯಾರೇ ಅಭ್ಯರ್ಥಿಯಾಗಬೇಕೆಂದು ಬಯಸುವುದರಲ್ಲಿ ತಪ್ಪೇನಿಲ್ಲ. ಪಕ್ಷದ ಕೋರಿಕೆ ಮೇರೆಗೆ ಸಾದಿಕ್ ಅವರು ಕಣದಿಂದ ಹಿಂದೆ ಸರಿದಿದ್ದಾರೆ. ಇದಕ್ಕಾಗಿ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಅವರು ದಾವಣಗೆರೆಗೆ ಭೇಟಿ ನೀಡಿದ್ದರು. ಅವರು ತಲುಪುವುದು ತಡವಾದ್ದರಿಂದ ಸಾದಿಕ್ ನಾಮಪತ್ರ ಸಲ್ಲಿಸುವುದನ್ನು ತಡೆಯಲು ಸಾಧ್ಯವಾಗಲಿಲ್ಲ ಎಂದರು.

ನರ್ಸ್ ಪ್ರಾಕ್ಟೀಷನರ್ಸ್ ಇನ್ ಮಿಡ್‌ವೈಫರಿ ತರಬೇತಿ ಪೂರ್ಣ

ಮೈಸೂರು, ಮಾ.27– ರಾಜ್ಯ ಮಿಡ್‌ವೈಫರಿ ತರಬೇತಿ ಸಂಸ್ಥೆ ವತಿಯಿಂದ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ 18 ತಿಂಗಳ 'ನರ್ಸ್ ಪ್ರಾಕ್ಟೀಷನರ್ಸ್ ಇನ್ ಮಿಡ್‌ವೈಫರಿ' ತರಬೇತಿ ಪೂರ್ಣಗೊಳಿಸಿದ ಮೊದಲ ತಂಡಕ್ಕೆ ಪ್ರಮಾಣ ಪತ್ರ ವಿತರಿಸಲಾಯಿತು.



ರಾಜ್ಯ ಮಿಡ್ ವೈಫರಿ ತರಬೇತಿ ಸಂಸ್ಥೆ ವತಿಯಿಂದ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ 18 ತಿಂಗಳ 'ನರ್ಸ್ ಪ್ರಾಕ್ಟೀಷನರ್ಸ್ ಇನ್ ಮಿಡ್‌ವೈಫರಿ' ತರಬೇತಿ ಪೂರ್ಣಗೊಳಿಸಿದ ಮೊದಲ ತಂಡದೊಂದಿಗೆ ಗಣ್ಯರು.

ಚೆಲುವಾಂಬ ಆಸ್ಪತ್ರೆಯ ಶಿಶುವೈದ್ಯಶಾಸ್ತ್ರ ವಿಭಾಗದ ಕಾವೇರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ತರಬೇತಿ ಪೂರ್ಣಗೊಳಿಸಿದ ಬಳಿಕ ಕರ್ನಾಟಕ ರಾಜ್ಯ ಶುಶ್ರೂಷಕ ಪರೀಕ್ಷಾ ಮಂಡಳಿ ನಡೆಸಿದ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಸ್ತುತ ವಿವಿಧ ಮಿಡ್‌ವೈಫರಿ ಆರೈಕೆ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ, ಪ್ರಮಾಣಪತ್ರ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಆರ್.ಸುಧಾ, ಸ್ಥಾನೀಯ ವೈದ್ಯಾಧಿಕಾರಿ ಡಾ.ಎಂ.ಡಿ.ಶಿವರಾಮಕೃಷ್ಣ, ಪ್ರಸೂತಿ ಮತ್ತು ಸ್ತ್ರೀರೋಗಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಜಿ.ಲಕ್ಷ್ಮೀಕಾಂತ್, ಶಿಶುವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಪ್ರದೀಪ್, ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲ ಡಾ.ರವಿ ಲಕ್ಷ್ಮಣ್, ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ನಂದಪ್ರಕಾಶ್, ಶುಶ್ರೂಷಕ ಅಧೀಕ್ಷಕಿ ಲೀಲಾವತಿ, ಬೆಂಗಳೂರಿನ ಆಸ್ಟ್ರಿಕ್ ಫೌಂಡೇಷನ್‌ನ ಮಿಡ್‌ವೈಫರಿ ಇನಿಶಿಯೇಟಿವ್ ಸಂಸ್ಥೆಯ ನಿರ್ದೇಶಕರಾದ ಸಾರಾ ಕಾಕ್ಸೀನ್, ಕಾರ್ಯಕ್ರಮ ವ್ಯವಸ್ಥಾಪಕ ಭೀಮಾರಾಯ, ಉಪನ್ಯಾಸಕರು, ಯೋಜನಾ ಸಂಯೋಜಕರು ಮತ್ತಿತರರು ಉಪಸ್ಥಿತರಿದ್ದರು.

ಬಂಡೀಪುರದ ಮದ್ದೂರು ವಲಯದಲ್ಲಿ ಹೆಣ್ಣು ಹುಲಿ ಸೆರೆ; ನಾಗರಹೊಳೆ ಮೇಟಿಕುಪ್ಪೆ ವಲಯದಲ್ಲಿ ಉರುಳಿಗೆ ಗಂಡು ಹುಲಿ ಬಲಿ

● ಎರಡು ದಿನದ ಹಿಂದೆ ಹುಲಿ ಮರಿ ಸೆರೆ ಸಿಕ್ಕ ಸ್ಥಳದಲ್ಲೇ ನಿತ್ರಾಣಗೊಂಡ ಸ್ಥಿತಿಯಲ್ಲಿ ಹೆಣ್ಣು ಹುಲಿ ಪತ್ತೆ
● ಅರವಳಿಕೆ ಮದ್ದು ನೀಡಿ ಸೆರೆ ಹಿಡಿದು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರ
● ನಾಗರಹೊಳೆ ಮೇಟಿಕುಪ್ಪೆ ವಲಯದಲ್ಲಿ ಕಾಡಂದಿ ಬೇಟೆಗಾಗಿ ಇಟ್ಟಿದ್ದ ಉರುಳಿಗೆ ಗಂಡು ಹುಲಿ ಸಾವು



ಬಂಡೀಪುರ ವ್ಯಾಪ್ತಿಯ ಚನ್ನಮಲ್ಲೀಪುರದಲ್ಲಿ ಸೆರೆ ಸಿಕ್ಕ ಹುಲಿ.



ನಾಗರಹೊಳೆಯ ಮೇಟಿಕುಪ್ಪೆ ವಲಯದ ಅಗಸನಹುಂಡಿ ಬಳಿ ಉರುಳಿಗೆ ಮೃತಪಟ್ಟ ಹುಲಿ

ಮೈಸೂರು, ಮಾ.27(ಎಂಟಿವೈ)– ಕಾಡಂದಿ ಬೇಟೆಗಾಗಿ ಬೇಲಿ ಬಳಿಯಿಟ್ಟ ಉರುಳಿಗೆ ಎರಡು ವರ್ಷದ ಗಂಡು ಹುಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೇಟಿಕುಪ್ಪೆ ವಲಯದಲ್ಲಿ ಬಲಿಯಾಗಿದ್ದರೆ, ಕಳೆದ ಐದು ದಿನದ ಹಿಂದಷ್ಟೇ ಗಂಡು ಹುಲಿ ಮರಿ ಸೆರೆ ಸಿಕ್ಕ ಸ್ಥಳದಲ್ಲಿಯೇ ನಿತ್ರಾಣ ಸ್ಥಿತಿಯಲ್ಲಿದ್ದ 11 ವರ್ಷದ ಹೆಣ್ಣು ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿದು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಉರುಳಿಗೆ ಗಂಡು ಹುಲಿ ಬಲಿ: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೇಟಿಕುಪ್ಪೆ ವಲಯದ ಕಾಡಂಚಿನ ಗ್ರಾಮ ಅಗಸನಹುಂಡಿ ಗ್ರಾಮದ ಜಮೀನಲ್ಲಿ ಉರುಳಿಗೆ ಸಿಲುಕಿ 2 ವರ್ಷದ ಗಂಡು ಹುಲಿ ಮೃತಪಟ್ಟಿರುವುದು ಶುಕ್ರವಾರ ಮಧ್ಯಾಹ್ನ ಬೆಳಕಿಗೆ ಬಂದಿದೆ. ಅರಣ್ಯ ಪ್ರದೇಶದಿಂದ ಕೇವಲ 300 ಮೀಟರ್ ಅಂತರದಲ್ಲಿರುವ ಗಿರೀಶ್ ಹಾಗೂ ಬಾಲಶಂಕರ್ ಎಂಬುವವರಿಗೆ ಸೇರಿದ ಜಮೀನಿನ ನಡುವಿನ ಕಂದಕದಲ್ಲಿ ಹುಲಿ ಮೃತದೇಹ ಪತ್ತೆಯಾಗಿದ್ದು, ಸ್ಥಳಕ್ಕೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ, ಎಸಿಎಫ್ ಎಸ್.ಡಿ.ಮಧು, ಮೇಟಿಕುಪ್ಪೆ ಆರ್‌ಎಫ್‌ಓ ಎಂ.ಆರ್.ರಶ್ಮಿ, ಎನ್‌ಟಿಸಿಎ ಪ್ರತಿನಿಧಿ ತಮ್ಮಯ್ಯ ವೈಲ್ಡ್‌ಲೈಫ್ ಬೋರ್ಡ್ ಸದಸ್ಯ ರವೀಂದ್ರ ರಘುನಾಥ್ ಹಾಗೂ ಇನ್ನಿತರರು ಭೇಟಿ ನೀಡಿ ಪರಿಶೀಲಿಸಿದರು.

ಕಾಡಂದಿಗಾಗಿ ಉರುಳು: ಕಾಡಂಚಿನ ಹೊಲ, ತೋಟದಲ್ಲಿ ಕಾಡು ಹಂದಿಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಾಡಂದಿ ಹಾವಳಿಗೆ ಬೇಸತ್ತಿದ್ದ ಜನ, ಕಾಡಂದಿ ಬೇಟೆಯಾಡಲು ಬೇಲಿಯಲ್ಲಿ ಉರುಳು ಹಾಕಿರುವ ಶಂಕೆ ವ್ಯಕ್ತವಾಗಿದೆ. ಇತ್ತೀಚೆಗಷ್ಟೇ ತಾಯಿಯಿಂದ ಬೇರ್ಪಟ್ಟು ಹೊಸದಾಗಿ ಸರಹದ್ದು ಹುಡುಕಿಕೊಳ್ಳಲು ಪ್ರಯತ್ನಿಸುವ ಹಂತದಲ್ಲಿ ಎರಡು ವರ್ಷದ ಗಂಡು ಹುಲಿ ಆಕಸ್ಮಿಕವಾಗಿ ಬೇಲಿ ನುಸುಳುವ ವೇಳೆ ಉರುಳಿಗೆ ಸಿಲುಕಿದೆ. ಹುಲಿ ತಲೆ ಉರುಳಿಗೆ ಸಿಲುಕುತ್ತಿದ್ದಂತೆ ಬಿಡಿಸಿಕೊಳ್ಳಲು ಮುಂದೆ ನುಗ್ಗಿದೆ. ಈ ವೇಳೆ ಉರುಳಿಗೆ ಬಳಸಿದ್ದ ತಂತಿ ಕೊರೆದು ಹುಲಿ ಸ್ಥಳದಲ್ಲಿಯೇ ಮೃತಪಟ್ಟಿದೆ.

ಮರಣೋತ್ತರ ಪರೀಕ್ಷೆ: ಹುಲಿಯ ಕಳೇಬರವಿದ್ದ ಸ್ಥಳದ ಮಹಜರು ನಡೆಸಿ, ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ದು ಪಶುವೈದ್ಯ ಡಾ. ರಮೇಶ್ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಅರಣ್ಯ ಪ್ರದೇಶದಲ್ಲಿ ನಿಯಮಾನುಸಾರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಭೂ ಮಾಲೀಕರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಉರುಳು ತೆರವು ಅಭಿಯಾನಕ್ಕೆ ಒತ್ತಾಯ: ಮತ್ತಷ್ಟು ಪ್ರಾಣಿಗಳು ಉರುಳಿಗೆ ಬಲಿಯಾಗುವ ಮುನ್ನ ಅರಣ್ಯದಂಚಿನ ಹೊಲ, ತೋಟದ ಬೇಲಿಗಳಲ್ಲಿ ಉರುಳು ಶೋಧ ಕಾರ್ಯ ನಡೆಸುವಂತೆ ವನ್ಯಜೀವಿ ಪ್ರೇಮಿಗಳು ಆಗ್ರಹಿಸಿದ್ದಾರೆ. ಈ ಹಿಂದೆ ನಡೆಸಿದ ಶೋಧ ಕಾರ್ಯದಲ್ಲಿ ನೂರಾರು ಉರುಳು ಪತ್ತೆಯಾಗಿದ್ದವು.

ಬಂಡೀಪುರದಲ್ಲಿ ಹುಲಿ ರಕ್ಷಣೆ: ಆಹಾರ ಸೇವಿಸದೆ ನಿತ್ರಾಣಗೊಂಡ ಸ್ಥಿತಿಯಲ್ಲಿ ಕಳೆದ ಎರಡು ದಿನಗಳಿಂದ ಕಾಡಂಚಿನ ಗ್ರಾಮಗಳ ಹೊಲದಲ್ಲಿ ಕಾಣಿಸಿಕೊಳ್ಳುತ್ತಿದ್ದ 11 ವರ್ಷದ ಹೆಣ್ಣು ಹುಲಿಯನ್ನು ಐದು ದಿನದ ಹಿಂದೆ ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದ್ದು, ಆರೈಕೆಗಾಗಿ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಮರಿ ಸಿಕ್ಕ ಸ್ಥಳದಲ್ಲೇ ಹುಲಿ ಪತ್ತೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದ ಬರಗಿ ಶಾಖೆಯ ಹೊಂಗಳ್ಳಿ ಗಸ್ತು ಪ್ರದೇಶದ ಚನ್ನಮಲ್ಲೀಪುರ ಗ್ರಾಮದ ಜಮೀನೊಂದರಲ್ಲಿ ಗುರುವಾರ ಬೆಳಗ್ಗೆ ನಿತ್ರಾಣಗೊಂಡ ಸ್ಥಿತಿಯಲ್ಲಿದ್ದ ಹುಲಿ ಗ್ರಾಮಸ್ಥರ ಕಣ್ಣಿಗೆ ಬಿದ್ದಿತ್ತು. ಮಾಹಿತಿ ಪಡೆದು ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಹುಲಿಯ ಚಲನವಲನದ ಮೇಲೆ ನಿಗಾ ಇಟ್ಟಿದ್ದರು. ಸ್ಥಳಕ್ಕೆ ಮಹೇಂದ್ರ ಮತ್ತು ಭೀಮ ಆನೆಯನ್ನು ಕರೆಸಿ ಬಾಳೆ ಗದ್ದೆಯಿಂದ ಓಡಿಸುವ ಪ್ರಯತ್ನ ಮಾಡಲಾಯಿತು. ಆದರೆ, ಹುಲಿ ನಿತ್ರಾಣಗೊಂಡಿರುವುದು ಖಚಿತವಾದ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಸೆರೆ ಹಿಡಿಯಲು ನಿರ್ಧರಿಸಲಾಯಿತು.

ತಾಯಿ–ಮರಿ ಶಂಕೆ

ಮಾ.23ರಂದು ಸೆರೆ ಸಿಕ್ಕ ಮರಿ ಹಾಗೂ ಕಳೆದ ರಾತ್ರಿ ಸೆರೆ ಹಿಡಿದ ಹುಲಿ ಒಂದೇ ಸ್ಥಳದಲ್ಲಿ ಸಿಕ್ಕಿರುವ ಹಿನ್ನೆಲೆಯಲ್ಲಿ ಅವು ತಾಯಿ ಮರಿ ಎಂಬ ಶಂಕೆ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರದಲ್ಲಿ ಪಕ್ಕ ಪಕ್ಕದ ಕೊಠಡಿಯಲ್ಲಿಡಲಾಗಿದೆ. ಮರಿಯೊಂದು ಕೊಠಡಿಯಲ್ಲಿದ್ದು, ಹೆಣ್ಣು ಹುಲಿಯನ್ನು ಪಕ್ಕದ ಕೊಠಡಿಯಲ್ಲಿರಿಸಿ, ಅವುಗಳ ಚಲನವಲನದ ಮೇಲೆ ನಿಗಾ ಇಡಲಾಗಿದೆ. ಅವೆರಡು ತಾಯಿ ಮತ್ತು ಮರಿಯಾಗಿದ್ದರೆ, ತಾಯಿ ಹುಲಿ ಮರಿಯನ್ನು ಗುರುತಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಒಂದೇ ಸ್ಥಳದಲ್ಲಿ ಐದು ದಿನದ ಅಂತರದಲ್ಲಿ ಸಿಕ್ಕ ಎರಡು ಹುಲಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ.

ಭೀಮ ಆನೆ ಮೇಲಿದ್ದ ಪಶುವೈದ್ಯ ಡಾ. ವಾಸೀಂ ಮಿರ್ಜಾ ಮಹೇಂದ್ರ ಆನೆ ಮೇಲಿದ್ದ ಪಶುವೈದ್ಯ ಡಾ. ರಮೇಶ್ ಹುಲಿಗೆ ಅರವಳಿಕೆ ಮದ್ದು ನೀಡಿದರು. ಕೆಲ ನಿಮಿಷದಲ್ಲಿಯೇ ಮಂಪರಿಗೆ ಜಾರಿದ ಹುಲಿಯನ್ನು ಬೋನ್‌ಗೆ ಹಾಕಿ, ಚಿಕಿತ್ಸೆ ನೀಡಿ ಉಪಚರಿಸಲಾಯಿತು.

ಈ ಸಂದರ್ಭದಲ್ಲಿ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಎಸ್.ಪ್ರಭಾಕರನ್, ಸಿಎಫ್ ರವಿಶಂಕರ್, ಎಸಿಎಫ್ ಕೆ.ಸುರೇಶ್, ಎಸ್‌ಟಿಪಿಎಫ್ ಎಸಿಎಫ್ ಮಂಜುನಾಥ್, ಆರ್‌ಎಫ್‌ಓಗಳಾದ ಮಂಜುನಾಥ್, ಡಿಪುನೀತ್ ಕುಮಾರ್, ನಿಸಾರ್ ಅಹಮದ್, ವೈರಮುಡಿ, ಗುಂಡ್ಲುಪೇಟೆ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಸಬ್ ಇನ್ಸ್‌ಪೆಕ್ಟರ್ ನರೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಉರುಳಿಗೆ ಹುಲಿ ಸಾವು: ತನಿಖೆಗೆ ಈಶ್ವರ ಖಂಡ್ರೆ ಸೂಚನೆ

ಬೆಂಗಳೂರು, ಮಾ.27(ಎಂಟಿವೈ)– ನಾಗರಹೊಳೆಯ ಮೇಟಿಕುಪ್ಪೆ ವಲಯದ ಗಡಿಯಿಂದ 300 ಮೀಟರ್ ದೂರದ ಜಮೀನಿನಲ್ಲಿ ಅಕ್ರಮವಾಗಿ ಅಳವಡಿಸಿದ್ದ ಉರುಳಿಗೆ 3 ವರ್ಷದ ಹುಲಿ ಬಲಿಯಾಗಿರುವ ಬಗ್ಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಷಾದ ವ್ಯಕ್ತಪಡಿಸಿದ್ದಾರೆ.

ಈ ದುರ್ಘಟನೆಯ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಂಡದಿಂದ ತನಿಖೆ ಮಾಡಿಸಿ, ಸಿಬ್ಬಂದಿ ಗಸ್ತು ಕಾರ್ಯದಲ್ಲಿ ಲೋಪ ಎಸಗಿದ್ದಲ್ಲಿ ಕ್ರಮ ಕೈಗೊಳ್ಳುವುದು ಉರುಳು ಹಾಕಿದವರ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸುವುದು. ಇಂತಹ ಘಟನೆಗಳು ಮರುಕಳಿಸದಂತೆ ಕಾಡಿನಂಚಿನ ಜಮೀನುಗಳಲ್ಲಿ ಉರುಳು ತೆರವಿಗೆ ಕ್ರಮ ವಹಿಸಲು ಸೂಚಿಸಿದ್ದಾರೆ.

ಶಿಸ್ತು, ನಿಷ್ಠೆ, ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿ

● ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಸಲಹೆ
● ಕಿರಿಯ ಪವರ್ ಮ್ಯಾನ್‌ಗಳಿಗೆ ಒಂದು ದಿನದ ಪರಿಚಯಾತ್ಮಕ ತರಬೇತಿ



ಕಿರಿಯ ಪವರ್ ಮ್ಯಾನ್ ಹುದ್ದೆಗಳಿಗೆ ನೇಮಕಗೊಂಡ ಅಭ್ಯರ್ಥಿಗಳಿಗಾಗಿ ಕಡಕೊಳದ ಕೆಇಬಿಇಎ ತರಬೇತಿ ಕೇಂದ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಒಂದು ದಿನದ ಪರಿಚಯಾತ್ಮಕ ತರಬೇತಿ ಕಾರ್ಯಕ್ರಮವನ್ನು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಉದ್ಘಾಟಿಸಿದರು.

ಮೈಸೂರು, ಮಾ.27– ಶಿಸ್ತು, ನಿಷ್ಠೆ ಮತ್ತು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿದರೆ ಮಾತ್ರ ನಿಮ್ಮ ಬದುಕಿನಲ್ಲಿ ಪ್ರಗತಿ ಸಾಧ್ಯ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಕಿರಿಯ ಪವರ್ ಮ್ಯಾನ್‌ಗಳಿಗೆ ಕಿವಿಮಾತು ಹೇಳಿದರು.

ಕಿರಿಯ ಪವರ್ ಮ್ಯಾನ್ ಹುದ್ದೆಗಳಿಗೆ ನೇಮಕಗೊಂಡ ಅಭ್ಯರ್ಥಿಗಳಿಗಾಗಿ ಕಡಕೊಳದ ಕೆಇಬಿಇಎ ತರಬೇತಿ ಕೇಂದ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಒಂದು ದಿನದ ಪರಿಚಯಾತ್ಮಕ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಉದ್ಯೋಗ ಸಿಗುವುದು ಕಷ್ಟಕರವಾದ ಈ ಸಂದರ್ಭದಲ್ಲಿ ನಿಮಗೆ ದೊರೆತಿರುವ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸಬೇಕೆಂದು ಸಲಹೆ ನೀಡಿದರು.

ಕಿರಿಯ ಪವರ್ ಮ್ಯಾನ್‌ಗಳಿಗೆ ಅವರುಗಳ ವಿದ್ಯಾರ್ಹತೆಗೆ ಅನುಗುಣವಾಗಿ ತರಬೇತಿ ನೀಡಲಾಗಿದ್ದು, ರೋಸ್ಟರ್ ಆಧಾರದ ಮೇಲೆ ಎಲ್ಲರಿಗೂ ಉದ್ಯೋಗ ಲಭಿಸಿದೆ. ಶಿಸ್ತುಬದ್ಧ ಮತ್ತು ಪ್ರಾಮಾಣಿಕ ರೀತಿಯಲ್ಲಿ ನೇಮಕಾತಿ ನಡೆದಿದ್ದು, ಇಲಾಖೆಯಲ್ಲಿ ಕಾರ್ಯನಿರ್ವಹಿಸಲು ಅಂಕಗಳಿಗಿಂತ ಶಿಸ್ತು ಮತ್ತು ನಿಷ್ಠೆ ಮುಖ್ಯವಾಗಿದೆ. ಇಂದು ತಾಂತ್ರಿಕವಾಗಿ ಸುಸಜ್ಜಿತ ವ್ಯವಸ್ಥೆ ಇಲಾಖೆಯಲ್ಲಿ ಲಭ್ಯವಿದ್ದು, ಅಭ್ಯರ್ಥಿಗಳು ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮಾತ್ರ ಉದ್ಯೋಗದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪವರ್ ಮ್ಯಾನ್‌ಗಳು ಸಂಸ್ಥೆ ಹಾಗೂ ಗ್ರಾಹಕರ ನಡುವಿನ ಪ್ರಮುಖ ಸಂಪರ್ಕ ಕೊಂಡಿಯಾಗಿದ್ದು, ಅವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಶಿಸ್ತಿನಿಂದ ಕೆಲಸ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ತರಬೇತಿ ಹಾಗೂ ಸೇವಾ ಅವಧಿಯಲ್ಲಿ ಶಿಸ್ತು ಪಾಲಿಸದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಹಿರಿಯರು ನೀಡುವ ಮಾರ್ಗದರ್ಶನವನ್ನು ಪಾಲಿಸಿ, ಒಗ್ಗಟ್ಟಿನಿಂದ ಕೆಲಸ ಮಾಡಿ ಸಂಸ್ಥೆಯ ಗೌರವವನ್ನು ಹೆಚ್ಚಿಸಬೇಕು. ಕೆಲಸದ ವೇಳೆ ಸುರಕ್ಷತೆ ಅತ್ಯಂತ ಮುಖ್ಯ. ವಿದ್ಯುತ್ ಅವಘಡಗಳನ್ನು ತಪ್ಪಿಸಲು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಗ್ರಾಹಕರಿಗೆ ನಿರಂತರ ಮತ್ತು ಅಡಚಣೆ ರಹಿತ ವಿದ್ಯುತ್ ಪೂರೈಕೆ ಮಾಡುವುದು ನಮ್ಮ ಗುರಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಇಂಜಿನಿಯರ್‌ಗಳಾದ ಯೋಗೇಗೌಡ, ಮೋಹನ್ ಶಂಕರ್, ಚನ್ನವೀರಯ್ಯ, ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಎಂ.ವೈ.ಹೇಮಾ, ಎಇಇಗಳಾದ ರಾಮಚಂದ್ರ, ಅನೀಶ್ ಪಾತಕ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಶ್ರದ್ಧಾ–ಭಕ್ತಿಯ ಶ್ರೀರಾಮನವಮಿ ಆಚರಣೆ

ಎಲ್ಲೆಡೆ ಪಾನಕ, ಮಜ್ಜಿಗೆ, ಅನ್ನಸಂತರ್ಪಣೆ, ಉತ್ತಮ ಪುರುಷನ ವಿಶೇಷ ಆರಾಧನೆ



ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದ ಬಳಿ ಕಟ್ಟೆ ಬಳಗ ವತಿಯಿಂದ ಶ್ರೀರಾಮ ನವಮಿ ಅಂಗವಾಗಿ ಅನ್ನಸಂತರ್ಪಣೆ ನಡೆಯಿತು.



ಮೈಸೂರು ಯುವ ಬಳಗವು ದೇವರಾಜ ಅರಸ್ ರಸ್ತೆಯಲ್ಲಿ ಆಯೋಜಿಸಿದ್ದ ಶ್ರೀರಾಮ ನವಮಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಭಕ್ತರಿಗೆ ಪ್ರಸಾದ ವಿತರಿಸಿದರು.



ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಾಲಯದಲ್ಲಿ ತಾರಕ ಹೋಮದಲ್ಲಿ ಪಾಲ್ಗೊಂಡ ಭಕ್ತರು.

ಮೈಸೂರು, ಮಾ.27(ಎಂಟಿವೈ)– ಮೈಸೂರಿನಲ್ಲಿ ಶುಕ್ರವಾರ ಶ್ರೀರಾಮ ನವಮಿಯನ್ನು ಶ್ರದ್ಧಾ–ಭಕ್ತಿಯಿಂದ ಆಚರಿಸಿ, ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ ಸೇರಿದಂತೆ ಇನ್ನಿತರ ತಿನಿಸನ್ನು ಹಂಚಿ ಸಂಭ್ರಮಿಸಲಾಯಿತು.

ಹಿಂದೂ ಸಂಪ್ರದಾಯದಲ್ಲಿ ಶ್ರೀರಾಮ ನವಮಿಗೆ ವಿಶೇಷ ಮಹತ್ವವಿದ್ದು, ಯುಗ ಪುರುಷ ಶ್ರೀರಾಮನನ್ನು ವಿಶೇಷವಾಗಿ ಆರಾಧಿಸುವ ಪದ್ಧತಿ ಇದ್ದು, ಇಂದು ಶ್ರೀರಾಮ ನವಮಿ ಅಂಗವಾಗಿ ಎಲ್ಲೆಡೆ ಶ್ರೀರಾಮನ ಭಾವಚಿತ್ರವನ್ನು ಪೂಜಿಸುವ ಮೂಲಕ ಶ್ರದ್ಧಾಭಕ್ತಿಯೊಂದಿಗೆ ಶ್ರೀರಾಮ ನವಮಿ ಆರಾಧಿಸಿ, ರಾಮ ನಾಮ ಜಪಿಸಲಾಯಿತು. ಎಲ್ಲೆಲ್ಲೂ ಶ್ರೀರಾಮನಿಗೆ ಜೈಕಾರ ಘೋಷಣೆ ಮೊಳಗಿಸುತ್ತಾ ಯುವಕರು ಸಂಭ್ರಮಿಸಿದರು.

ಕಟ್ಟೆ ಬಳಗದಿಂದ ಅನ್ನ ಸಂತರ್ಪಣೆ: ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದ ಬಳಿ ರಸ್ತೆ ಬದಿ ಶ್ರೀರಾಮ ನವಮಿಯನ್ನು ಸಾಂಪ್ರದಾಯಿಕವಾಗಿ ಆಚರಿಸಲಾಯಿತು. ಕಟ್ಟೆ ಬಳಗದ ಸ್ನೇಹಿತರು ಶ್ರೀರಾಮನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಬಳಿಕ ಅವರು ಅನ್ನದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ವೀರಾಂಜನೇಯಸ್ವಾಮಿ ದೇವಾಲಯದಲ್ಲಿ ನಡೆದ ಶ್ರೀರಾಮ ನವಮಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಭಕ್ತರು.

ಸಾವಿರಾರು ಭಕ್ತರು, ಸಾರ್ವಜನಿಕರಿಗೆ ಪ್ರಸಾದ ವಿತರಿಸಲಾಯಿತು. ಮೊಸರನ್ನ, ಬಿಸಿಬೇಳೆ ಬಾತ್, ಕೇಸರಿ ಬಾತ್, ಕೋಸಂಬರಿ, ಪಾನಕ, ಮಜ್ಜಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕಟ್ಟೆ ಬಳಗದ ಮುಖಂಡರಾದ ಚೆಟ್ಟಿ, ಜಗ್ಗಿ, ನಾಗೇಂದ್ರ ಪ್ರಸಾದ್, ಬಿಳಿಕೆರೆ ಅರುಣ, ಗುರುಪ್ರಸಾದ್, ಮಾದೇಗೌಡ, ದರ್ಶನ್ ಸೇರಿದಂತೆ ಹಲವು ಮಂದಿ ಪಾಲ್ಗೊಂಡಿದ್ದರು.

ದೇವರಾಜ ಅರಸು ರಸ್ತೆಯಲ್ಲಿ: ಮೈಸೂರಿನ ದೇವರಾಜ ರಸ್ತೆಯ ನಾರಾಯಣ ಶಾಸ್ತ್ರಿ ಜಂಕ್ಷನ್‌ನಲ್ಲಿ ಶ್ರೀರಾಮ ನವಮಿ ಆಚರಿಸಲಾಯಿತು. ಮೈಸೂರು ಯುವ ಬಳಗದ ವತಿಯಿಂದ ಆಯೋಜಿಸಿದ್ದ ಶ್ರೀರಾಮ ನವಮಿ ಕಾರ್ಯಕ್ರಮದಲ್ಲಿ ಹಲವರು ಪಾಲ್ಗೊಂಡು ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಇದೇ ವೇಳೆ ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದಲ್ಲಿ ಭಾಗವಹಿಸಿ, ಭಕ್ತರಿಗೆ ಪ್ರಸಾದ ವಿತರಿಸಿದರು. ದಾರಿ ಹೋಕರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿ ಚಂದ್ರ, ಮೈಸೂರು ರಕ್ಷಣಾ ವೇದಿಕೆ ಯುವ ಘಟಕದ ಅಧ್ಯಕ್ಷ ಗುರುರಾಜ್, ರಾಮರಾಜ್, ಸಂದೀಪ್, ನವೀನ್, ಸಂತೋಷ್, ಪ್ರವೋದ್, ನಿತಿನ್, ಶ್ರೀನಿವಾಸ್, ಎಸ್.ಎನ್.ರಾಜೇಶ್, ಮಂಜುನಾಥ್, ಹರೀಶ್ ಗೌಡ, ಹೇಮಂತ್, ಹರ್ಷ ಇನ್ನಿತರರರು ಉಪಸ್ಥಿತರಿದ್ದರು.

ರಾಮ ತಾರಕ ಹೋಮ: ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಶ್ರೀ ರಾಮನವಮಿ ಅಂಗವಾಗಿ ಲೋಕ ಕಲ್ಯಾಣಾರ್ಥವಾಗಿ ಶ್ರೀರಾಮ ತಾರಕ ಹೋಮ ನೆರವೇರಿಸಲಾಯಿತು. ಪ್ರಧಾನ ಅರ್ಚಕರಾದ ವಿದ್ವಾನ್ ಎಸ್.ಕೃಷ್ಣಮೂರ್ತಿ ನೇತೃತ್ವದಲ್ಲಿ ಪಂಚಮುಖಿ ಆಂಜನೇಯ ಸ್ವಾಮಿ ಹಾಗೂ ಶ್ರೀರಾಮನಿಗೆ ವಿಶೇಷ ಅಭಿಷೇಕ ನೆರವೇರಿಸಲಾಯಿತು. ಬಳಿಕ ಭಕ್ತರಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು.

ನಾರಾಯಣಶಾಸ್ತ್ರಿ ರಸ್ತೆ: ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ವೀರಾಂಜನೇಯಸ್ವಾಮಿ ದೇವಾಲಯದಲ್ಲಿ ಶ್ರೀರಾಮ ನವಮಿ ಅದ್ದೂರಿಯಾಗಿ ಜರುಗಿತು. 23ನೇ ವಾರ್ಡ್ ಸ್ನೇಹ ಬಳಗದ ವತಿಯಿಂದ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. 2 ಸಾವಿರ ಭಕ್ತರಿಗೆ ಪಾನಕ, ಮಜ್ಜಿಗೆ, ಪುಳಿಯೊಗರೆ, ಲಾಡು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸದ್ವಿದ್ಯಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಆಯೋಜಕ ಪರಮೇಶ್‌ಗೌಡ, ಮುಖಂಡರಾದ ಸಂದೇಶ, ಪ್ರಮೋದ್, ಸುರೇಂದ್ರ, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ವಸಂತ ಮಣೀಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ಆಂಜನೇಯಸ್ವಾಮಿ ದೇಗುಲಗಳಲ್ಲಿ ಪೂಜೆ: ಮೈಸೂರಿನ ವಿವಿಧೆಡೆಯಿರುವ ಆಂಜನೇಯಸ್ವಾಮಿ ದೇವಾಲಯಗಳಲ್ಲಿ ಶ್ರೀರಾಮ ನವಮಿಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಾಲಯ, ಅಗ್ರಹಾರದ ಪಾತಾಳ ಆಂಜನೇಯ, ದೇವರಾಜ ಅರಸು ರಸ್ತೆ, ತ್ಯಾಗರಾಜ ರಸ್ತೆ, ಹನುಮಂತನಗರದ ಆಂಜನೇಯಸ್ವಾಮಿ ದೇಗುಲ, ಕುವೆಂಪು ನಗರ ಸೇರಿದಂತೆ ವಿವಿಧೆಡೆ ಇರುವ ಆಂಜನೇಯಸ್ವಾಮಿ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯ ಜರುಗಿದವು. ಅಪಾರ ಸಂಖ್ಯೆಯ ಭಕ್ತರು ಆಂಜನೇಯ ಸ್ವಾಮಿ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಅಲ್ಲದೆ, ರಾಮಕೃಷ್ಣನಗರದಲ್ಲಿರುವ ಶಿರಡಿ ಸಾಯಿ ಶಕ್ತಿ ಸನ್ನಿಧಿಯಲ್ಲೂ ಶ್ರೀರಾಮ ನವಮಿ ಆಚರಿಸಲಾಯಿತು. ಬೆಳಗ್ಗಿನಿಂದ ವಿಶೇಷ ಪೂಜಾ ಕೈಂಕರ್ಯ ಜರುಗಿದವು.

ಶ್ರೀರಾಮ ದೇಗುಲ, ಮಂದಿರದಲ್ಲೂ ಪೂಜೆ

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿಯಿರುವ ಶ್ರೀರಾಮ ದೇವಾಲಯದಲ್ಲಿ ಬೆಳಗ್ಗಿನಿಂದಲೇ ವಿಶೇಷ ಪೂಜೆ ನೆರವೇರಿತು. ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ದರ್ಶನ ಪಡೆದು ಸಂಭ್ರಮಿಸಿದರು. ಅಲ್ಲದೆ, ಮೈಸೂರಿನ ವಿವಿಧೆಡೆಯಿರುವ ಶ್ರೀರಾಮ ಮಂದಿರಗಳಲ್ಲೂ ಶ್ರೀರಾಮ ನವಮಿ ಆಚರಿಸಲಾಯಿತು.



ಮೈಸೂರು ಅರಮನೆಯ ವರಹಾ ದ್ವಾರದ ಬಳಿ ಭಕ್ತರಿಗೆ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮಜ್ಜಿಗೆ, ಪಾನಕ ವಿತರಿಸಿದರು.

ಚಿಕ್ಕಾಂಜನೇಯಸ್ವಾಮಿ ದೇವಾಲಯದಲ್ಲಿ ರಾಮನವಮಿ



ಮೈಸೂರಿನ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿನ ಚಿಕ್ಕಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮನವಮಿ ಪ್ರಯುಕ್ತ ವಿಶೇಷ ಪೂಜೆ ನೆರವೇರಿಸಿ, ದೇವಸ್ಥಾನ ಸೇವಾ ಸಮಿತಿ ವತಿಯಿಂದ ಸಾರ್ವಜನಿಕರಿಗೆ ಮಜ್ಜಿಗೆ–ಪಾನಕ ವಿತರಿಸಲಾಯಿತು. ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರಪಾಲಿಕೆ ಮಾಜಿ ಸದಸ್ಯ ರಾಜಶೇಖರ ಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಗಣೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಆಶ್ರಯ ಸಮಿತಿ ಸದಸ್ಯಗುಣಶೇಖರ್, ದೇವಸ್ಥಾನ ಸೇವಾ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.


ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮಾ.27– ವಿಜಯನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಮಾ.29 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಗೋಕುಲಂ 1ನೇ ಮತ್ತು 2ನೇ ಹಂತ, ಮಹದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮಿಪುರಂ, ಆಕಾಶವಾಣಿ, ಇ.ಎಸ್.ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪಾ ರಸ್ತೆ, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ ಬಡಾವಣೆ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಟಾರ್ ಬೇ, ಸಿ.ಎಸ್.ಆರ್ ಹಾಗೂ ಸುತ್ತಮುತ್ತಲ ಪ್ರದೇಶಗಳು.

ಗೋಕುಲ್‌ದಾಸ್ ವಿದ್ಯುತ್ ಮಾರ್ಗಗಳ ಬಳಿ ಇರುವ ಕೊಳವೆ ಬಾವಿಯ ದುರಸ್ತಿ ಕಾರ್ಯದ ನಿಮಿತ್ತ ಮಾರ್ಚ್ 29 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಹೂಟಗಳ್ಳಿ ಮತ್ತು ಬೆಳವಾಡಿ ಕೈಗಾರಿಕ ಪ್ರದೇಶ, ಲಿಂಗದೇವರ ಕೊಪ್ಪಲು, ಜಾಕಿ ಫ್ಯಾಕ್ಟರಿ, ಕೆ.ಆರ್.ಎಸ್ ರಸ್ತೆ(ಸಿ.ಜಿ ಬ್ಲಾಕ್), ಕಿರ್ಲೋಸ್ಕರ್ ಕೈಗಾರಿಕೆ, ಗೋಕುಲ್‌ದಾಸ್ ಕೈಗಾರಿಕೆ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಆಯುರ್ವೇದ ಚಿಕಿತ್ಸೆ ದೇಹ–ಆತ್ಮದ ಸಮತೋಲನ ಕಾಪಾಡಲಿದೆ

'ಪ್ರದಾನಮ್' ಕಾರ್ಯಕ್ರಮದಲ್ಲಿ ಆಯುಷ್ ಆಯುಕ್ತ ಪನ್ವರ್ ಅಭಿಮತ



ಮ್ಯಾಗ್ನ ಎಲೆಕ್ಟ್ರಾನಿಕ್ಸ್ ಸಿಸ್ಟಂ ಎಂಜಿನಿಯರ್ ಬಿ.ಇ.ಸತೀಶ್ ಅವರು ವೈದ್ಯಕೀಯ ಉಪಕರಣಗಳನ್ನು ಪ್ರಾಚಾರ್ಯ ಶ್ರೀವತ್ಸ ಅವರಿಗೆ ಹಸ್ತಾಂತರಿಸಿದರು.

ಮೈಸೂರು, ಮಾ.27(ವಿವಿಹೆಚ್)– ಭಾರತದ ಪುರಾತನ ಮತ್ತು ಅಮೂಲ್ಯವಾದ ಪರಂಪರಾಗತ ಜ್ಞಾನದ ಕೊಡುಗೆಗಳಲ್ಲಿ ಆಯುರ್ವೇದವು ಪ್ರಮುಖವಾಗಿದೆ ಎಂದು ಆಯುಷ್ ಇಲಾಖೆ ಆಯುಕ್ತ ಸುನಿಲ್ ಪನ್ವರ್ ತಿಳಿಸಿದರು.

ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶುಕ್ರವಾರ ನಡೆದ 'ಪ್ರದಾನಮ್' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆಯುರ್ವೇದ ಕೇವಲ ಔಷಧೋಪಚಾರವಾಗಿರದೆ ಪುರಾತನ, ನೈಸರ್ಗಿಕ ಮತ್ತು ಸಮಗ್ರ ಆರೋಗ್ಯ ವ್ಯವಸ್ಥೆಯ ಮೂಲವಾಗಿದೆ. ಆಯುರ್ವೇದ ಚಿಕಿತ್ಸೆ ದೇಹ ಮತ್ತು ಆತ್ಮದ ಸಮತೋಲನ ಕಾಯ್ದುಕೊಳ್ಳಲು ಕ್ರಮ ವಹಿಸುತ್ತದೆ. ಜೊತೆಗೆ ಇದು ಆಹಾರ ಕ್ರಮ, ಜೀವನಶೈಲಿ ಮತ್ತು ಯೋಗವನ್ನು ಒಳಗೊಂಡಿದೆ ಎಂದರು.

ಪ್ರಸ್ತುತ ಆಧುನಿಕ ಜೀವನಶೈಲಿಯ ಬದಲಾವಣೆಗಳು ಮಾನವನನ್ನು ಹೆಚ್ಚಿನ ಒತ್ತಡಕ್ಕೆ ದೂಡಿದ್ದು, ಇದರಿಂದಾಗಿ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳಾಗುತ್ತಿವೆ. ಜೀವನಶೈಲಿ, ಆಹಾರ ಕ್ರಮ ಮತ್ತು ದೈಹಿಕ ಚಟುವಟಿಕೆಯ ಕೊರತೆಯಿಂದಾಗಿ ಅನೇಕ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ ಎಂದರು.

ಆಯುರ್ವೇದ ಆರೋಗ್ಯ ಕುರಿತು ತಿಳಿಸುವ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯಾಗಿದೆ. ಇದು ರೋಗಗಳ ತಡೆಗಟ್ಟುವಿಕೆ, ರೋಗನಿರ್ಣಯ, ಚಿಕಿತ್ಸೆ ಮತ್ತು ಆರೋಗ್ಯದ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇದು ಪ್ರಾಚೀನ ಕಾಲದಿಂದ ಆಧುನಿಕ ತಂತ್ರಜ್ಞಾನದವರೆಗೆ ವಿಕಸನಗೊಂಡಿದೆ ಎಂದು ತಿಳಿಸಿದರು.

ಮ್ಯಾಗ್ನ ಎಲೆಕ್ಟ್ರಾನಿಕ್ಸ್ ಸಿಸ್ಟಂ ಎಂಜಿನಿಯರ್ ಬಿ.ಇ.ಸತೀಶ್ ಮಾತನಾಡಿ, 117 ವರ್ಷಗಳ ಇತಿಹಾಸವಿರುವ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಿಂದ ನಮ್ಮ ಮೂಲ ಮತ್ತು ಪುರಾತನ ವೈದ್ಯಕೀಯ ಪದ್ಧತಿಯನ್ನು ಕಾಪಾಡುವುದರ ಜೊತೆಗೆ, ಗಣನೀಯ ಸೇವೆ ಸಲ್ಲಿಸುತ್ತಿರುವುದು ಮೆಚ್ಚುಗೆಯ ಸಂಗತಿಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮ್ಯಾಗ್ನ ಇಲೆಕ್ಟ್ರಾನಿಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವತಿಯಿಂದ ಮಹಾವಿದ್ಯಾಲಯಕ್ಕೆ ಖುರ್ಚಿ, ಮೇಜು, ಬೀರು, ವೈದ್ಯಕೀಯ ಉಪಕರಣಗಳು ಸೇರಿದಂತೆ 27.37 ಲಕ್ಷ ರೂ. ಮೌಲ್ಯದ ಅಗತ್ಯ ಉಪಕರಣಗಳನ್ನು ಕೊಡುಗೆಯಾಗಿ ನೀಡಲಾಯಿತು.

ವಿವೇಕಾನಂದ ಯೋಗ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ನಿರ್ದೇಶಕ ಪಿ.ಎನ್.ಗಣೇಶ್ ಕುಮಾರ್, ಪ್ರಾಚಾರ್ಯ ಶ್ರೀವತ್ಸ, ಸಹಾಯಕ ಆಡಳಿತಾಧಿಕಾರಿ ಲೋಕೇಶ್ ಡಿ.ಸಿ, ಸ್ಥಾಯಿ ವೈದ್ಯಾಧಿಕಾರಿ ಎಚ್.ಕೆ. ಶಶಿರೇಖಾ ಉಪಸ್ಥಿತರಿದ್ದರು.

ಮಾ.30ರಂದು ಸ್ವಚ್ಛತಾ ಮ್ಯಾರಥಾನ್ ಕಾರ್ಯಕ್ರಮ

ಮೈಸೂರು, ಮಾ.27– ಬನ್ನೂರು ಪುರಸಭಾ ಕಾರ್ಯಾಲಯದ ವತಿಯಿಂದ ಸ್ವಚ್ಛಭಾರತ್–2.0 ಯೋಜನೆಯಡಿ ಸ್ವಚ್ಛ ಸರ್ವೇಕ್ಷಣೆ–2025–26ರ ಪ್ರಯುಕ್ತ ಬನ್ನೂರು ಪಟ್ಟಣದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲು ಬನ್ನೂರು ಖಾಸಗಿ ಬಸ್ ನಿಲ್ದಾಣದ ಮೂಲಕ ಋತುಶ್ರೀ ಸ್ಟುಡಿಯೋದಿಂದ ಫುಟ್‌ಬಾಲ್ ಮೈದಾನದವರೆಗೆ ಒಟ್ಟು 4 ಕಿ.ಮೀ ಮ್ಯಾರಥಾನ್ ಕಾರ್ಯಕ್ರಮವನ್ನು ಮಾ.30 ರಂದು ಬೆಳಿಗ್ಗೆ 6 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮಕ್ಕೆ ಪತ್ರಿಕಾ ರಂಗದಲ್ಲಿನ 18 ರಿಂದ 40 ವರ್ಷ ವಯೋಮಿತಿಯಲ್ಲಿರುವವರು ಭಾಗವಹಿಸಬಹುದಾಗಿದೆ. ಮ್ಯಾರಥಾನ್‌ನಲ್ಲಿ ಭಾಗವಹಿಸಿದ ವಿಜೇತರಿಗೆ ಪ್ರಥಮ ರೂ.3000/–, ದ್ವಿತೀಯ ರೂ.2000/ಹಾಗೂ ತೃತೀಯ ಬಹುಮಾನವಾಗಿ ರೂ.1000/–ಗಳನ್ನು ನೀಡಲಾಗುತ್ತದೆ ಎಂದು ಬನ್ನೂರು ಪುರಸಭೆಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಹಳ್ಳಿ ಕ್ಷೌರಿಕರ ಮನೆ ವಾಸ್ತವ್ಯ': ಸವಿತಾ ಸಮಾಜದ ಅಭಿವೃದ್ಧಿ ನಿಗಮದ ಅಧ್ಯಕ್ಷರ ವಿನೂತನ ಅಭಿಯಾನ

ಮೈಸೂರು, ಮಾ.27– ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಮುತ್ತುರಾಜ್, 'ಹಳ್ಳಿ ಕ್ಷೌರಿಕರ ಮನೆ ವಾಸ್ತವ್ಯ' ವಿಶೇಷ ಪ್ರವಾಸ ಕಾರ್ಯಕ್ರಮದ ಮೂಲಕ ಸಮಾಜವನ್ನು ಸಂಘಟಿಸುವಲ್ಲಿ ನಿರತರಾಗಿದ್ದಾರೆ.

ಈಗಾಗಲೇ ಕೋಲಾರ, ಹಾಸನ ಜಿಲ್ಲೆಗಳಲ್ಲಿ ಪ್ರವಾಸ ಮುಗಿಸಿ ಮೈಸೂರಿನಲ್ಲಿರುವ ಇವರು, ಹುಣಸೂರು ತಾಲೂಕಿನ ಹನಗೂಡು, ವರುಣ ಕ್ಷೇತ್ರದ ಚಿನ್ನಂಬಳ್ಳಿ ಹಾಗೂ ನಂಜನಗೂಡು ತಾಲೂಕಿನ ಮಡಿಕೆಹುಂಡಿಯಲ್ಲಿ ವಾಸ್ತವ್ಯ ವಿದ್ದು, ಆ ಗ್ರಾಮಗಳಲ್ಲಿರುವ ಸಮುದಾಯದವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದ್ದಾರೆ. ಉಪಚುನಾವಣೆ ಪ್ರಚಾರದ ಬಳಿಕ ರಾಜ್ಯ ಪ್ರವಾಸವನ್ನು ಮುಂದುವರೆಸಲಿದ್ದಾರೆ.

ಸಮುದಾಯದ ಸೇವೆ: ತಮ್ಮ ವಿಶೇಷ ಪ್ರವಾಸ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮುತ್ತುರಾಜ್, ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ನನ್ನನ್ನು ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷನನ್ನಾಗಿ ಮಾಡಿ ಸಮುದಾಯದ ಸೇವೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ರಾಜ್ಯಾದ್ಯಂತ ಪ್ರವಾಸ ಮಾಡಿ, ಸಮುದಾಯದ



'ಹಳ್ಳಿ ಕ್ಷೌರಿಕರ ಮನೆ ವಾಸ್ತವ್ಯ' ಪ್ರವಾಸ ಕೈಗೊಂಡಿರುವ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಮುತ್ತುರಾಜ್ ಗುರುವಾರ ಮೈಸೂರಿನ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿನ್ನಂಬಳ್ಳಿಯಲ್ಲಿ ವಾಸ್ತವ್ಯ ಹೂಡಿ, ಸಮುದಾಯದವರಿಗೆ ಸರ್ಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಈ ವೇಳೆ ಸವಿತಾ ಸಮಾಜ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ರಾಜೇಶ್ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಯೊಬ್ಬರಿಗೂ ಸರ್ಕಾರದ ಸೌಲಭ್ಯ–ಸವಲತ್ತುಗಳ ಬಗ್ಗೆ ತಿಳಿಸಿಕೊಡುವುದರ ಜೊತೆಗೆ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ, ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ 'ಹಳ್ಳಿ ಕ್ಷೌರಿಕರ ಮನೆ ವಾಸ್ತವ್ಯ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇನೆ ಎಂದು ತಿಳಿಸಿದರು.

ನಮ್ಮ ಸಮುದಾಯದ ಶೇ.80ರಷ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಕೀಳರಿಮೆಯಿಂದ ಮುಖ್ಯವಾಹಿನಿಗೆ ಬರುತ್ತಿಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದಿದ್ದಾರೆ. ಮಕ್ಕಳು ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಫೇಲ್ ಆದರೆ ಅಲ್ಲಿಗೇ ಶಿಕ್ಷಣವನ್ನು ಮೊಟಕುಗೊಳಿಸಿ, ಕ್ಷೌರಿಕ ವೃತ್ತಿಗೆ ಸೀಮಿತಗೊಳಿಸುತ್ತಾರೆ. ಶಿಕ್ಷಣವಿಲ್ಲದಿದ್ದರೆ ನಮ್ಮ ನೆಲದ ಸಂವಿಧಾನ, ಕಾನೂನು, ಸಮುದಾಯದ ಇತಿಹಾಸ, ಪರಂಪರೆ ಬಗ್ಗೆ ಅರಿವು ಪಡೆಯುವುದು ಅಸಾಧ್ಯ. ಪರಿಣಾಮ ಸೀಮಿತ ಚೌಕಟ್ಟಿನಲ್ಲೇ ಜೀವನ ನಡೆಸುವ ಸ್ಥಿತಿ ನಿರ್ಮಾಣವಾಗುತ್ತದೆ. ಇದೆಲ್ಲದರ ಬಗ್ಗೆ ಪ್ರವಾಸದ ವೇಳೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದು ಹೇಳಿದರು.

ರಾಜ್ಯ ಸರ್ಕಾರವು ನಮ್ಮ ನಿಗಮದ ಮೂಲಕ ಸಾಕಷ್ಟು ಸವಲತ್ತುಗಳನ್ನು ನೀಡುತ್ತಿದೆ. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ, ಆಹಾರ ಕಿಯೋಸ್ಕ್ ಯೋಜನೆ ಸೇರಿದಂತೆ ಹಲವು ಸೌಲಭ್ಯಗಳಿವೆ. ಇವೆಲ್ಲವೂ ನಗರ ಪ್ರದೇಶದವರಿಗೆ ಅಥವಾ ಈ ಬಗ್ಗೆ ತಿಳಿದಿರುವ ಕೆಲವು ಮಂದಿಗಷ್ಟೇ ಅಲ್ಲ ಹಳ್ಳಿಗಳಲ್ಲಿ ಸಣ್ಣ ಗೂಡಂಗಡಿಯಲ್ಲಿ ಕ್ಷೌರಿಕ ವೃತ್ತಿ ಮಾಡಿಕೊಂಡಿರುವ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು ಎಂಬುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ಈ ಪ್ರವಾಸ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮುಖ್ಯವಾಗಿ ಎಷ್ಟೇ ಕಷ್ಟವಾದರೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಯಾವುದೇ ಕಾರಣಕ್ಕೂ ವಿದ್ಯಾಭ್ಯಾಸ ಮೊಟಕುಗೊಳಿಸಬಾರದು. ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಅಂಕ ಪಡೆದು ಸರ್ಕಾರಿ ಉದ್ಯೋಗಗಳನ್ನು ಪಡೆಯಬೇಕು. ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು. ಈಗಾಗಲೇ ಉನ್ನತ ಹುದ್ದೆ, ಉತ್ತಮ ಸ್ಥಾನದಲ್ಲಿರುವವರು ನಾವು ಸವಿತಾ ಸಮಾಜದವರು ಎಂದು ಸ್ವಾಭಿಮಾನದಿಂದ ಹೇಳಿಕೊಂಡು ಸಾಮಾನ್ಯರ ಆತ್ಮಸ್ಥೈರ್ಯ ಹೆಚ್ಚಿಸಬೇಕು ಎಂದು ಇದೇ ವೇಳೆ ಮನವಿ ಮಾಡಿದರು.

ಸರ್ಕಾರಿ ಶಾಲೆ ಉಳಿವಿಗೆ ಗ್ರಾಮಸ್ಥರ ಪ್ರತಿಭಟನೆ

ಕುಶಾಲನಗರ, ಮಾ.27–ಸಮೀಪದ ತೊರೆನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಶಿರಂಗಾಲ ಶಾಲೆಗೆ ವಿಲೀನಗೊಳಿಸುವ ಹೆಸರಿನಲ್ಲಿ ಮುಚ್ಚಲು ಹೊರಟಿರುವ ಸರ್ಕಾರದ ನಡೆ ಖಂಡಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಗ್ರಾಮಸ್ಥರು, ಪೋಷಕರು ಹಾಗೂ ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.


ಎಐಡಿಎಸ್‌ಓ ನೇತೃತ್ವದಲ್ಲಿ ಗ್ರಾಮಸ್ಥರು, ಪೋಷಕರು ಹಾಗೂ ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ತೊರೆನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಬಿ.ಜಗದೀಶ್ ಮಾತನಾಡಿ, ಕೊಡಗಿನ ಗಡಿ ಅರೆ ಮಲೆನಾಡು ಪ್ರದೇಶವಾದ ತೊರೆನೂರು ಗ್ರಾಮದಲ್ಲಿ ಸರ್ಕಾರಿ ಶಾಲೆ ಶತಮಾನ ಪೂರೈಸಿದ್ದು, ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಭವಿಷ್ಯ ರೂಪಿಸಿದೆ. ಇಂತಹ ಶಾಲೆಯನ್ನು ಮುಚ್ಚುವ ಹುನ್ನಾರ ನಡೆಯುತ್ತಿರುವುದು ಖಂಡನೀಯ. ಈ ಶಾಲೆ ಬಂದ್ ಮಾಡದೆ ಅಭಿವೃದ್ಧಿಪಡಿಸುವತ್ತ ಸರ್ಕಾರ ಚಿಂತನೆ ಹರಿಸಬೇಕು ಎಂದು ಒತ್ತಾಯಿಸಿದರು.

ಎಐಡಿಎಸ್‌ಓ ಜಿಲ್ಲಾ ಸಂಚಾಲಕಿ ಸ್ವಾತಿ ಮಾತನಾಡಿ, ಗ್ರಾ. ಪಂ.ಗೆ ಒಂದರಂತೆ ರಾಜ್ಯದಲ್ಲಿ 6 ಸಾವಿರ ಕೆಪಿಎಸ್ ಶಾಲೆ ತೆರೆಯುವ ಗುರಿಯನ್ನು ಸರ್ಕಾರ ಹೊಂದಿದೆ. ಮೊದಲ ಹಂತದಲ್ಲಿ ರಾಜ್ಯದ 800 ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಶಾಲೆಗಳೆಂದು ಗುರುತಿಸಲಾಗಿದೆ. ಜಿಲ್ಲೆಯಲ್ಲಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಯನ್ನು ಆಯ್ದುಕೊಂಡು, 235 ಸರ್ಕಾರಿ ಶಾಲೆಗಳನ್ನು ಮುಚ್ಚಲು ಪಟ್ಟಿ ಮಾಡಲಾಗಿದೆ. ಶಿರಂಗಾಲ ಶಾಲೆಗೆ ತೊರೆನೂರು ಶಾಲೆಯನ್ನು ವಿಲೀನ ಗೊಳಿಸಲು ಆದೇಶಿಸಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುತ್ತಿಲ್ಲ ಎಂದು ಹೇಳುವ ಸರ್ಕಾರ, ಶಾಲೆಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿದೆ. ಮೊದಲು ಶಾಲೆಗಳಿಗೆ ಅಗತ್ಯ ಸೌಕರ್ಯ ಕಲ್ಪಿಸಬೇಕು. ಗ್ರಾಮೀಣ ಕನ್ನಡ ಶಾಲೆಗಳನ್ನು ಮುಚ್ಚಬಾರದು ಎಂದು ಆಗ್ರಹಿಸಿದರು.

ಗ್ರಾಮದ ಮುಖಂಡರಾದ ಟಿ.ಕೆ.ಪಾಂಡುರಂಗ, ಕೆ.ಎಸ್.ಕೃಷ್ಣೇಗೌಡ, ಎಚ್.ಬಿ.ಚಂದ್ರಪ್ಪ, ಶಿವಕುಮಾರ್, ಮಹೇಶ್, ರಾಜಾಚಾರ್, ಪುಟ್ಟಸ್ವಾಮಿ ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ವಿ.ಪೇಟೆ ಪುರಸಭೆ: 55 ಲಕ್ಷ ಉಳಿತಾಯ ಬಜೆಟ್ ಮಂಡನೆ

ವಿರಾಜಪೇಟೆ, ಮಾ.27–ಪುರಸಭೆಯ ಆಡಳಿತಾಧಿಕಾರಿ ನಿತಿನ್ ಚಕ್ಕಿ 55 ಲಕ್ಷ, 66 ಸಾವಿರ ರೂ.ಗಳ ಉಳಿತಾಯ ಬಜೆಟ್ ಮಂಡನೆ ಮಾಡಿದರು.



ಆಯವ್ಯಯ ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಉಪವಿಭಾಗಾಧಿಕಾರಿಯೂ ಆಗಿರುವ ಅವರು, 48 ಕೋಟಿ, 54 ಲಕ್ಷದ 60,000 ರೂ.ಗಳ ನಿರೀಕ್ಷಿತ ಬಜೆಟ್ ಮಂಡನೆ ಮಾಡಿದರು.

ಪುರಸಭೆಯಲ್ಲಿ ದಾಖಲೆಗಳನ್ನು ಡಿಜಿಟಲೀಕರಣ ಮಾಡಲು 25 ಲಕ್ಷ, ನೂತನ ಕಚೇರಿ ಕಟ್ಟಡಗಳ ನಿರ್ಮಾಣ ಕಾಮಗಾರಿಗೆ 7.5 ಕೋಟಿ, ಪೌರ ಕಾರ್ಮಿಕರಿಗೆ ಆರೋಗ್ಯ ಮತ್ತು ಅಪಘಾತ ವಿಮೆ ಹಾಗೂ ಆರೋಗ್ಯ ತಪಾಸಣೆ ವೆಚ್ಚ ಸೇರಿ 12 ಲಕ್ಷ, ಮಂಗಳ ಮುಖಿಯರ ಅಭಿವೃದ್ಧಿಗಾಗಿ 5 ಲಕ್ಷ, ಪುರಸಭೆ ದಾಖಲೆಗಳ ಡಿಜಿಟಲೀಕರಣವನ್ನು ಕನ್ನಡದಲ್ಲಿ ಮಾಡಿರುವುದು ಶ್ಲಾಘನೀಯ ಎಂದರು. ಪುರಸಭೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಮತ್ತು ಬಿಡಾಡಿ ದನಗಳ ಹಾವಳಿ ಹೆಚ್ಚಾಗಿರುವುದರಿಂದ ಜಿಲ್ಲೆಯಲ್ಲಿ ಟೆಂಡರ್ ಕರೆದು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ ಮಾತನಾಡಿ, ಹಿಂದಿನ ಬಜೆಟ್‌ಗಳಲ್ಲಿ ಹಾಕಿಕೊಂಡ ಯೋಜನೆಗಳ ಅಭಿವೃದ್ಧಿ ಕಾರ್ಯಗಳನ್ನು ಸ್ಥಳಿಯ ಶಾಸಕರು ಮತ್ತು ಸಾರ್ವಜನಿಕರ ಸಹಕಾರದಿಂದ ಅನುಷ್ಠಾನಗೊಂಡಿರುತ್ತದೆ, ಪಟ್ಟಣದ ಅಭಿವೃದ್ಧಿಗೆ ಹಿಂದಿನ ಆಡಳಿತದ ಅಧ್ಯಕ್ಷರು, ಎಲ್ಲಾ ಸದಸ್ಯರು ಪಟ್ಟಣದ ಜನತೆಗೆ ಮೂಲ ಸೌಲಭ್ಯಗಳನ್ನು ಒದಗಿಸಲು ಒತ್ತು ನೀಡಿದ್ದರು ಎಂದರು.

ಸಭೆಯಲ್ಲಿ ಪುರಸಭೆ ಕಚೇರಿ ವ್ಯವಸ್ಥಾಪಕ ಕೆ.ಬಿ.ಸುಜಾತ, ಪರಿಸರ ಅಭಿಯಂತರ ರೀತುಸಿಂಗ್, ಲೆಕ್ಕಗರಾದ ಕೆ.ಬಿ.ಸಮೀರ್ ಸುಹೇಲ್, ಕಂದಾಯಾಧಿಕಾರಿ ವಿ.ಕೆ.ಸೋಮಶೇಖರ್, ಕೆ.ಎಂ.ಸುಲೇಖಾ, ವಿಕೆ.ಅಕ್ಕಮಹಾದೇವಿ, ಮತ್ತಿತರ ಅಧಿಕಾರಿ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

ರಾಜಾಸೀಟು ಉದ್ಯಾನವನ ಜಿಲ್ಲಾಧಿಕಾರಿ ಪರಿಶೀಲನೆ

ಮಡಿಕೇರಿ, ಮಾ.27–ಪ್ರವಾಸಿಗರ ಕೇಂದ್ರ ಬಿಂದು ರಾಜಾಸೀಟು ಉದ್ಯಾನವನಕ್ಕೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಶುಕ್ರವಾರ ಭೇಟಿ ನೀಡಿ ವೀಕ್ಷಿಸಿದರು.

ಗ್ರೇಟರ್ ರಾಜಾಸೀಟು, ಪುಟಾಣಿ ರೈಲು ಮಾರ್ಗ ಮತ್ತು ಕೂರ್ಗ್‌ವಿಲೇಜ್‌ಗೆ ತೆರಳಿ ಅಭಿವೃದ್ಧಿ ಸಂಬಂಧ ಮಾಹಿತಿ ಪಡೆದರು. ರಾಜಸೀಟು ಉದ್ಯಾನವನ ಬಳಿಯ ಟಿಕೇಟ್ ಕೌಂಟರ್, ಮಾಹಿತಿ ಕೇಂದ್ರ ಹಾಗೂ ಉದ್ಯಾನವನದೊಳಗೆ ಸಿಸಿಟಿವಿ ಹಾಗೂ ಗೇಟ್ ಅನ್ನು ಪರಿಶೀಲಿಸಿದರು. ಉದ್ಯಾನವನ ಸುತ್ತಲೂ ಸಿಸಿಟಿವಿ ವೈರ್ ಹಾಗೂ ವಿದ್ಯುತ್ ತಂತಿಗಳಿಂದ ಕೂಡಿದ್ದು, ಉದ್ಯಾನವನದ ಸೌಂದರ್ಯ ಹಾಳಾಗಿದೆ. ಆದ್ದರಿಂದ ಕೂಡಲೇ ಎಲ್ಲಾ ದುರಸ್ತಿ ಕಾರ್ಯ ಹಾಗೂ ಭೂಮಿಯ ಒಳಭಾಗದಲ್ಲಿ ತಂತಿ ಅಳವಡಿಸುವುದು ಹಾಗೂ ದೀಪಗಳನ್ನು ದುರಸ್ತಿಪಡಿಸಿ ಅಲಂಕಾರಿಕಾ ದೀಪಗಳನ್ನು ಅಳವಡಿಸುವುದು ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತೆ ತೋಟಗಾರಿಕೆ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಿದರು.

ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಶಶಿಧರ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಮುತ್ತಪ್ಪ ಇತರರು ಇದ್ದರು.

ವೆಸ್ಟ್ ಕೊಳಕೇರಿ ಶ್ರೀ ಭಗವತಿ ದೇವರ ಉತ್ಸವ ಸಂಪನ್ನ

ನಾಪೋಕ್ಲು, ಮಾ.27–ಇಲ್ಲಿಗೆ ಸಮೀಪದ ವೆಸ್ಟ್ ಕೊಳಕೇರಿ ಶ್ರೀ ಭಗವತಿ ದೇವರ ವಾರ್ಷಿಕ ಉತ್ಸವ ವಿವಿಧ ಆರಾಧನಾ ಕಾರ್ಯಕ್ರಮಗಳೊಂದಿಗೆ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತ್ತು.

ಎತ್ತುಪೋರಾಟ ವಿಶೇಷ ಮಹಾಪೂಜೆ, ತೀರ್ಥ ಪ್ರಸಾದ ವಿತರಣೆ ಬಳಿಕ ನೆರೆದಿದ್ದ ಭಕ್ತಾದಿಗಳಿಗೆ ಅನ್ನದಾನ, ದೇವಾಲಯದ ಆವರಣದಲ್ಲಿ ಗ್ರಾಮಸ್ಥರಿಂದ ಬೋಳಕಾಟ್ ದೇವರ ಪ್ರದರ್ಶನ ನೃತ್ಯ ಮಹೋತ್ಸವ ಸಾಂಗವಾಗಿ ನೆರವೇರಿತು.


ನೃತ್ಯ ಮಹೋತ್ಸವ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ದೇವಾಲಯದ ತಕ್ಕ ಮುಖ್ಯಸ್ಥರು ಆಡಳಿತ ಮಂಡಳಿ ಅಧ್ಯಕ್ಷರು ನಿರ್ದೇಶಕರು ಊರು ಪರ ಊರಿನ ಭಕ್ತಾದಿಗಳು ಶ್ರದ್ಧಾ ಭಕ್ತಿಯಿಂದ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ವಿವಿಧ ಹರಕೆ, ಕಾಣಿಕೆ ಸೇವೆಯನ್ನು ನೆರವೇರಿಸಿಕೊಂಡರು.

ರಾಮಲಿಂಗೇಶ್ವರ ದೇವಾಲಯದಲ್ಲಿ ಸೀತಾ ಕಲ್ಯಾಣ

ಮಡಿಕೇರಿ, ಮಾ.27–ಕೂಡಿಗೆ ಸಮೀಪದ ಕಣಿವೆಯ ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ಬ್ರಹ್ಮರಥೋತ್ಸವದ ಹಿನ್ನೆಲೆಯಲ್ಲಿ ಮಾರ್ಗಶಿರ ಶುಕ್ಲ ಪಂಚಮಿ ದಿನದಂದು ದೇವಾಲಯದ ಆವರಣದಲ್ಲಿ ಸೀತಾ ಕಲ್ಯಾಣ ನೆರವೇರಿತು. ಬೆಂಗಳೂರಿನ ನರಹರಿ ಶರ್ಮಾ ನೇತೃತ್ವದಲ್ಲಿ ನಡೆದ ಸೀತಾರಾಮ ಕಲ್ಯಾಣೋತ್ಸವದಲ್ಲಿ ದೇವಾಲಯ ಸಮಿತಿ ಅಧ್ಯಕ್ಷ ಕೆ.ಎನ್.ಸುರೇಶ್, ಉಪಾಧ್ಯಕ್ಷ ಮಂಜುನಾಥ ಸ್ವಾಮಿ ಸೇರಿದಂತೆ ಸಮಿತಿಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ರಾಮಾಯಣದಲ್ಲಿ ಜನಕ ರಾಜನು ತನ್ನ ಮಗಳು ಸೀತೆಯ ಸ್ವಯಂವರ ಏರ್ಪಡಿಸುತ್ತಾನೆ. ಶಿವನ ಧನುಸ್ಸನ್ನು ಭಂಗ ಮಾಡ ಬಲ್ಲವರಿಗೆ ಸೀತೆಯನ್ನು ಮದುವೆ ಮಾಡಿ ಕೊಡುವುದಾಗಿ ಘೋಷಿಸುತ್ತಾನೆ. ಶ್ರೀರಾಮನು ಧನುಸ್ಸನ್ನು ಮುರಿದು ಸೀತೆಯನ್ನು ವರಿಸುತ್ತಾನೆ. ಇದನ್ನೇ ಸೀತಾ ಕಲ್ಯಾಣೋತ್ಸವ ಆಗಿ ಆಚರಿಸಿಕೊಂಡು ಬರಲಾಗುತ್ತಿದೆ ಎಂದು ದೇವಾಲಯದ ಅರ್ಚಕ ರಾಘವೇಂದ್ರ ಆಚಾರ್ ಮತ್ತು ಬೆಂಗಳೂರಿನ ನರಹರಿ ಶರ್ಮಾ ಅವರುಗಳು ಭಕ್ತರಿಗೆ ಮಾಹಿತಿ ನೀಡಿದರು. ಬಳಿಕ ನೆರೆದ ಭಕ್ತರಿಗೆ ಪ್ರಸಾದ ಅನ್ನದಾನ ವಿತರಣೆ ನಡೆಯಿತು.

ಶಾಲಾ ವಾಹನಕ್ಕೆ ಖಾಸಗಿ ಬಸ್ ಡಿಕ್ಕಿ: ಶಾಲಾ ಮಕ್ಕಳು ಸೇರಿ 20 ಮಂದಿಗೆ ಗಾಯ


ಎಸ್ಪಿ ಡಾ.ಶೋಭಾರಾಣಿ ಮತ್ತು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರು ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು.

ಮದ್ದೂರು: ಖಾಸಗಿ ಶಾಲಾ ಬಸ್ ಮತ್ತು ಖಾಸಗಿ ಬಸ್ ನಡುವೆ ಅಪಘಾತ ಸಂಭವಿಸಿ 14 ವಿದ್ಯಾರ್ಥಿಗಳು ಸೇರಿದಂತೆ 20 ಮಂದಿ ಗಾಯಗೊಂಡಿರುವ ಘಟನೆ ಸೋಮನಹಳ್ಳಿ–ಕೆಸ್ತೂರು ಅಡ್ಡರಸ್ತೆಯ ಅಡಿಗಾಸ್ ಹೋಟೆಲ್ ಬಳಿ ಶುಕ್ರವಾರ ಸಂಜೆ ಸಂಭವಿಸಿದೆ.

ನಗರದ ಡಾ.ಶಾಂತಾ ಎಚ್.ಕೆ.ಮರಿಯಪ್ಪ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಾದ ಶಶಾಂಕ್ ಗೌಡ, ಹಿತಾ, ನಂದಿನಿ, ವಿಕ್ರಾಂತ್ ವಂದನಾ, ನಿಖಿತ್, ಮನ್ವಿತ್, ಹರ್ಷಿತಾ, ಹಾಗೂ ಸಾಹಿತ್ಯ ಗಾಯಗೊಂಡ ವಿದ್ಯಾರ್ಥಿಗಳಾಗಿದ್ದಾರೆ.

ಉದಯರಂಗ ಬಸ್‌ನಲ್ಲಿದ್ದ ಸುಶೀಲಮ್ಮ, ಗೌರಮ್ಮ, ಶಿವರಾಂ, ಶೋಭಾ, ಶಿವಮಲ್ಲು, ಗಾಯಗೊಂಡವರಾಗಿದ್ದು, ಪ್ರಯಾಣಿಕರು ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಕ್ರಾಂತ್, ಹರ್ಷಿತಾ ಸೇರಿದಂತೆ 6 ಮಂದಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ.

ಎಂದಿನಂತೆ ಶಾಲೆಗೆ ಆಗಮಿಸಿದ್ದ ವಿದ್ಯಾರ್ಥಿಗಳು ಶಾಲೆ ಮುಗಿಸಿ ತಮ್ಮ ಗ್ರಾಮಗಳಿಗೆ ಶಾಲಾ ವಾಹನದ ಮೂಲಕ ತೆರಳುತ್ತಿದ್ದ ವೇಳೆ ಮದ್ದೂರು ಮಾರ್ಗವಾಗಿ ಆಗಮಿಸಿದ ಉದಯರಂಗ ಖಾಸಗಿ ಬಸ್ ಶಾಲಾ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ.

ಕದಲೀಪುರ, ಹುಳಗನಹಳ್ಳಿ, ಹೆಮ್ಮನಹಳ್ಳಿ, ಗ್ರಾಮಗಳ ವಿದ್ಯಾರ್ಥಿಗಳನ್ನು ತಮ್ಮ ಗ್ರಾಮಕ್ಕೆ ಬಿಡಲು ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ. ಅಪಘಾತ ಸಂಭವಿಸಿದ ವಿಷಯ ತಿಳಿದು ಪೋಷಕರು ಆಸ್ಪತ್ರೆಗೆ ದೌಡಾಯಿಸಿ ತಮ್ಮ ಮಕ್ಕಳ ಆರೋಗ್ಯ ವಿಚಾರಿಸಿದರು.

ತಾಲೂಕು ಆಸ್ಪತ್ರೆಗೆ ಭೇಟಿ ನೀಡಿದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ, ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ಡಿವೈಎಸ್ಪಿ ಯಶವಂತ್ ಕುಮಾರ್, ಬಿಇಒ ಧನಂಜಯ, ಕದಲೂರು ಉದಯ್ ಚಾರಿಟಬಲ್ ಟ್ರಸ್ಟಿ ಕೆ.ಎಂ.ರವಿ, ಶಾಲಾ ಆಡಳಿತ ಮಂಡಳಿಯ ಅಪೂರ್ವ ಚಂದ್ರು ಆಸ್ಪತ್ರೆಗೆ ಭೇಟಿ ಗಾಯಾಳುಗಳ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದರು.

ಮದ್ದೂರು ಸಂಚಾರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದು ವೈರಮುಡಿ ಬ್ರಹ್ಮೋತ್ಸವ

ಬ್ರಹೋತ್ಸವದಲ್ಲಿ 2 ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಭಾಗಿ, ಭದ್ರತಾ ದೃಷ್ಟಿಯಿಂದ 1200ಕ್ಕೂ ಹೆಚ್ಚು ಆರಕ್ಷಕ ಸಿಬ್ಬಂದಿ ನಿಯೋಜನೆ



ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವದ ಕುರಿತು ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು.

ಮಂಡ್ಯ,ಮಾ.27– ಶನಿವಾರ (ಮಾ.28) ಮೇಲುಕೋಟೆಯಲ್ಲಿ ವೈರಮುಡಿ ಬ್ರಹ್ಮೋತ್ಸವ ನಡೆಯಲಿದ್ದು, ಭದ್ರತೆಗಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದ್ದು 1210 ಆರಕ್ಷಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಕ್ಷೇತ್ರದಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಗ್ರಾಮದ ಹೊರ ಭಾಗದಲ್ಲಿ ಮೇಲುಕೋಟೆ ಗ್ರಾಮದ ಬಿಸಿಲು ಮಾರಮ್ಮ ದೇವಾಲಯದ ಬಳಿ ಮತ್ತು ಧನುಷ್ಕೋಟಿಗೆ ಹೋಗುವ ರಸ್ತೆ ಬಳಿ ಗಣ್ಯರ ವಾಹನಗಳಿಗೆ, ಯದುಶೈಲ ಪ್ರೌಢ ಶಾಲೆ ಆವರಣದಲ್ಲಿ ದ್ವಿಚಕ್ರ ವಾಹನಗಳಿಗೆ, ಎಸ್‌ಇಟಿ ಕಾಲೇಜು ಮೈದಾನದಲ್ಲಿ ನಾಲ್ಕು ಚಕ್ರದ ವಾಹನಗಳಿಗೆ ಹಾಗೂ ಜಕ್ಕನಹಳ್ಳಿ ರಸ್ತೆಯ ಕಣಿವೆ ಸರ್ಕಲ್ ವರೆಗೆ 11 ಸ್ಥಳಗಳಲ್ಲಿ ದ್ವಿಚಕ್ರ ವಾಹನಗಳಿಗೆ ವಾಹನ ಪ್ರವಾಸಿ ಮಂದಿರದ ರಸ್ತೆಯಲ್ಲಿ ಗೌರಿಕಟ್ಟೆಯವರೆಗೆ (14 ಸ್ಥಳಗಳಲ್ಲಿ) ನಾಲ್ಕು ಚಕ್ರದ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಶುಕ್ರವಾರ ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವದ ಸಂಬಂಧ ಕುರಿತು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮೇಲುಕೋಟೆ ಚೆಲುವನಾರಾಯಣ ಸ್ವಾಮಿ ದೇವಾಲಯದಲ್ಲಿ 2026ನೇ ಸಾಲಿನ ವೈರಮುಡಿ ಬ್ರಹ್ಮೋತ್ಸವ ಮಾ.23ರಿಂದ ಪ್ರಾರಂಭವಾಗಿ ಏ.4 ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಮಾರ್ಚ್ 28 ರಂದು ಶ್ರೀ ವೈರಮುಡಿ ಕಿರೀಟಧಾರಣೆ ಉತ್ಸವ ನಡೆಯಲಿದ್ದು ಶ್ರೀವೈರಮುಡಿ ಬ್ರಹೋತ್ಸವ ಸಂಬಂಧ ದೇವಾಲಯ ಮತ್ತು ಇತರೆ ಇಲಾಖೆಗಳಿಂದ ಶ್ರೀಕ್ಷೇತ್ರದಲ್ಲಿ ಕೈಗೊಳ್ಳಬೇಕಾಗಿರುವ ಪೂರ್ವಸಿದ್ಧತೆ ಮತ್ತು ಮುಂಜಾಗ್ರತಾ ಕ್ರಮಗಳ ಸಿದ್ಧತಾ ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದ್ದು, ಅಗತ್ಯ ಪೂರ್ವಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಶ್ರೀವೈರಮುಡಿ ಬ್ರಹ್ಮೋತ್ಸವದಲ್ಲಿ ಸುಮಾರು ಎರಡು ಲಕ್ಷದಷ್ಟು ಭಕ್ತಾದಿಗಳು ಮತ್ತು ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆ ಇರುತ್ತದೆ ಎಂದು ತಿಳಿಸಿದರು.

ಶ್ರೀ ವೈರಮುಡಿ ಕಿರೀಟಧಾರಣೆ ಉತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ವತಿಯಿಂದ ಮೇಲುಕೋಟೆಗೆ ಸಂಪರ್ಕ ಕಲ್ಪಿಸುವ ಎಲ್ಲಾ ಪ್ರಮುಖ ಪಟ್ಟಣ/ ನಗರ ಭಾಗಗಳಿಂದ ಸುಮಾರು 140 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಮುಂಗಡ ಸೀಟು ಕಾಯ್ದಿರಿಸುವ ವ್ಯವಸ್ಥೆ ಹಾಗೂ ಮಂಡ್ಯ ನಗರದಿಂದ ನಿರಂತರ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಮೇಲುಕೋಟೆಯ ವಲಯ ಅರಣ್ಯಾಧಿಕಾರಿಗಳ ಕಚೇರಿಯ ಎದುರಿನ ಅವರಣದಲ್ಲಿ KSRTC ವಾಹನಗಳಿಗೆ ತಾತ್ಕಾಲಿಕವಾಗಿ ನಿಲ್ದಾಣ ವ್ಯವಸ್ಥೆ ಮಾಡಲಾಗಿದೆ ಪಾರ್ಕಿಂಗ್ ಸ್ಥಳದಿಂದ ದೇವಾಲಯದವರೆಗೆ ಓಡಾಡಲು ಎಲ್ಲಾ ಹಿರಿಯ ನಾಗರೀಕರಿಗೆ ಹಾಗೂ ಸಾರ್ವಜನಿಕರಿಗೆ ಮತ್ತು ಗರ್ಭಿಣಿಯರಿಗೆ 5 ಉಚಿತ ಮಿನಿ ಬಸ್ಸುಗಳ ವ್ಯವಸ್ಥೆ ಮಾಡಲಾಗಿದದೆ ಸಾರ್ವಜನಿಕರು/ಭಕ್ತಾದಿಗಳ ಓಡಾಟಕ್ಕೆ ತೊಂದರೆಯಾಗದಂತೆ ವಾಹನಗಳ ದಟ್ಟಣೆ ನಿರ್ವಹಿಸಲು ಅಗತ್ಯ ಬ್ಯಾರಿಕೇಡ್ ವ್ಯವಸ್ಥೆ ಸಹ ಮಾಡಲಾಗಿದೆ ಎಂದು ತಿಳಿಸಿದರು.

ತುರ್ತು ಅವಘಡಗಳ ನಿರ್ವಹಣೆಗಾಗಿ ಎರಡು ಅಗ್ನಿಶಾಮಕ ವಾಹನ ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು ಕ್ಷೇತ್ರದಲ್ಲಿ ಭದ್ರತಾ ವ್ಯವಸ್ಥೆಯ ಮೇಲ್ವಿಚಾರಣೆ ಮತ್ತು ನಿರ್ವಹಣೆಗಾಗಿ ಎಎಸ್ಪಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಲಾಗಿದೆ ಎಂದರು.

ಪಾಂಡವಪುರದಲ್ಲಿ ಶ್ರೀರಾಮ ನವಮಿ ಆಚರಣೆ


ಪಾಂಡವಪುರ ತಾಲೂಕಿನಾದ್ಯಂತ ಶ್ರೀರಾಮಮಂದಿರ, ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ಶ್ರೀರಾಮನವಮಿ ಆಚರಿಸಿ ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ಹಾಗೂ ಕೋಸಂಬರಿ ವಿತರಣೆ ಮಾಡಲಾಯಿತು.

ವಾಕಿಂಗ್ ಹೋಗಿದ್ದ ಶಿಕ್ಷಕ ಹೃದಯಾಘಾತದಿಂದ ನಿಧನ

ಸಕಾಲದಲ್ಲಿ ಚಿಕಿತ್ಸೆ ನೀಡದ ಆರೋಪ

ಕೆ.ಆರ್.ಪೇಟೆ: ವಾಯು ವಿಹಾರಕ್ಕೆ ತೆರಳಿದ್ದ ವೇಳೆ ಶಿಕ್ಷಕರೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಸಂಭವಿಸಿದ್ದು, ಸಕಾಲದಲ್ಲಿ ಚಿಕಿತ್ಸೆ ದೊರೆತಿದ್ದರೆ ಜೀವ ಉಳಿಯುತ್ತಿತ್ತು ಎಂಬ ಮಾತು ಕೇಳಿ ಬಂದಿದೆ.



ತಾಲೂಕಿನ ಮಂದಗೆರೆ ಗ್ರಾಮದ ಶಿಕ್ಷಕರಾದ ಸುರೇಶ್(57) ಎಂಬುವರೇ ಹೃದಯಾಘಾತದಿಂದ ಸಾವನ್ನಪ್ಪಿದವರಾಗಿದ್ದಾರೆ.

ಮಾರ್ಗೋನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಸುರೇಶ್ ಇಂದು ಬೆಳಿಗ್ಗೆ ಸುಮಾರು 6 ಗಂಟೆ ಸಮಯದಲ್ಲಿ ವಾಯು ವಿಹಾರಕ್ಕೆಂದು ಹೊರ ಹೋಗಿದ್ದ ಸುರೇಶ್ ಅವರಿಗೆ ಎದೆನೋವು ಕಾಣಿಸಿಕೊಂ ಡಿದೆ. ತಕ್ಷಣ ಅವರನ್ನು ಕಾರಿನಲ್ಲಿ ಕಿಕ್ಕೇರಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆದರೆ ಅಲ್ಲಿನ ವೈದ್ಯರು ರೋಗಿಯನ್ನು ಪರೀಕ್ಷೆ ನಡೆಸಿ, ಪ್ರಾಥಮಿಕ ಚಿಕಿತ್ಸೆ ನೀಡುವ ಬದಲು ಚನ್ನರಾಯಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದಾರೆ. ಆದರೆ ಚನ್ನರಾಯಪಟ್ಟಣ ಆಸ್ಪತ್ರೆಗೆ ಹೋಗುವಷ್ಟರಲ್ಲಿ ಸುರೇಶ್ ಅವರು ಮೃತಪಟ್ಟಿದ್ದಾರೆ.

ಕಿಕ್ಕೇರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ್ದರೆ ಸುರೇಶ್ ಅವರು ಸಾಯುತ್ತಿರಲಿಲ್ಲ ಎಂದು ಮಂದಗೆರೆ ಗ್ರಾಮದ ನಿವೃತ್ತ ಕೆ.ಎಸ್.ಆರ್.ಟಿ.ಸಿ ನೌಕರ ಚೆಲುವರಾಜೇಗೌಡ ಕಿಕ್ಕೇರಿ ಆಸ್ಪತ್ರೆ ವೈದ್ಯರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ

ಇಂದು ಬೆಳಿಗ್ಗೆ ಕರ್ತವ್ಯ ನಿರ್ವಹಿಸುತ್ತಿದ್ದು ಹೃದಯಾಘಾತಕ್ಕೆ ಒಳಗಾಗಿ ಬಂದ ರೋಗಿಗೆ ಪ್ರಾಥಮಿಕ ಚಿಕಿತ್ಸೆ ನೀಡದೇ ಕರ್ತವ್ಯ ಲೋಪವೆಸಗಿರುವ ಕಿಕ್ಕೇರಿ ಸರ್ಕಾರಿ ಆಸ್ಪತ್ರೆಯ ವೈದ್ಯರನ್ನು ಅಮಾನತು ಮಾಡುವಂತೆ ಚೆಲುವರಾಜೇಗೌಡ ಮೇಲಧಿಕಾರಿಗಳನ್ನು ಒತ್ತಾಯ ಮಾಡಿದ್ದಾರೆ

ಮೃತ ಸುರೇಶ್ ಅವರು ಪತ್ನಿ ಸುಮ, ಪುತ್ರ ಡಾ.ಆಕಾಶ್, ಪುತ್ರಿ ಭೂಮಿಕಾ ಸೇರಿದಂತೆ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.

ಮೃತ ಶಿಕ್ಷಕ ಸುರೇಶ್ ಅವರ ಅಂತ್ಯಕ್ರಿಯೆಯು ಶುಕ್ರವಾರ ಸಂಜೆ ಮಂದಗೆರೆ ಗ್ರಾಮದ ಅವರ ಜಮೀನಿನಲ್ಲಿ ನಡೆಯಿತು.

ಏ.21, ಗುಂಡ್ಲುಪೇಟೆಗೆ ಸಿಎಂ ಸಿದ್ದರಾಮಯ್ಯ ಭೇಟಿ

● 110 ಕೆರೆಗಳ ಯೋಜನೆಗೆ ಚಾಲನೆ ● ಪ್ರಸಕ್ತ ಸಾಲಿನಲ್ಲಿ ಮೊದಲ ಭೇಟಿ

ಚಾಮರಾಜನಗರ, ಮಾ.27 (ಸಿದ್ದಲಿಂಗಸ್ವಾಮಿ)– ಗಡಿ ಜಿಲ್ಲೆ ಚಾಮರಾಜನಗರದ ಮೇಲೆ ಅಪಾರ ಅಭಿಮಾನವನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂಬರುವ ಏಪ್ರಿಲ್ 21ರಂದು ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣಕ್ಕೆ ಆಗಮಿಸಿ, ಬಜೆಟ್‌ನಲ್ಲಿ ಮಂಜೂರಾಗಿರುವ ಕೆಲವು ಯೋಜನೆಗಳು ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.



ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ ಸಿದ್ದರಾಮಯ್ಯ ಅವರು ಗುಂಡ್ಲುಪೇಟೆ ಪಟ್ಟಣಕ್ಕೆ ಮೊದಲ ಬಾರಿಗೆ ಭೇಟಿ ನೀಡುತ್ತಿದ್ದು, ಸಿಎಂ ಸ್ವಾಗತಕ್ಕೆ ಸಿದ್ಧತೆ ಆರಂಭವಾಗಿದೆ.

ಜಿಲ್ಲೆಗೆ 11ನೇ ಭೇಟಿ: ಜಿಲ್ಲೆಗೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೌಢ್ಯಕ್ಕೆ ತಿಲಾಂಜಲಿಯನ್ನು ಹಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 2013–18ನೇ ಸಾಲಿನಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲಾ ಕೇಂದ್ರಕ್ಕೆ ಒಟ್ಟು 17 ಬಾರಿ ಹಾಗೂ ಜಿಲ್ಲೆಗೆ ಒಟ್ಟು 25ಕ್ಕೂ ಹೆಚ್ಚು ಬಾರಿ ಭೇಟಿ ನೀಡಿದ್ದರು.

ಪ್ರಸ್ತುತ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರು ಅಧಿಕಾರಕ್ಕೆ ಬಂದ ಎರಡೂವರೆ ವರ್ಷದ ಅವಧಿಯಲ್ಲಿ ಜಿಲ್ಲಾ ಕೇಂದ್ರಕ್ಕೆ 4 ಬಾರಿ, ಜಿಲ್ಲೆಯ ವಿವಿಧೆಡೆಗೆ 6 ಬಾರಿ ಭೇಟಿ ನೀಡಿದ್ದು, ಜಿಲ್ಲೆಗೆ ಇದು ಅವರ 11ನೇ ಭೇಟಿಯಾಗಿದೆ. ಜಿಲ್ಲೆಗೆ ಮತ್ತೊಮ್ಮೆ ಸಿಎಂ ಭೇಟಿ ನೀಡುತ್ತಿರುವುದರಿಂದ ಅಮು ಜಿಲ್ಲೆಯ ಜನತೆಯ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ: ಗುಂಡ್ಲುಪೇಟೆ ತಾಲೂಕಿನ 110 ಕೆರೆಗಳಿಗೆ 475 ಕೋಟಿ ರೂ. ವೆಚ್ಚದಲ್ಲಿ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಗೆ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಗಿತ್ತು. ಅದರಂತೆ ಆ ಯೋಜನೆಗೆ ಟೆಂಡರ್ ಪ್ರಕ್ರಿಯೆ ಸಹ ಚಾಲ್ತಿಯಲ್ಲಿದೆ. ಹಾಗಾಗಿ ಸ್ವತಃ ಮುಖ್ಯಮಂತ್ರಿಯವರನ್ನೇ ಕರೆತಂದು ಅವರಿಂದ ಯೋಜನೆಗೆ ಚಾಲನೆ ಕೊಡಿಸಲು ಶಾಸಕ ಎಚ್.ಎಂ. ಗಣೇಶಪ್ರಸಾದ್ ಅವರ ಆಹ್ವಾನಕ್ಕೆ ಮುಖ್ಯಮಂತ್ರಿಗಳು ಸಮ್ಮತಿ ಸೂಚಿಸಿದ್ದು, ಏ. 21 ರಂದು ಸಿಎಂ ನೇತೃತ್ವದಲ್ಲಿ ಬೃಹತ್ ಕಾಮಗಾರಿಗೆ ಚಾಲನೆ ನೀಡಲಾಗುವುದು.

ಗುಂಡ್ಲುಪೇಟೆ ತಾಲೂಕಿನ 110 ಕೆರೆಗಳಿಗೆ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಲು ಸಿ.ಎಂ. ಸಿದ್ದರಾಮಯ್ಯ ಅವರು ಏ.21 ರಂದು ಗುಂಡ್ಲುಪೇಟೆಗೆ ಬರಲಿದ್ದಾರೆ. ಇದರೊಂದಿಗೆ ಪಟ್ಟಣದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಕೊಡಿಸಲು ಪರಿಶೀಲನೆ ನಡೆಸಲಾಗುತ್ತಿದೆ. ಅಂದು ಸಿಎಂ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ಸಿದ್ಧತೆ ನಡೆಸಲಾಗುತ್ತಿದೆ.



–ಎಚ್.ಎಂ.ಗಣೇಶಪ್ರಸಾದ್, ಶಾಸಕರು, ಗುಂಡ್ಲುಪೇಟೆ.

ಇದರೊಂದಿಗೆ ತೆರಕಣಾಂಬಿಯಲ್ಲಿ ಆಸ್ಪತ್ರೆಯ ನೂತನ ಕಟ್ಟಡ, ಬೊಮ್ಮಲಾಪುರ ಗ್ರಾಮದಲ್ಲಿ ವಸತಿ ಶಾಲೆಯನ್ನು ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದಾರೆ.

ಸಚಿವರ ನೇತೃತ್ವದಲ್ಲಿ ಸಭೆ: ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡುವ ಸಂಬಂಧ ಈಗಾಗಲೇ ಬೆಂಗಳೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ಜಿಲ್ಲೆಯ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಎಚ್.ಎಂ.ಗಣೇಶಪ್ರಸಾದ್, ಸೇರಿದಂತೆ ಜನಪ್ರತಿನಿಧಿಗಳು, ಅಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಲಾಗಿದ್ದು, ಕಾರ್ಯಕ್ರಮದ ರೂಪುರೇಷೆ ತಯಾರಿಸಲು ಚರ್ಚೆ ನಡೆಸಲಾಗಿದೆ.

ಕೈ ಪಾಳಯದಲ್ಲಿ ಜೋಶ್: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸಹಜವಾಗಿಯೇ ಕಾಂಗ್ರೆಸ್ ಪಾಳಯದಲ್ಲಿ ಹೊಸ ಉತ್ಸಾಹ ಮನೆ ಮಾಡಿದೆ. ನೆಚ್ಚಿನ ನಾಯಕನನ್ನು ಸ್ವಾಗತಿಸಲು ಇಡೀ ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳು, ಮುಖಂಡರು ತಯಾರಿ ನಡೆಸಿದ್ದಾರೆ.

ರಾಮನವಮಿ ನಂಬಿಕೆಯ ಪುನರುಚ್ಚಾರಣೆಯಾಗಿದೆ

ಚಾಮರಾಜನಗರ: ರಾಮ ನವಮಿ ಕೇವಲ ರಾಮನ ಜನ್ಮವನ್ನು ಆಚರಿಸುವ ಹಬ್ಬವಲ್ಲ, ಪ್ರತಿಯೊಬ್ಬರಿಗೂ ಪ್ರತಿಧ್ವನಿತವಾದ ನಂಬಿಕೆಯ ಪುನರುಚ್ಚಾರಣೆಯಾಗಿದೆ ಎಂದು ಹಿಂದೂ ಜಾಗೃತಿ ಸಮಿತಿಯ ಶ್ರೀಕಂಠಸ್ವಾಮಿ ಹೇಳಿದರು.

ಶ್ರೀ ರಾಮನವಮಿ ಪ್ರಯುಕ್ತ ಹಿಂದೂ ಜಾಗೃತಿ ಸಮಿತಿಯ ಮಾರಿಗುಡಿ ಮುಂಭಾಗದಲ್ಲಿ ವಿಶೇಷ ಪೂಜೆ ಹಾಗೂ ಪಾನಕ ಮಜ್ಜಿಗೆ ವಿತರಣೆ ಕಾರ್ಯಕ್ರಮದಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು,

ರಾಮನಿಂದ ಚಿತ್ರಿಸಲಾದ ಸದ್ಗುಣಗಳು ಇಂದಿಗೂ ಪ್ರತಿಯೊಬ್ಬ ಮನುಷ್ಯನಿಗೂ ಪ್ರಸ್ತುತವಾಗಿವೆ. ದೇವರೆಂದು ಪರಿಗಣಿಸಲ್ಪಟ್ಟಿದ್ದರೂ, ರಾಮನು ದೈವಿಕ ಶಕ್ತಿಯ ಮಾನವ ರೂಪವಾಗಿದ್ದಾನೆ ಮತ್ತು ಅವನನ್ನು ಮರ್ಯಾದಾ ಪುರುಷೋತ್ತಮ ಅಥವಾ ಎಲ್ಲಾ ಪುರುಷರಲ್ಲಿ ಶ್ರೇಷ್ಠ ಎಂದು ಕರೆಯಲಾಗುತ್ತದೆ ಎಂದರು.

ರಾಮ ನವಮಿಯ ಆಚರಣೆಯು ದಯೆ ಮತ್ತು ಸದ್ಗುಣದ ಹಾದಿಯಲ್ಲಿ ಶಾಶ್ವತವಾಗಿ ಉತ್ತಮ ವ್ಯಕ್ತಿಗಳಾಗಿ ವಿಕಸನಗೊಳ್ಳಲು ನಮ್ಮ ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಮೂಲವನ್ನು ಮರುಪರಿಶೀಲಿಸಲು ಮತ್ತು ಮರುಹೊಂದಿಸಲು ನಮಗೆ ಅನುವು ಮಾಡಿಕೊಡುತ್ತದೆ ಎಂದರು.


ಚಾಮರಾಜನಗರದಲ್ಲಿ ಶ್ರೀರಾಮನವಮಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಕೃಷ್ಣಕುಮಾರ್, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್, ಮುಖಂಡರಾದ ಕುಲಗಾಣ ಶಾಂತಮೂರ್ತಿ, ರಾಜು, ನಟರಾಜು, ಗುರು, ಶಿವರಾಜು ಇತರರು ಇದ್ದರು.

ಇಂದು ವಿವಿ ಸಂಸ್ಥಾಪನಾ ದಿನಾಚರಣೆ

ಚಾಮರಾಜನಗರ: ಚಾಮರಾಜನಗರ ವಿಶ್ವವಿದ್ಯಾನಿಲಯದ ತೃತೀಯ ವರ್ಷದ ಸಂಸ್ಥಾಪನಾ ದಿನಾಚರಣೆಯನ್ನು ಮಾ.28ರಂದು ಬೆಳಿಗ್ಗೆ 11 ಗಂಟೆಗೆ ಚಾಮರಾಜನಗರ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮಂಗಳೂರು ವಿವಿ ಹಾಗೂ ಲಕ್ನೋದ ಅಂಬೇಡ್ಕರ್ ವಿವಿ ವಿಶ್ರಾಂತ ಕುಲಪತಿಗಳಾದ ಪ್ರೊ. ಬಿ. ಹನುಮಯ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಬಿಳಿಗಿರಿರಂಗನ ಬೆಟ್ಟದಲ್ಲಿ 9.86 ಲಕ್ಷ ರೂ. ಸಂಗ್ರಹ

ಯಳಂದೂರು, ಮಾ.27– ತಾಲೂಕಿನ ಇತಿಹಾಸ ಪ್ರಸಿದ್ಧ ಬಿಳಿಗಿರಿರಂಗನ ಬೆಟ್ಟದ ರಂಗನಾಥ ಸ್ವಾಮಿ ದೇವಾಲಯದಲ್ಲಿ ಗೋಲಕ ಹಣದ ಎಣಿಕೆ ಕಾರ್ಯ ನಡೆಯಿತು.

ಫೆ.10ರ ನಂತರ 40 ದಿನಗಳಲ್ಲಿ ಒಟ್ಟು 9,86,386 ರೂಪಾಯಿ ಕಾಣಿಕೆ ಹಣ ಸಂಗ್ರಹವಾಗಿದೆ. ಸಂಗ್ರಹವಾದ ಹಣವನ್ನು ಪಟ್ಟಣದ ಕರ್ನಾಟಕ ಬ್ಯಾಂಕ್ ಶಾಖೆಗೆ ಜಮಾ ಮಾಡಲಾಯಿತು.

ದೇವಾಲಯದ ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀನಿವಾಸ್ ಜೆ ,ದೇವಾಲಯದ ಆಡಳಿತ ಅಧಿಕಾರಿ ಸುರೇಶ್, ಪಾರು ಪತ್ತೆದಾರ ರಾಜಣ್ಣ, ಉಪತಹಶೀಲ್ದಾರ್ ಶ್ರೀನಿವಾಸ್ ಮೂರ್ತಿ ಆರ್‌ಐ ಯದುಗಿರಿ, ಗ್ರಾಮ ಸಹಾಯಕ ಚಂಗಚಹಳ್ಳಿ, ಮಹದೇವಸ್ವಾಮಿ. ಅರ್ಚಕ ರವಿಕುಮಾರ್, ಪೊಲೀಸ್ ಅಧಿಕಾರಿಗಳು, ಬ್ಯಾಂಕ್, ಇಲಾಖೆ ಹಾಗು ದೇವಾಲಯದ ಸಿಬ್ಬಂದಿ ಹಾಜರಿದ್ದರು.



ವಶಪಡಿಸಿಕೊಳ್ಳಲಾಗಿದ್ದ ಗಾಂಜಾ ಗಿಡಗಳ ನಾಶ

ಚಾಮರಾಜನಗರ, ಮಾ.27– ಚಾಮರಾಜನಗರ ಜಿಲ್ಲೆಯ ಅಬಕಾರಿ ಇಲಾಖೆಯು ಒಟ್ಟು 34 ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ಒಣ ಗಾಂಜಾ ಹಾಗೂ ಗಾಂಜಾ ಗಿಡಗಳನ್ನು ಮೈಸೂರಿನ ಗುಜ್ಜೆಗೌಡನಪುರದಲ್ಲಿರುವ ಜಿಐಪಿಎಸ್ ಬಯೋ ಮೆಡಿಕಲ್ ವೇಸ್ಟ್ ಮ್ಯಾನೇಜ್ ಮೆಂಟ್ ಘಟಕದಲ್ಲಿ ನಾಶಪಡಿಸಲಾಯಿತು.

34 ಪ್ರಕರಣಗಳಲ್ಲಿ 17 ಕೆಜಿ 615 ಗ್ರಾಂ ಒಣ ಗಾಂಜಾ ಹಾಗೂ 123 ಗಾಂಜಾ ಗಿಡಗಳನ್ನು ಡ್ರಗ್ ಡಿಸ್ಪೋಜಲ್ ಕಮಿಟಿ ಸಮ್ಮುಖದಲ್ಲಿ ಮಹಜರು ನಡಿಸಿ ನಾಶಪಡಿಸಲಾಯಿತು. ಅಬಕಾರಿ ಇಲಾಖೆಯ ಮೈಸೂರು ವಿಭಾಗದ ಜಂಟಿ ಆಯುಕ್ತರಾದ ಬಸವರಾಜ ಹಡಪದ, ಚಾಮರಾಜನಗರ ಉಪ ಆಯುಕ್ತರಾದ ಚಂದ್ರು ಪಿ, ಮೈಸೂರು ಗ್ರಾಮಾಂತರ ಉಪ ಆಯುಕ್ತರಾದ ಡಾ. ಮಾದೇವಿಬಾಯಿ ಅವರ ಸಮ್ಮುಖದಲ್ಲಿ ಒಣ ಗಾಂಜಾ ಹಾಗೂ ಗಾಂಜಾ ಗಿಡಗಳನ್ನು ನಾಶ ಪಡಿಸಲಾಯಿತು.

ಪುಟ್ಟನಿಂಗಮ್ಮ ನಿಧನ

ಯಳಂದೂರು, ಮಾ.27– ಪಟ್ಟಣದ ಬಳೆಪೇಟೆಯ ಮೊತ್ತದಕೇರಿ ಪುಟ್ಟನಿಂಗಮ್ಮ (70) ವಯೋಸಹಜ ಅನಾರೋಗ್ಯದಿಂದ ನಿಧನರಾಗಿದ್ದಾರೆ.



ಪಟ್ಟಣ ಪಂಚಾಯತಿ ಮಾಜಿ ಸದಸ್ಯ ಬಿ.ರವಿ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೊತ್ತದಕೇರಿಯ ನಾಯಕ ಸಮುದಾಯದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ, ಪಂಚ ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷರು ಹಾಗೂ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹೊಂಗನೂರು ಚಂದ್ರು ಮತ್ತು ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಯರಾಮ್ ಪುಟ್ಟನಿಂಗಮ್ಮ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಶಾಲೆಗೆ ಕೊಡುಗೆ



ಮೈಸೂರು ತಾಲೂಕು, ಜಯಪುರ ಹೋಬಳಿ, ಮಾವಿನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ) ಜಯಪುರ ಶಾಖೆ ವತಿಯಿಂದ ಫ್ಯಾನ್‌ಗಳು ಮತ್ತು ಜಮ್ಖಾನಗಳನ್ನು ಶುಕ್ರವಾರ ಕೊಡುಗೆಯಾಗಿ ನೀಡಲಾಯಿತು. ಈ ವೇಳೆ ಎಸ್‌ಬಿಐ ಶಾಖಾ ವ್ಯವಸ್ಥಾಪಕ ವಿ.ನಟರಾಜ್, ಶಾಲೆಯ ಮುಖ್ಯಶಿಕ್ಷಕಿ ಗಾಯಿತ್ರಿ, ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ, ಶಿಕ್ಷಕರು ಮತ್ತು ಬ್ಯಾಂಕ್ ಸಿಬ್ಬಂದಿ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
Receptionist for a lodge in Bannimantap
ಬನ್ನಿಮಂಟಪ ಲಾಡ್ಜ್‌ನಲ್ಲಿ ರಿಸೆಪ್ಷನಿಸ್ಟ್ ಹುಡುಗರು ಬೇಕಾಗಿದ್ದಾರೆ
08214006020

BEFORE DRILLING BOREWELL CONTACT
GROUND WATER CONSULTANT
ಸಿ.ಟಿ. ಚಂದ್ರಶೇಖರ್ ಭೂ ವಿಜ್ಞಾನಿ
9448389090

RAI ESTATES
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್‌ಗಳನ್ನು ಕೊಂಡುಕೊಳ್ಳಿ
9448181488
10, New Sayyaji Rao Road, Bamboo Bazar, Mysuru - 570 001

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ-ನೀಮ್
#203, ಬನ್ನಿಮಂಟಪ, ಮೈಸೂರು–570015
80888-87802

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST,
2. RECEPTIONIST,
3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, NIVEDITHA NAGAR, MYSORE-570022

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

ಸೈಟು ಮಾರಾಟಕ್ಕಿದೆ
30x50(ರೆವಿನ್ಯೂ)
ವಿಜಯನಗರ 2ನೇ ಹಂತ (ವಿದ್ಯಾವರ್ಧಕ ಇಂಜಿನಿಯರ್ ಕಾಲೇಜ್ ಹಿಂಭಾಗ)
9886651605

COMMERCIAL SPACE FOR RENT
Commercial Space Attached to Ring Road opposite to APMC For Rent, Mysore. Contact
7975437956
9886386698

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮೇಟಗಳ್ಳಿ ಮತ್ತು ಕೂರ್ಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 20,000+W/o(8 hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620667819

ಗೋಡೌನ್ ಬಾಡಿಗೆಗೆ ದೊರೆಯುತ್ತದೆ
ಭೀಮ ಬ್ರದರ್ಸ್ ಹಿಂಭಾಗ, ಡಿ. ದೇವರಾಜ ಅರಸು ರೋಡ್,
9945758599
ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ
ಅಗಲ 12 ಉದ್ದ 26

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ, ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತಮಾತೃಕ ಲೇಔಟ್, ಪೊಲೀಸ್ ಲೇಔಟ್ ಜೆ.ಎಸ್.ಎಸ್ ಲೇಔಟ್
9844436672

ಜಮೀನು ಮಾರಾಟಕ್ಕಿದೆ
ಮೈಸೂರು–ಬಿಳಿಕೆರೆ–ಕೆ.ಆರ್.ನಗರ ಹೈವೆ ರಸ್ತೆಗೆ ಹೊಂದಿಕೊಂಡಿರುವ 1 ಎಕರೆ ಜಮೀನು
ಡಾಂಬಾರು ರಸ್ತೆಗೆ ಹೊಂದಿಕೊಂಡಿರುವ 20 ಗುಂಟೆ ಜಮೀನು ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿಮೀ ಅಹಲ್ಯಗ್ರಾಮ
ಮೈಸೂರಿನ ಸುತ್ತಮುತ್ತ ಜಮೀನು ಹಾಗೂ ಸೈಟು ಬೇಕಾಗಿದ್ದರೆ ಸಂಪರ್ಕಿಸಿ
7411848108

ತಕ್ಷಣ ಬೇಕಾಗಿದ್ದಾರೆ
PUC/ ಡಿಪ್ಲೋಮಾ / ಯಾವುದೇ ಪದವಿ ಹೊಂದಿರುವ, 20-25 ವರ್ಷ ವಯಸ್ಸಿನ ಹಾಗೂ ಉತ್ತಮ ಕೌಶಲ್ಯ ಇರುವ Marketing Executive (2 ಹುದ್ದೆಗಳು) ಮತ್ತು PU ಕಾಲೇಜಿಗೆ Office Attender (2 ಹುದ್ದೆಗಳು), ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯ
9108982242

SITE FOR SALE
MUDA APPROVED 30X50 NORTH-EAST CORNER. ANANDSAGAR/PRAGATHI layout BEHIND ST JOSEPH CENTRAL SCHOOL ILWALA.
9972399939

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 55 ವರ್ಷದೊಳಗಿನ ಪುರುಷರು, ಬೈಕ್ ಇರುವಂತಹವರು ಬೇಕಾಗಿದ್ದಾರೆ. SSLC ವಿದ್ಯಾರ್ಹತೆ ಇರಬೇಕು. ಹಳೇ ಕೆಸರೆ, ಕಾಮಾಕೆರೆ ಹುಂಡಿ, ನಾಯ್ಡುನಗರ, ರಾಜೀವ್‌ನಗರ, ಬನ್ನಿಮಂಟಪ, ಎನ್.ಆರ್. ಮೊಹಲ್ಲಾ, ಸಿದ್ದಲಿಂಗಪುರ, ಸಾತಗಳ್ಳಿ, ರಮ್ಮನಹಳ್ಳಿ ಹಾಗೂ ರಾಘವೇಂದ್ರನಗರದ ಸುತ್ತಮುತ್ತಲಿನವರು ಸಂಪರ್ಕಿಸಿ:
Mob: 7259598615

ಬೇಕಾಗಿದ್ದಾರೆ
ಹುದ್ದೆ ಹಣಕಾಸು ಸಲಹೆಗಾರ ಭಾರತದ ಟಾಪ್ ಬ್ಯಾಂಕ್‌ನಿಂದ ಸಮಯದ ಮಿತಿಯಿಲ್ಲ (Part Time) ಅಂತರಾಷ್ಟ್ರೀಯ ಪ್ರವಾಸಗಳು, ವೇರಿಯಬಲ್ ಭತ್ಯೆ (5L to 8L), P.A (Based on Business) ನಿವೃತ್ತ ಅಧಿಕಾರಿ, ಗೃಹಿಣಿಯರು, ವ್ಯಾಪಾರಸ್ಥರಿಗೆ ಆದ್ಯತೆ, ವಯಸ್ಸು 25y to 55y ವಿದ್ಯಾರ್ಹತೆ : SSLC ಕಡಿಮೆ ಅವಕಾಶಗಳು ಮಾತ್ರ Contact more info
8095741384

ತಕ್ಷಣ ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತ ಮುತ್ತ ಕಾರ್ಖಾನೆಗಳಲ್ಲಿ, ಕಂಪನಿಗಳಲ್ಲಿ ಹಾಗೂ ಉನ್ನತ ಆಸ್ಪತ್ರೆಗಳಿಗೆ ಸ್ಕೂಲ್‌ಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಹೌಸ್ ಕೀಪಿಂಗ್, ವಾರ್ಡ್ ಬಾಯ್ helper, Labours, ಮಹಿಳೆಯರು & ಪುರುಷರು ತಕ್ಷಣ ಬೇಕಾಗಿದ್ದಾರೆ. ಊಟ ವಸತಿ, ESI & PF ಸೌಲಭ್ಯ ಇದೆ. ಜನಸುರಕ್ಷಾ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಪಿನಕಲ್ ಇಲ್ಲಿ ಪಿಗ್ಮಿ ಕಲೆಕ್ಟರ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ.
(FULL TIME & PART TIME JOB)
ಸಂಪರ್ಕಿಸಿ : 7795367205
9611208553, 9036461347

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಕೆಲಸ ಡೇಟಾ ಎಂಟ್ರಿ, ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ. 20,000 ದಿಂದ ಕೊರಿಯರ್ ಲಭ್ಯವಿದೆ.
9964322833, 7996021216

ಮೈಸೂರ್ ಲ್ಯಾಂಡ್ ಮಾರ್ಟ್
ಪೊಲೀಸ್ ಬಡಾವಣೆ 30x40
ಸಾತಗಳ್ಳಿ ಬಡಾವಣೆ 30x40
ಲಲಿತಾದ್ರಿಪುರ ರಿಂಗ್ ರಸ್ತೆ ಹತ್ತಿರ ಹಾಗೂ ಹಳೇ ಕೆಸರೆಯಲ್ಲಿ ನಿವೇಶನಗಳು ಲಭ್ಯವಿದೆ.
Mob: 9448447035

Site for Sale
KHB Kenchalagudu
Mob: 9731112182

ಮನೆ ಮಾರಾಟಕ್ಕಿದೆ
30x40
ಗ್ರೌಂಡ್ ಫ್ಲೋರ್ & ಮೊದಲ ಮಹಡಿ (ನೆಲ ಮಹಡಿ), ಜೆ.ಪಿ. ನಗರ, ಪೊಲೀಸ್ ಬೂತ್ ಹತ್ತಿರ.
Mob: 9980325199

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645
9008711654

S.K. CONSTRUCTION
ಸ್ವಂತ ಮನೆ ಕಟ್ಟಿಸಬೇಕೆ ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ 3.D. Plan- ಸಹಿತ Loan ಕೂಡ ಮಾಡಿಸಿ ಹೊಸ ಮನೆ Construction ಸಹಿತ ಮಾಡಿ ಮನೆ ಕಟ್ಟಿಕೊಡುತ್ತೇವೆ.
9620528490

ಮನೆ ಬಾಡಿಗೆಗೆ
ಇರ್ವಿನ್ ರಸ್ತೆ ಹತ್ತಿರ, ಚಿತ್ರಾನ್ ಹಾಸ್ಟೆಲ್ ಹಿಂದೆ. 1 ರೂಮ್, ಹಾಲ್, ಕಿಚನ್, ಬಾತ್ ರೂಮ್ ಇರುವ ಮನೆ. ಮನೆಯ ವಿಸ್ತೀರ್ಣ 20x25. ಬಾಡಿಗೆ ರೂ. 3500. ಅಡ್ವಾನ್ಸ್: ರೂ. 30,000. ಆಸಕ್ತರು ಸಂಪರ್ಕಿಸಿ:
7022776672, 8861041013

FOR SALE
30X40 SITE @PRAKRUTHI ENCLAVE, 20X40, 30X50 GURUKULA LYT JP NAGAR
20x30 Site @ VRL Layout, HD Kote Road
30X45 CORNER SITE NEAR DATTAGALLI 80FT ROAD
20x30 Site & Duplex House @ Vijaya Nagar
Commercial Properties Available
PRAKRUTHI PROPERTIES
95386 90359, 90359 90359

FOR SALE
2 & 3 BHK New Apartments @ Ramakrishna Nagar.
20x30, 30x40 2,3 & 4 BHK New Construction as Per Your Plan Near Rainbow School, Bogadi
30x50 Sites Near RT Nagar Brahmins Lyt, 50ft & 60ft Road
PRAKRUTHI PROPERTIES
95386 90359, 90359 90359

ಖರೀದಿಗೆ ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ. ಅಂತರದಲ್ಲಿ 1–3 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ. ಸಂಪರ್ಕಿಸಿ:
Mob: 6364795551

WANTED
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ
99011 63200
97435 65907

50x80
North Face site sale Roopanagar
9880273834

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹೆಲ್ಪರ್‌ಗಳು ಬೇಕಾಗಿದ್ದಾರೆ.
ಸಂಬಳ : 14,000/–
7899754149



V-GUARD
10 ವರ್ಷಗಳ ವಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

Bajaj Capital is HIRING
Client Engagement Executive-5 nos.
Team Leader- 2nos
House Keeping - 1nos
Chamaraja Double Road, Mysore
6364322016

ಬೇಕಾಗಿದ್ದಾರೆ
ಲಾರಿ ಡ್ರೈವರ್ ಬೇಕಾಗಿದ್ದಾರೆ.
ಕ್ಯಾಂಟೀನ್, PF ಮತ್ತು ESI ಸೌಲಭ್ಯವಿದೆ. ಸಂಪರ್ಕಿಸಿ
9341623350

JPG ಟೆನ್ನಿಸ್ ಅಕಾಡೆಮಿ ಟೆನ್ನಿಸ್ ಕಲಿಯಿರಿ
ಇಂದು ಸಣ್ಣ ಅಂಗೈಗಳು ನಾಳೆ ಗಟ್ಟಿಯಾದ ಕೈಗಳಾಗಬಹುದು. ತಜ್ಞರ ತರಬೇತಿಯ ಮೂಲಕ ಟೆನಿಸ್ ಕಲಿಯಿರಿ ಮತ್ತು ನಿಮ್ಮ ಮನಸ್ಸು ಮತ್ತು ಸ್ನಾಯುಗಳನ್ನು ಆರೋಗ್ಯವಾಗಿಡಿ. ಟೆನಿಸ್ ತರಬೇತಿ ತರಗತಿಗಳನ್ನು ಮೈಸೂರಿನ ಯಾದವಗಿರಿ ರೈಲ್ವೆ ಸಂಸ್ಥೆಯಲ್ಲಿ ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ
ಸಂಪರ್ಕಿಸಿ 9448872311
9972985795 / 9900632626
ಆರ್.ಜಯಪ್ರಕಾಶ್, ಟೆನಿಸ್ ತರಬೇತುದಾರ

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್‌ಕೇರ್ ತರಬೇರಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

COMMERCIAL SITE FOR SALE
Site No. 1074 W/F, 100ft Double Road, 50x85 K.B.L. Silicon City (NIE College Road)
Price 3.25 Cr. Negotiable
SITE WANTED any Stage in VIJAYANAGAR
94480-52955

WANTED
For Office Work and Field Work Qualification - PUC or Any Degree Male - 5 No's Female - 5 No's, Salary - ₹ 15000 + incentives
Call: 9845028614

HOUSE FOR LEASE
2 BHK and 1 BHK in Brindavan extension, Mysore
9481675578

ಕಳೆದಿದೆ
ನಂ. 59, ರೈಲ್ವೆ ಲೇಔಟ್, ರಮಾಬಾಯಿನಗರ, ಮೈಸೂರು ಇಲ್ಲಿ ವಾಸವಾಗಿರುವ ಗಿರಿಜ W/o ಮಂಜುನಾಥ ರವರಿಗೆ ಮಂಜೂರಾಗಿದ್ದ ರಾಜೀವ್‌ಗಾಂಧಿ ವಸತಿ ಯೋಜನೆಯ ಅನುಷ್ಠಾನ ಆಶ್ರಯ ಸಮಿತಿ ಚಾಮುಂಡೇಶ್ವರಿ(ಪಾಲಿಕೆ ವ್ಯಾಪ್ತಿ) ಕ್ಷೇತ್ರದ ಮಂಡಕಳ್ಳಿಯಲ್ಲಿನ ನಿವೇಶನದ ತಾತ್ಕಾಲಿಕ ತಿಳುವಳಿಕೆ ಪತ್ರ ಕಳೆದುಹೋಗಿದ್ದು, ಸಿಕ್ಕವರು ದಯವಿಟ್ಟು ಸಂಪರ್ಕಿಸಿ:
7795294946

10-15 ಗುಂಟೆ ಜಮೀನು
ನಂಜನಗೂಡು ಅಥವಾ ಹುಣಸೂರು ಹೆದ್ದಾರಿಯಲ್ಲಿ ಖರೀದಿಗೆ ಬೇಕಾಗಿದೆ.
9632020620

COMMERCIAL SPACE FOR RENT
3500 Sqft per floor, G+I+II in Kuvempunagar Hotel for rent, Running in Kuvempunagar 4 BHK House for rent 1st Floor
9513527666
9880882902

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸುತ್ತದೆ.
9448229184
7899625268

ಮನೆ ಮಾರಾಟಕ್ಕೆ ಇದೆ
ಮನೆ 30x40, 20x30, Site 30x40 ಶ್ರೀರಾಂಪುರ ಹೂಟಗಳ್ಳಿ Site 30x40
9008711654

CCTV Service & Installation At Best Price
9880123633

ನಿವೇಶನ ಮಾರಾಟಕ್ಕಿದೆ
Commercial Site for Sale 35x50
ಟೆಂಪಲ್ ಮೌಂಟ್ Corner site S/W
9686969813
9886481265

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತಮುತ್ತ ಇರುವ ಲೇಔಟ್‌ಗಳಲ್ಲಿ.
9686071750

CHANGE OF NAME
This is to declare that I, Sumith Sanjay, resident of # 912/2, 2nd Cross, Kumbarageri, Lashkar Mohalla, Mysore-570001, Kamataka, India have changed my name to Sumith Sanjay Nangare vide Affidavit sworn to before Notary Sri.Mallikarjuna Swamy, on 25.03.2026 Here after wards I wish to be called and known for all acts, deeds and things as Sumith Sanjay Nangare only.
Sd/- Sumith Sanjay Nangare

ಬೇಕಾಗಿದ್ದಾರೆ
ಯುನಿಸೆಕ್ಸ್ ಸಲೂನ್‌ನಲ್ಲಿ ಕೆಲಸ ಮಾಡಲು ಪ್ರೊಫೆಷನಲ್ ಹೇರ್ ಡ್ರೆಸ್ಸರ್ ಬೇಕಾಗಿದ್ದಾರೆ. ಸ್ಥಳ: ಶಾರದಾ ದೇವಿನಗರ, ಮೈಸೂರು. ಸಂಪರ್ಕಿಸಿ:
9882299898

ಕೊಡಗು ಸಹಕಾರ ಸಂಘ ನಿ., ಜಯಲಕ್ಷ್ಮೀಪುರಂ, ಮೈಸೂರು.
ಪ್ರಕಟಣೆ
ಈ ಸಂಘದ ಸಭಾಂಗಣ ನೋಡಿಕೊಳ್ಳಲು ಮತ್ತು ಶುಚಿತ್ವ ಕೆಲಸಕ್ಕಾಗಿ ನೌಕರರು ಬೇಕಾಗಿದ್ದಾರೆ. ಇಲ್ಲೇ ಉಳಿದು ಕೊಳ್ಳಲು ವಸತಿ ಸೌಲಭ್ಯವಿದ್ದು ಮಾಸಿಕ ಸಂಚಿತ ವೇತನ ಮತ್ತು ಶುಚಿತ್ವ ಭತ್ಯೆ ಪಾವತಿಸಲಾಗುವುದು.
ಆಸಕ್ತಿ ಉಳ್ಳವರು ಕೂಡಲೇ ಸಂಘದ ಕಚೇರಿ ದೂರವಾಣಿ ಸಂಖ್ಯೆ 0821 2511987 ಅಥವಾ 9901392444 ನ್ನು ಸಂಪರ್ಕಿಸುವುದು.

FOR RENT
OFFICE ROOM WITH BATH, 2ND FLOOR 12X12 FEET, OPPOSITE VIJAYA BANK CIRCLE, KUVEMPUNAGAR DOUBLE ROAD, MYSORE.
RENT: RS. 5000/-
MOB: 8892048596

HOUSE FOR RENT
Ramanuja Road 14th Cross Mysore, 2BHK No Car Parking
8050259938
8073733963

RESTART ACADEMY
Conducting Drawing & painting competition @Mahadeshwara temple, Chamraja mohalla. Mysore. Register @
6362375366
8197136369
9353627343

ಬೇಕಾಗಿದ್ದಾರೆ
ಹೆಸರಾಂತ ಸಸ್ಯಹಾರಿ ಹೋಟೆಲಿಗೆ ಈ ಕೆಳಗಿನ ಕೆಲಸಕ್ಕೆ ನೌಕರರು ಬೇಕಾಗಿದ್ದಾರೆ.
1. ಕಂಪ್ಯೂಟರ್ ಬಿಲ್ ಕ್ಲರ್ಕ್/ಕ್ಯಾಪ್ಟನ್,
2. ಕ್ಯಾಶಿಯರ್, 3. ಕೌಂಟರ್ ಕೆಲಸ
4. ಸೂಪರ್ ವೈಸರ್, ಎಲ್ಲಾ ಕೆಲಸಕ್ಕೆ ಕಂಪ್ಯೂಟರ್ ತಿಳುವಳಿಕೆ/ ಅರಿವು ಬೇಕು. ವಯಸ್ಸು 21 ರಿಂದ 45ರ ಒಳಗಡೆ. ವಿವರಗಳಿಗೆ ಸಂಪರ್ಕಿಸಿ
8494993333

ಮನೆ ಬಾಡಿಗೆಗೆ ಇದೆ
ಮಹಡಿಯಲ್ಲಿ 1 ಬೆಡ್ ರೂಂ ಮನೆ ಮತ್ತು 2 ಬೆಡ್ ರೂಂನ ಮನೆ, ಶ್ರೀರಾಂಪುರ ಮುಖ್ಯ ರಸ್ತೆ, ವಿವೇಕಾನಂದ ಸರ್ಕಲ್ ಬಳಿ, ವಾಣಿಜ್ಯೋದ್ದೇಶಕ್ಕೂ ಸೂಕ್ತವಾಗಿದೆ.
9448047419

ಬೇಕಾಗಿದ್ದಾರೆ
ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲಿರುವ ಶುದ್ಧ ಸಸ್ಯಾಹಾರ ಹೋಟೆಲ್‌ಗೆ ಅನುಭವ ಇರುವ ದಕ್ಷಿಣ ಭಾರತೀಯ ಶೈಲಿಯ ಅಡುಗೆ ಭಟ್ಟರು, ದೋಸೆ ಭಟ್ಟರು ಹಾಗು ಕೌಂಟರ್ /ಪಾರ್ಸೆಲ್ ಹುಡುಗರು.
9945253425

ಫ್ರೆಂಡ್ಲಿ ಬೂಟಿಕ್ ಬೇಕಾಗಿದ್ದಾರೆ
ಟೈಲರ್‌ಗಳು (ಗಂಡಸರು), ಹೆಲ್ಪರ್‌ಗಳು (ಹೆಂಗಸರು) ಫುಲ್ ಟೈಮ್, ಪಾರ್ಟ್ ಟೈಮ್
8217884837
9187552022
ವಿಜಯನಗರ ನಾಲ್ಕನೇ ಹಂತ

WANTED
Female Store Keeper - 3 Nos.
Delivery Boys: 2 Nos.
For Pharma Distributors
7022345675
9739377827

HOUSE FOR LEASE / SALE
40x60, 3 BHK house for lease at Ramakrishna Nagar. 40x60 house for sale at Ramakrishnanagar.
CALL:7353430309

FOR SALE
60X40 W/F RAJIVNAGAR, MYSORE MUDA SITE FOR SALE
Brokers Excuse
CONTACT
9448896468
9663813852

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
(ಆಸ್ತಿಪತ್ರ ಬರಹಗಾರರ ಕಛೇರಿ) ಸಿದ್ಧಾರ್ಥನಗರ, ಮೈಸೂರು.
8971936090
9686071750

WANTED
Telecalling ಮಾಡಲು ಹುಡುಗಿಯರು ಬೇಕಾಗಿದ್ದಾರೆ. Salary + Incentive. D.D. Urs Road.
Mob: 9945077757

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
Bosch ಕಂಪನಿಯಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
MOB: 9880151303

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
Hagella ಕಂಪನಿಯಲ್ಲಿ Front Office ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
MOB: 9880151303

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ : 18000 (8 hrs, 26 ದಿನಗಳು)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಅಲಿನೇಷನ್ ಜಮೀನು ಬಾಡಿಗೆಗೆ ಇದೆ
ಬೋಗಾದಿ–ಗದ್ದಿಗೆ ಮುಖ್ಯ ರಸ್ತೆಯಲ್ಲಿ ಅಲಿನೇಷನ್ ಆಗಿರುವ 1¼ ಎಕರೆ ಜಮೀನು ನೀರು, ವಿದ್ಯುತ್, ಕಾಂಪೌಂಡ್ ವಾಸದ ಮನೆ ಇರುವ ಜಮೀನು ಕೈಗಾರಿಕೆ, ಗೋಡೌನ್ ಇತರೆ ಉದ್ದೇಶಕ್ಕೆ ಚದರಡಿ 199 ಪೈಸೆಗೆ ಬಾಡಿಗೆಗೆ ಇದೆ. ಎಲ್ಲಾ ಸೌಕರ್ಯವಿದೆ. ಸಂಪರ್ಕಿಸಿ:
MOB: 8197609290

ಮನೆ ಬಾಡಿಗೆಗೆ ಇದೆ
ಪೂರ್ವ ದಿಕ್ಕಿನ ಮೊದಲ ಮಹಡಿಯಲ್ಲಿ ನವೀಕರಿಸಿರುವ ACC ಶೀಟ್‌ನ 2 ಬಿಹೆಚ್‌ಕೆ, ಸಂಪು–ಮೋಟಾರ್ ಹೊಂದಿರುವ ಮನೆ ವಿದ್ಯಾರಣ್ಯಪುರಂ, ಸಾರ್ವಜನಿಕ ಹಾಸ್ಟೆಲ್ ಹತ್ತಿರ ಬಾಡಿಗೆಗೆ ಇದೆ. ಸಸ್ಯಾಹಾರಿಗಳಿಗೆ ಆದ್ಯತೆ. ಸಂಪರ್ಕಿಸಿ:
MOB: 9342101495

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ತಿ.ನರಸೀಪುರ ಪುರಸಭೆ: 86 ಲಕ್ಷ ಉಳಿತಾಯ ಬಜೆಟ್



ತಿ.ನರಸೀಪುರದ ಪುರಸಭೆಯಲ್ಲಿ ಅಧಿಕಾರಿಗಳು ಬಜೆಟ್ ಪ್ರತಿಯನ್ನು ಪ್ರದರ್ಶಿಸಿದರು.

ತಿ.ನರಸೀಪುರ, ಮಾ.27– ಉಪವಿಭಾಗಾಧಿಕಾರಿ ಆಶಪ್ಪ ಅವರು ಪಟ್ಟಣದ ಪುರಸಭೆಯ 2026–27ನೇ ಸಾಲಿಗೆ 86,44,458 ಲಕ್ಷ ರೂ.ಗಳ ಉಳಿತಾಯ ಬಜೆಟ್ ಬಂಡಿಸಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನಡೆದ ಬಜೆಟ್ ಸಭೆಯಲ್ಲಿ ಮುಖ್ಯಾಧಿಕಾರಿ ಶ್ರೀನಿವಾಸ್ ಸೇರಿದಂತೆ ಅಧಿಕಾರಿಗಳ ಉಪಸ್ಥಿತಿಯಲ್ಲಿ 46,80,21,542 ಕೋಟಿ ರೂ. ಗಾತ್ರದ ಬಜೆಟ್‌ಗೆ ಎಸಿ ಅನುಮೋದನೆ ನೀಡಿದರು.

ಆರಂಭ ಶಿಲ್ಕು 3,30,74,458 ಕೋಟಿ ರೂ.ಗಳೊಂದಿಗೆ ಪುರಸಭೆ ವಿವಿಧ ಮೂಲಗಳಿಂದ 24,33,33,000 ಕೋಟಿ ರೂ. ಆದಾಯ ಹಾಗೂ 23,46,88,542 ಕೋಟಿ ರೂ. ನಿರೀಕ್ಷಿತ ಪಾವತಿ ಸೇರಿದಂತೆ ಒಟ್ಟು ಆದಾಯ 23,33,33,000 ಕೋಟಿ ರೂ. ಸಂಗ್ರಹವಾಗುವ ನಿರೀಕ್ಷೆ ಇದೆ. ಅದರಲ್ಲಿ 23,46,88,542, ರೂ.ಗಳ ನಿರೀಕ್ಷಿತ ಪಾವತಿ ಎಂದು ಅಂದಾಜಿಸಲಾಗಿದೆ.

ನಿರೀಕ್ಷಿತ ಆದಾಯದಲ್ಲಿ ನೀರು ಸರಬರಾಜು ಮತ್ತು ಒಳ ಚರಂಡಿ ಸಂಪರ್ಕ ಶುಲ್ಕ 71.50 ಲಕ್ಷ, ಆಸ್ತಿ ತೆರಿಗೆ 3.45 ಕೋಟಿ, ಜಾಹೀರಾತು ತೆರಿಗೆ 1 ಲಕ್ಷ, ವಾಣಿಜ್ಯ ಮಳಿಗೆ ಬಾಡಿಗೆ 45 ಲಕ್ಷ, ಉದ್ದಿಮೆ ಪರವಾನಗಿ 15 ಲಕ್ಷ, ಕಟ್ಟಡ ಪರವಾನಗಿ 10 ಲಕ್ಷ, ವಾಹನ ನಿಲುಗಡೆ ಶುಲ್ಕ 5 ಲಕ್ಷ, ಖಾತಾ ವರ್ಗಾವಣೆ ಮತ್ತು ಖಾತಾ ನಕಲು ಫೀ ಯಿಂದ 8.50 ಲಕ್ಷ ಅಭಿವೃದ್ಧಿ ಶುಲ್ಕ ಜುಲ್ಮಾನೆ ಹಾಗೂ ಇತರೆ ಆದಾಯ 69.68 ಲಕ್ಷ, ಘನ ತ್ಯಾಜ್ಯ ನಿರ್ವಹಣಾ ಶುಲ್ಕ 16.50 ಲಕ್ಷ, ಮಾರುಕಟ್ಟೆ ಶುಲ್ಕ 12 ಲಕ್ಷ, ವೇತನ ಅನುದಾನ 3 ಕೋಟಿ, ವಿದ್ಯುತ್ ಅನುದಾನ 2.61 ಕೋಟಿ, ಮುಕ್ತ ನಿಧಿ ಅನುದಾನ 12 ಲಕ್ಷ, ಬರ ಪರಿಹಾರ ಅನುದಾನ 5 ಲಕ್ಷ, ಬ್ಯಾಂಕ್ ಖಾತೆಗಳ ಬಡ್ಡಿ 10 ಲಕ್ಷ, 15ನೇ ಹಣಕಾಸು ಅನುದಾನ 3.63 ಕೋಟಿ, ಸ್ವಚ್ಛ ಭಾರತ್ ಮಿಷನ್ ಅನುದಾನ 50 ಲಕ್ಷ, ಸಲ್ಮ್ ಮತ್ತು ನಲ್ಮ್ ಕಾರ್ಮಿಕರ ಗೃಹ ಭಾಗ್ಯ ಅನುದಾನ 2.5 ಲಕ್ಷ ಹಾಗೂ ಇತರೆ ಅನುದಾನ 5 ಕೋಟಿ ಸೇರಿದಂತೆ 24,33,33,000 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ ಎಂದರು.

ನಿರೀಕ್ಷಿತ ಪಾವತಿಯಲ್ಲಿ ಪುರಸಭೆ ವ್ಯಾಪ್ತಿ ಮುಖ್ಯ ರಸ್ತೆಗಳ ಸ್ವಾಗತ ಕಮಾನು ನಿರ್ಮಾಣ ಮತ್ತು ವಾರ್ಡ್‌ಗಳಿಗೆ ಸೂಚನಾ ಫಲಕ ನಿರ್ಮಾಣಕ್ಕಾಗಿ 50 ಲಕ್ಷ, ಕಟ್ಟಡಗಳ ಅಭಿವೃದ್ಧಿ ಹಾಗೂ ನಿರ್ಮಾಣಕ್ಕಾಗಿ 15 ಲಕ್ಷ, ರಸ್ತೆ ಮತ್ತು ಚರಂಡಿಗಳು, ಮಳೆ ನೀರಿನ ಚರಂಡಿಗಳು, ಉದ್ಯಾನಗಳ ಅಭಿವೃದ್ಧಿ 6.69 ಕೋಟಿ, ಸ್ವಚ್ಛ ಭಾರತ್ ಮಿಷನ್ ಅನುದಾನದ ವೆಚ್ಚ 50 ಲಕ್ಷ, ಪ್ರಮುಖ ವೃತ್ತಗಳಲ್ಲಿ ಟ್ರಾಫಿಕ್ ನಿಯಂತ್ರಣಕ್ಕಾಗಿ ಸಿಸಿ ಕ್ಯಾಮೆರಾ ಅಳವಡಿಕೆಗೆ 5 ಲಕ್ಷ, ಸಾರ್ವಜನಿಕ ಸಮುದಾಯ ಮತ್ತು ಅಂಗನವಾಡಿ, ಶಾಲೆಗಳ ಶೌಚಾಲಯಗಳ ದುರಸ್ತಿಗಾಗಿ 15 ಲಕ್ಷ, ಬೀದಿ ನಾಯಿಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಗಾಗಿ 5 ಲಕ್ಷ, ಸರ್ವ ಜನಾಂಗದವರ ಸ್ಮಶಾನಗಳ ಅಭಿವೃದ್ಧಿಗಾಗಿ 55 ಲಕ್ಷ, ಜಾಹೀರಾತು ವೆಚ್ಚ ಪಾವತಿ 12 ಲಕ್ಷ, ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಇತರೆ ಕಾರ್ಯಕ್ರಮಗಳಿಗೆ 20.50 ಲಕ್ಷ, ಪ.ಜಾತಿ/ಪ.ಪಂಗಡಗಳ ಅಭಿವೃದ್ಧಿ ನಿಧಿಗೆ ಎಸ್‌ಎಫ್‌ಸಿ ಮತ್ತು ಪುರಸಭೆ ನಿಧಿ 10.50 ಲಕ್ಷ, ಪುಸ್ತಕ, ನಿಯತಕಾಲಿಕೆ, ಮುದ್ರಣ, ಲೇಖನ ಸಾಮಾಗ್ರಿಗಳ ಖರೀದಿಗೆ 10 ಲಕ್ಷ ಬೀದಿ ನಾಯಿ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಕೇಂದ್ರ ನಿರ್ಮಾಣಕ್ಕಾಗಿ 40 ಲಕ್ಷ, ಪತ್ರಕರ್ತರ ವಿಮೆ 2 ಲಕ್ಷ, ಪುರಸಭೆ ಖಾಯಂ ನೌಕರರ ವೇತನ 3 ಕೋಟಿ, ವಿದ್ಯುತ್ ಶುಲ್ಕ ಪಾವತಿ 2.61 ಕೋಟಿ, ನೀರು ಸರಬರಾಜು ಯಂತ್ರಗಳ ಖರೀದಿ, ಕೊಳವೆ ಬಾವಿ ಸಾಮಾಗ್ರಿಗಳು, ಮೋಟಾರ್ ಪಂಪ್, ಸ್ಟಾರ್ಟರ್, ಹ್ಯಾಂಡ್ ಪಂಪ್ ಖರೀದಿ ಮತ್ತು ನಿರ್ವಹಣೆಗಾಗಿ 1.44 ಕೋಟಿ, ಮಲೀನ ನೀರು ಶುದ್ಧೀಕರಣ ಘಟಕದ ಭೂ ಸ್ವಾಧೀನ ಪಾವತಿ 65 ಲಕ್ಷ, ಘನ ತ್ಯಾಜ್ಯ ವಿಲೇವಾರಿ ವಾಹನಗಳ ಖರೀದಿಗೆ 60 ಲಕ್ಷ, ಗುತ್ತಿಗೆ/ಹೊರಗುತ್ತಿಗೆ ನೌಕರರ ವೇತನಕ್ಕಾಗಿ 42 ಲಕ್ಷ, ಬೀದಿ ದೀಪಗಳ ಅಳವಡಿಕೆ ಮತ್ತು ವಾರ್ಷಿಕ ನಿರ್ವಹಣೆ 60 ಲಕ್ಷ, ಪೌರ ಕಾರ್ಮಿಕರ ದಿನಾಚರಣೆ, ಬೆಳಗಿನ ಉಪಹಾರ, ವೈಯಕ್ತಿಕ ಸುರಕ್ಷಾ ಧಿರಿಸು/ ಸಾಧನಗಳ ಖರೀದಿಗೆ 15 ಲಕ್ಷ, ಕೌನ್ಸಿಲ್ ಸಂಬಂಧಿ ವೆಚ್ಚ 22 ಲಕ್ಷ, ಸಂಬಂಧಿಸಿದ ವಿವಿಧ ಇಲಾಖೆಗಳಿಗೆ ಪಾವತಿಸಬೇಕಾದ ಶಾಸನ ಬದ್ಧ ತೆರಿಗೆ ಮತ್ತು ಕರಗಳ ಪಾವತಿಗಾಗಿ 1.20 ಕೋಟಿ ರೂ. ಹಾಗೂ ಸಾಮಾನ್ಯ ಆಡಳಿತ/ಇತರೆ ವೆಚ್ಚಗಳಿಗಾಗಿ 25.50 ಲಕ್ಷ ರೂ. ಸೇರಿ ಒಟ್ಟಾರೆ 23,46,88,542 ರೂ. ನಿರೀಕ್ಷಿತ ಪಾವತಿ ಮೀಸಲಿರಿಸಲಾಗಿದೆ ಎಂದರು. ಕಂದಾಯಾಧಿಕಾರಿ ತ್ರಿವೇಣಿ, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಲೆಕ್ಕಾಧಿಕಾರಿ ವಿನಯ್ ಕುಮಾರ್ ಹಾಜರಿದ್ದರು.

ಬೆಳೆಗಳಿಗೆ ಮಾರುಕಟ್ಟೆ ಕಲ್ಪಿಸಲು ಶುಕ್ರವಾರ ಸಂತೆ



ನಂಜನಗೂಡು, ಮಾ.27– ದಲ್ಲಾಳಿಗಳಿಗೆ ಅವಕಾಶ ನೀಡದೆ ರೈತರ ಬೆಳೆಗಳಿಗೆ ನೇರ ಮಾರುಕಟ್ಟೆ ಕಲ್ಪಿಸಲು ಇಂದಿನಿಂದ ಶುಕ್ರವಾರದ ಸಂತೆ ಪುನರಾರಂಭಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಎಪಿಎಂಸಿ ಆವರಣದಲ್ಲಿ ಶುಕ್ರವಾರದ ಸಂತೆಗೆ ಚಾಲನೆ ನೀಡಿ ಮಾತನಾಡಿದ ಅವರು, ನಂಜನಗೂಡಿನಲ್ಲಿ ಶುಕ್ರವಾರದ ಸಂತೆ ಅದ್ಧೂರಿಯಾಗಿ ನಡೆಯುತ್ತಿತ್ತು. ಸಂತೆಯಲ್ಲಿ ರೈತರೇ ತಾವು ಬೆಳೆದ ಬೆಳೆಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಬಹುದಾಗಿತ್ತು ಆದರೆ ಕೊರೊನಾದಿಂದ ಶುಕ್ರವಾರ ಸಂತೆ ಸ್ಥಗಿತಗೊಳಿಸಲಾಯಿತು. ಪ್ರಸ್ತುತ ದಲ್ಲಾಳಿಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಸಾರ್ವಜನಿಕರು ಮತ್ತು ರೈತರು ಶುಕ್ರವಾರದ ಸಂತೆ ಪುನರಾರಂಭಿಸಲು ಮನವಿ ಸಲ್ಲಿಸಿದ್ದರು. ರೈತರ ಬೇಡಿಕೆಯಂತೆ ಶುಕ್ರವಾರ ಸಂತೆ ಆರಂಭಿಸಲಾಗಿದ್ದು, ಇಲ್ಲಿ ಸಾರ್ವಜನಿಕರಿಗೆ ಬೇಕಾದ ದವಸ ಧಾನ್ಯ, ತರಕಾರಿ, ಸೊಪ್ಪುಗಳು, ರೈತರ ವ್ಯವಸಾಯಕ್ಕೆ ಬೇಕಾದ ಹಗ್ಗ, ಮೂಗು ದಾರ, ಗುದ್ದಲಿ, ಕೊಡಲಿಯಂತಹ ಸಾಮಗ್ರಿಗಳು ಕಡಿಮೆ ಬೆಲೆಯಲ್ಲಿ ಲಭ್ಯವಾಗಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಂತೆಯಲ್ಲಿ ಖರೀದಿಸುವ ಮೂಲಕ ರೈತರನ್ನು ಪ್ರೋತ್ಸಾಹಿಸಬೇಕು ಎಂದರು.

ಕಮ್ಮಾರ ಮತ್ತು ಗೆಜ್ಜಗಾರ ಸಂಘದ ರಾಜ್ಯಾಧ್ಯಕ್ಷ ರಂಗಸ್ವಾಮಿ ಮಾತನಾಡಿ, ಕಮ್ಮಾರ ಮತ್ತು ಗೆಜ್ಜೆಗಾರ ಸಮುದಾಯದವರಿಗೆ ತಮ್ಮ ವೃತ್ತಿಗೆ ಬೇಕಾದ ಮೂಲ ಸಾಮಗ್ರಿಗಳನ್ನು ಖರೀದಿಸಲು ಸರ್ಕಾರದಿಂದ ಅನುದಾನ ನೀಡಿ ಪ್ರೋತ್ಸಾಹ ನೀಡಬೇಕು ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್, ಮಾಜಿ ಶಾಸಕ ಕೇಶವಮೂರ್ತಿ, ತಹಸೀಲ್ದಾರ್ ಸ್ಮಿತಾ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ದಸಂಸ ಸಂಚಾಲಕ ನಾರಾಯಣ, ಸುರೇಶ್, ಮುಖಂಡರಾದ ಕೆಂಡಗಣ್ಣಪ್ಪ, ವಿಜಯ್ ಕುಮಾರ್, ಗೋವಿಂದರಾಜು, ಸುರೇಶ್ ಎನ್.ಎಂ.ಮಂಜುನಾಥ್, ಎಪಿಎಂಸಿ ಉಪ ನಿರ್ದೇಶಕಿ ಸಂಗೀತ, ಎಪಿಎಂಸಿ ಕಾರ್ಯದರ್ಶಿ ಸೋಮಣ್ಣ ಸೇರಿದಂತೆ ಹಲವರಿದ್ದರು.

ಘನ ತ್ಯಾಜ್ಯ ನಿರ್ವಹಣೆಯಲ್ಲಿ ಐಟಿಸಿ ಪಾತ್ರ ಮುಖ್ಯ

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ (ಅಭಿವೃದ್ಧಿ) ಭೀಮಪ್ಪ ಕೆ.ಲಾಳಿ



ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಹಿಳೆಯರಿಗೆ ಬಹುಮಾನ ವಿತರಿಸಲಾಯಿತು.

ಹುಣಸೂರು, ಮಾ.27– ಘನ ಮತ್ತು ದ್ರವ ತ್ಯಾಜ್ಯವನ್ನು ಉತ್ತಮವಾಗಿ ನಿರ್ವಹಣೆ ಮಾಡಿರುವ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕುಗಳು ಮಾದರಿಯಾಗಲು ಐಇಸಿ ಚಟುವಟಿಕೆಗಳನ್ನು ನೀಡಿರುವ ಐಟಿಸಿ ಅವರ ಪಾತ್ರ ಮುಖ್ಯವಾಗಿದೆ ಎಂದು ಜಿಪಂ ಉಪ ಕಾರ್ಯದರ್ಶಿ (ಅಭಿವೃದ್ಧಿ) ಭೀಮಪ್ಪ ಕೆ.ಲಾಳಿ ಅಭಿಪ್ರಾಯಪಟ್ಟರು.

ಅಂಬೇಡ್ಕರ್ ಭವನದಲ್ಲಿ ಜಿಪಂ ಮೈಸೂರು, ಹುಣಸೂರು, ಪಿರಿಯಾಪಟ್ಟಣ ತಾಪಂ, ಐಟಿಸಿ ಮತ್ತು ಅಂಗ ಸಂಸ್ಥೆಗಳಾದ ಔಟ್‌ರೀಚ್, ಮೈಕ್ಯಾಪ್ಸ್ ಸಹಯೋಗದಲ್ಲಿ ಆಯೋಜಿಸಿದ್ದ ಸ್ವಚ್ಛ ಭಾರತ್ ಅಭಿಯಾನದ 'ಸ್ವಚ್ಛ ಶಕ್ತಿ ಸಮ್ಮಾನ್' ಘನತ್ಯಾಜ್ಯ ನಿರ್ವಹಣೆ ಬಹುಮಾನ ವಿತರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಹಸಿ ಮತ್ತು ಒಣ ಕಸ ಬೇರ್ಪಡಿಸುವಿಕೆಯಲ್ಲಿ ಸಂಜೀವಿನಿ ಒಕ್ಕೂಟದ ಮಹಿಳೆಯರು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಿನ ಮಹಿಳೆಯರು ಪಾಲ್ಗೊಳ್ಳುತ್ತಾರೆ ಎಂದರು.

ಐಟಿಸಿ ಎಂಎಸ್‌ಕೆ ಕಾರ್ಯಕ್ರಮ ಅಧಿಕಾರಿ ಮನೋಜ್.ಎಂ. ಮಾತನಾಡಿ, ಕಸವನ್ನು ಎಲ್ಲೆಂದರಲ್ಲಿ ಬಿಸಾಕುವ ಮನಸ್ಥಿತಿ ಬದಲಾಗಬೇಕು. ಸ್ವಚ್ಛಗೊಳಿಸುವುದು ಪ್ರತಿಯೊಬ್ಬರ ಕರ್ತವ್ಯ. ಹೀಗಾಗಿ ಕೆಲವೇ ಕೆಲವು ಸೀಮಿತ ಜನರಿಗೆ ನಿಗದಿಪಡಿಸಬಾರದು. ಪ್ರಸ್ತುತ ಕಸದಿಂದ ರಸ ತೆಗೆಯುವ ಪರಿಕಲ್ಪನೆಯಡಿ ಕಸವನ್ನೇ ಸಂಪನ್ಮೂಲವನ್ನಾಗಿ ಮಾರ್ಪಾಡು ಮಾಡಿಕೊಳ್ಳಲಾಗುತ್ತಿದೆ ಎಂದರು.

ತಾಪಂ ಇಓ ಹೊಂಗಯ್ಯ ಮಾತನಾಡಿ, ತ್ಯಾಜ್ಯ ನಿರ್ವಹಣೆ ಗೌರವಯುತ ಕೆಲಸವಾಗಿದ್ದು, ಅದನ್ನು ಶ್ರದ್ಧೆಯಿಂದ ನಿರ್ವಹಿಸಬೇಕು. ಆಧುನಿಕತೆ ಮತ್ತು ತಂತ್ರಜ್ಞಾನ ಬಳಕೆಯಿಂದ ಸಾಮಾಜಿಕ ಬದಲಾವಣೆಗೆ ಕಾರ್ಯ ನಿರ್ವಹಿಸಬೇಕಿದೆ. ಹಾಗಾಗಿ ಉತ್ಸಾಹದಿಂದ ಕಾರ್ಯ ನಿರ್ವಹಿಸಿ ಎಂದು ಪ್ರೇರೇಪಿಸಿದರು.

ಸ್ವಚ್ಛ ಭಾರತ್ ಅಭಿಯಾನದಡಿ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಪ್ರಥಮ ಕೀರುನಲ್ಲಿ, ದ್ವಿತೀಯ ಬನ್ನಿಕುಪ್ಪೆ, ಕರೀಮುದ್ದನಹಳ್ಳಿ ಗ್ರಾಪಂಗಳು ತೃತೀಯ ಬಹುಮಾನ ಪಡೆದುಕೊಂಡಿವೆ. ತಾಲೂಕಿನ ಹಳೇಬೀಡು, ತಟ್ಟೆಕೆರೆ, ಮೋದೂರು, ಉದ್ದೂರು, ಆಸ್ಪತ್ರೆ ಕಾವಲ್, ಮನುಗನಹಳ್ಳಿ, ಹಿರಿಕ್ಯಾತನಹಳ್ಳಿ, ಧರ್ಮಾಪುರ, ಪಿರಿಯಾಪಟ್ಟಣ, ಚಿಟ್ಟೇನಹಳ್ಳಿ, ಬೈಲಕುಪ್ಪೆ, ಹರದೂರ, ಬೂವನಹಳ್ಳಿ, ಅಡಿತವಳ್ಳಿ ಪಂಚಾಯಿತಿಗಳಿಗೆ ಸ್ವಚ್ಛತೆಗೆ ಬಳಸುವ ಪರಿಕರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ದಿನಾಚರಣೆಯಂದು ಆಯೋಜಿಸಿದ್ದ ಸ್ಪರ್ಧೆಗಳಲ್ಲಿ ವಿಜೇತರಾದ ಮಹಿಳೆಯರಿಗೆ ಬಹುಮಾನ ವಿತರಿಸಲಾಯಿತು. ಮೈಕ್ಯಾಪ್ ಸಂಸ್ಥೆ ಕಾರ್ಯ ನಿರ್ವಾಹಕ ನಿರ್ದೇಶಕ ಅಶ್ರಫುಲ್ ಹಸನ್ ಮಾತನಾಡಿದರು. ಐಟಿಸಿ ವಿಭಾಗದ ಪುಣ್ಯ, ಹರಿಣಿ, ಸ್ವಚ್ಛ ಭಾರತ್ ಮಿಷನ್ ಯೋಜನಾ ಜಿಲ್ಲಾ ಸಮಾಲೋಚಕರಾದ ಸವಿತ, ಪ್ರದೀಪ್, ತಾಲೂಕು ಎನ್‌ಎಲ್‌ಆರ್‌ಎಂ ವ್ಯವಸ್ಥಾಪಕಿ ಮಂಜುಳ ನರಗುಂದ, ತಾಲೂಕು ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಯಶೋಧಮ್ಮ, ಪಿಡಿಓಗಳು, ಸಂಜೀವಿನಿ ಸಂಘದ ಸದಸ್ಯರು ಸೇರಿದಂತೆ ಔಟ್‌ರೀಚ್ ಮತ್ತು ಮೈಕ್ಯಾಪ್ಸ್ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ದಾಖಲೆ ಮೊತ್ತಕ್ಕೆ ಹರಾಜಾದ ನೆಲಬಾಡಿಗೆ ಸುಂಕ ವಸೂಲಿ



ಹರಾಜು ಪ್ರಕ್ರಿಯೆಯನ್ನು ಮುಖ್ಯಾಧಿಕಾರಿ ಶ್ರೀನಿವಾಸ್ ನಡೆಸಿಕೊಟ್ಟರು.

ತಿ.ನರಸೀಪುರ, ಮಾ.27– ಪಟ್ಟಣದ ಪುರಸಭೆಯಲ್ಲಿ ಶುಕ್ರವಾರ 2026–27ನೇ ಸಾಲಿನ ನೆಲಬಾಡಿಗೆ ಸುಂಕ ವಸೂಲಾತಿ ಹಕ್ಕು 11.25 ಲಕ್ಷ ರೂ.ಗಳ ದಾಖಲೆ ಮೊತ್ತಕ್ಕೆ ಹರಾಜಾಯಿತು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಮುಖ್ಯಾಧಿಕಾರಿ ಶ್ರೀನಿವಾಸ್ ಸೇರಿದಂತೆ ಕಚೇರಿ ಸಿಬ್ಬಂದಿ ಸಮ್ಮುಖದಲ್ಲಿ ನಡೆದ ಹರಾಜಿನಲ್ಲಿ ಭಾಗವಹಿಸಲು ಲಕ್ಷ ರೂ. ಡೆಪಾಸಿಟ್ ಪಾವತಿಸಿ ರಮೇಶ್, ಮಹೇಶ್ ಹಾಗೂ ಮೊಟ್ಟೆ ಮಹೇಶ್ ಬಿಡ್ ಕೂಗುವ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು.

ಕಳೆದ ಸಾಲಿನಲ್ಲಿ 8.03 ಲಕ್ಷಕ್ಕೆ ಹಾಜರಾಗಿದ್ದ ನೆಲ ಸುಂಕ ವಸೂಲಿ ಈ ಬಾರಿ 11.25 ಲಕ್ಷ ರೂ.ಗಳಿಗೆ ಹರಾಜಾಗುವ ಮೂಲಕ ಪುರಸಭೆಯ ಆದಾಯ ಹೆಚ್ಚಳಕ್ಕೆ ಸಹಕಾರಿಯಾಯಿತು.

ಸರ್ಕಾರಿ ಬಿಡ್ 8.03 ಲಕ್ಷ ರೂ.ಗಳಿಂದ ಹರಾಜು ಕೂಗಲಾಯಿತು. ಮೂವರು ಬಿಡ್‌ದಾರರು ಬಿಡ್ ಕೂಗುತ್ತಾ ಹರಾಜು ಮೊತ್ತವನ್ನು ಹೆಚ್ಚಿಸುತ್ತಾ ಹೋದರು. ಅಂತಿಮವಾಗಿ ರಮೇಶ್ ಹಾಗೂ ಮೊಟ್ಟೆ ಮಹೇಶ್ ನಡುವೆ ತೀವ್ರ ಸ್ಪರ್ಧೆ ಏರ್ಪಟ್ಟು ಅಂತಿಮವಾಗಿ 11.25 ಲಕ್ಷ ರೂ. ಬಿಡ್ ಕೂಗಿದ ರಮೇಶ್ ಹರಾಜಿನ ಹಕ್ಕು ಪಡೆದರು.

ಮುಖ್ಯಾಧಿಕಾರಿ ಶ್ರೀನಿವಾಸ್ ಮಾತನಾಡಿ, ಪಾನಿಪುರಿ, ಗೋಬಿ, ಫ್ರೈಡ್ ರೈಸ್, ಚುರುಮುರಿ, ಚಾಟ್ಸ್, ಕಬಾಬ್ ಗಾಡಿ ಒಂದಕ್ಕೆ 50 ರೂ. ಮಾತ್ರ ವಸೂಲಿ ಮಾಡಬೇಕು. ನೆಲ ಬಾಡಿಗೆಯನ್ನು ನಿಗದಿಪಡಿಸಿದ ಶುಲ್ಕದ ದರಕ್ಕಿಂತ ಹೆಚ್ಚು ವಸೂಲಿ ಮಾಡಿ ಪೊಲೀಸ್ ಠಾಣೆ ಅಥವಾ ಪುರಸಭೆಯಲ್ಲಿ ದೂರು ದಾಖಲಾದರೇ ತಮ್ಮ ಬಿಡ್ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ನಿಮಗೆ ಯಾವುದೇ ಸೂಚನೆ ನೀಡದೆ ಮರು ಹರಾಜು ಮಾಡಲಾಗುವುದು ಎಂದು ಎಚ್ಚರಿಸಿದರು.

ಕಂದಾಯ ಅಧಿಕಾರಿ ತ್ರಿವೇಣಿ, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಲೆಕ್ಕಾಧಿಕಾರಿ ವಿನಯ್ ಕುಮಾರ್, ಜಯಲಕ್ಷ್ಮಿ, ಪುರಸಭೆ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಮಾಜಿ ಸದಸ್ಯ ಬಾದಾಮಿ ಮಂಜು, ಎಲ್.ಮಂಜುನಾಥ್, ಎನ್.ಲೋಕೇಶ್, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ, ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ಪುರಿ ನಟೇಶ್, ಆಲಗೂಡು ರಾಜು, ಗೋಪಿ ಹಾಜರಿದ್ದರು.

ಮಲ್ಲಿಕಾರ್ಜುನಯ್ಯ ನಿಧನ



ತಿ.ನರಸೀಪುರ, ಮಾ.27– ತಾಲೂಕಿನ ಸೋಸಲೆ ಗ್ರಾಮದ ನಿವಾಸಿ, ಶಿಕ್ಷಣ ಇಲಾಖೆ ನಿವೃತ್ತ ನೌಕರ ಮಲ್ಲಿಕಾರ್ಜುನಯ್ಯ(65) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರ ಪತ್ರಕರ್ತ ಅನಿಲ್ ರಾಜ್, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಾಗೈಡ್ ವೆಂಕಟೇಶ್ ಅವರ ಹುಟ್ಟುಹಬ್ಬ ಆಚರಣೆ



ಹಿರಿಯ ವಕೀಲರು ಹಾಗೂ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರಾದ ಎಚ್.ಎನ್. ವೆಂಕಟೇಶ್ ಅವರ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಮೈಸೂರಿನ ಚಾಮರಾಜಪುರಂನಲ್ಲಿರುವ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಶುಕ್ರವಾರ ವಕೀಲರು ಸೇರಿದಂತೆ ಅಭಿಮಾನಿಗಳು ಎಚ್ ಎನ್ ವೆಂಕಟೇಶ್ ಅವರಿಗೆ ಭಾರೀ ಹಾರ ಹಾಕಿ, ಮೈಸೂರು ಪೇಟ ತೊಡಿಸಿ ಶುಭಾಶಯ ಕೋರಿದರು. ಈ ವೇಳೆ ಮೈಸೂರು ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಚಂದ್ರಶೇಖರ್, ಮಾರ್ಬಳ್ಳಿ ಗಿರೀಶ್, ಬಿಪಿ ರಾಜೇಶ್, ಸಿಎಸ್ ಲೋಕೇಶ್, ಜೈ ಶಂಕರ್, ಕುಮಾರ್, ಆದರ್ಶ್, ಮಂಜು, ಶಿವಚಂದ್ರ, ನಂದನ್, ಸಿದ್ದೇಶ್, ರಾಜೇಶ್, ಸುನಿಲ್, ವಿನೋದ, ಪ್ರದೀಪ್, ಮಹದೇವಸ್ವಾಮಿ, ಸಿದ್ದರಾಜು, ರಮೇಶ್, ಮಹಾಲಿಂಗಪ್ಪ, ಹರೀಶ್, ಸಿದ್ದಾರ್ಥ ಇನ್ನಿತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಬೇಕೋ... ಸಾಲ ಹೊರಿಸಿದ ಸಿದ್ದರಾಮಯ್ಯ ಬೇಕೋ...



ನಿಖಿಲ್ ಕುಮಾರಸ್ವಾಮಿಯವರಿಗೆ ಅಭಿಮಾನಿಗಳು ಕಾರ್ಯಕರ್ತರು, ಮುಖಂಡರುಗಳು ಕೊಬ್ಬರಿ ಬೆಲ್ಲದಿಂದ ತಯಾರಿಸಿದ ಬೃಹತ್ ಆಕಾರದ ಹಾರವನ್ನ ಹಾಕಿ ಸ್ವಾಗತಿಸಿದರು.

ಶಾಸಕರಿಂದ ಅಭಿವೃದ್ಧಿ ಶೂನ್ಯ: ಈ ಹಿಂದೆ ಜೆಡಿಎಸ್‌ನಿಂದ ಶಾಸಕರಾಗಿದ್ದ ದಿ.ಚಿಕ್ಕಮಾದು ಅವರ ಅಧಿಕಾರಾವಧಿಯಲ್ಲಿ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ನಡೆದಿತ್ತು ಆದರೆ ಬಳಿಕ ಕಾಂಗ್ರೆಸ್ ಪಕ್ಷದಿಂದ ಗೆದ್ದು ಶಾಸಕರಾಗಿರುವ ಅನಿಲ್ ಚಿಕ್ಕಮಾದು ಅವರ ಅಧಿಕಾರ ವಧಿಯಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಹೀಗಾಗಿ ಮುಂಬರುವ ಚುನಾವಣೆ ಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಯಾಗುವ ಕೆ.ಎಂ.ಕೃಷ್ಣನಾಯಕ ಅವರನ್ನು ಗೆಲ್ಲಿಸುವ ಮೂಲಕ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ತೊಡೆದು ಹಾಕಲು ತಾಲೂಕಿನ ಜನತೆ ಮುಂದಾಗಬೇಕು ಎಂದು ಮನವಿ ಮಾಡಿದರು.

ವೈಯುಕ್ತಿಕ ಪರಿಹಾರ: ತಾಲೂಕಿನಲ್ಲಿ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಿದ್ದು, ಹುಲಿ ದಾಳಿಯಿಂದ ಸಂಕಷ್ಟಕ್ಕೆ ಒಳಗಾದವರಿಗೆ ಕೃಷ್ಣನಾಯಕ ಅವರು ವೈಯಕ್ತಿಕ ಪರಿಹಾರ ನೀಡುವ ಮೂಲಕ ಅವರ ನೆರವಿಗೆ ಮುಂದಾಗಿರುವುದು ಸಂತೋಷದ ವಿಚಾರ ಎಂದರು.

ಜೆಡಿಎಸ್ ಸಂಘಟನೆಯಲ್ಲಿ ತೊಡಗಿರುವೆ: ತಾಲೂಕು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ಕೈತಪ್ಪಿತ್ತು. ಆಗ ಬಿಜೆಪಿಯಿಂದ ಸ್ಪರ್ಧಿಸಿದ್ದ ನಾನು ಕ್ಷೇತ್ರದ ಜನತೆಯ ಆಶೀರ್ವಾದದಿಂದ 2ನೇ ಸ್ಥಾನ ಪಡೆದಿದ್ದೆ. ಮರಳಿ ಜೆಡಿಎಸ್ ಪಕ್ಷಕ್ಕೆ ಆಗಮಿಸಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದೇನೆ. ಮುಂದಿನ ಚುನಾವಣೆಯಲ್ಲಿ ನನಗೆ ಕ್ಷೇತ್ರದ ಟಿಕೆಟ್ ಸಿಗುವ ವಿಶ್ವಾಸವಿದ್ದು, ಭಾರೀ ಮತಗಳ ಅಂತರದಲ್ಲಿ ಜಯಗಳಿಸಲಿದ್ದೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮತ್ತೇ ಅಪ್ಪಾಜಿ ಕ್ಯಾಂಟೀನ್ ಆರಂಭ: ಮುಂದಿನ ದಿನಗಳಲ್ಲಿ ತಾಲೂಕನ್ನು ಹಸಿವು ಮುಕ್ತ ಮಾಡಲು ಪತ್ತೆ ಅಪ್ಪಾಜಿ ಕ್ಯಾಂಟೀನ್ ತೆರೆಯಲಾಗುವುದು ಎಂದು ತಿಳಿಸಿದ ಅವರು, ಕೋವಿಡ್ ವೇಳೆ 25 ಸಾವಿರ ಆಹಾರದ ಕಿಟ್, 3 ಸಾವಿರ ಮೆಡಿಸಿನ್ ಕಿಟ್ ವಿತರಿಸಲಾಗಿತ್ತು ಎಂದರು.

ಭ್ರಷ್ಟಾಚಾರ ಹೆಚ್ಚಳ: ಕಳೆದ 10 ವರ್ಷಗಳಲ್ಲಿ ತಾಲೂಕಿನಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಒಂದು ಎಕರೆ ಜಮೀನು ದುರಸ್ತಿಗೆ 2 ಲಕ್ಷ ಲಂಚ ಪಡೆಯಲಾಗುತ್ತಿದೆ. ಅಲ್ಲದೇ ರಾಜ್ಯದ ಎಲ್ಲಾ ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ಅಡಿ ಹಣ ನೀಡಲಾಗುತ್ತಿದೆ. ಆದರೆ ಅದನ್ನು ಸಹ ಸಮರ್ಪಕವಾಗಿ ವಿತರಿಸದೇ ಪರಿತಪಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ವಾಲ್ಮೀಕಿ ನಿಗಮದ ಸುಮಾರು 97 ಕೋಟಿ ಹಣ ಲೂಟಿ ಮಾಡಿ ಅನ್ಯಾಯ ಮಾಡಿದೆ. ತಾಲೂಕಿನಲ್ಲಿ ಡ್ರಗ್ಸ್ ಹಾವಳಿ ಹೆಚ್ಚಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಅವರೇ ಸಭೆಯೊಂದರಲ್ಲಿ ತಿಳಿಸಿದ್ದಾರೆ. ಇದು ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ ಹಿಡಿದ ಕೈಗನ್ನಡಿ ಎಂದು ಆರೋಪಿಸಿದರು.

ಶಾಸಕ ಜಿ.ಡಿ. ಹರೀಶ್‌ಗೌಡ ಮಾತನಾಡಿ, ರಾಮನವಮಿಯಂದು ಹೆಚ್.ಡಿ.ಕೋಟೆಯಲ್ಲಿ ಕೃಷ್ಣ ಅವತಾರ ತಾಳಿದ್ದು, ಜನರಿಗಾಗಿ ರಾಮನಂತೆ ಆಡಳಿತ, ಕೃಷ್ಣನಂತೆ ಚಾಕಚಕ್ಯತೆಯಿಂದ ಮುಂದಿನ ದಿನಗಳಲ್ಲಿ ಅವರು ಆಡಳಿತ ನಡೆಸುವಂತಾಗಬೇಕು ಎಂದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ತೊರೆದು ನೂರಾರು ಮಂದಿ ಜೆಡಿಎಸ್ ಪಕ್ಷ ಸೇರ್ಪಡೆಗೊಂಡರು.

ಅದ್ಧೂರಿ ಸ್ವಾಗತ: ಕಾರ್ಯಕ್ರಮಕ್ಕೂ ಮುನ್ನ ಪಟ್ಟಣಕ್ಕೆ ಆಗಮಿಸಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರಿಗೆ ಹ್ಯಾಂಡ್ ಪೋಸ್ಟ್ ಸರ್ಕಲ್‌ನಲ್ಲಿ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಕೊಬ್ಬರಿ–ಬೆಲ್ಲದ ಬೃಹತ್ ಹಾರ ಹಾಕಿ ಅದ್ಧೂರಿಯಾಗಿ ಸ್ವಾಗತಿಸಿದರು.

ಬಳಿಕ ಪಟ್ಟಣದ ಬಿಜಿಎಸ್ ಸಭಾ ಭವನ ಮುಂಭಾಗದಿಂದ ತೆರೆದ ವಾಹನದಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ, ಮಹಿಳೆಯರು ಪೂರ್ಣಕುಂಭ ಕಳಸಗಳನ್ನು ಹೊತ್ತು ಸಾವಿರಾರು ಅಭಿಮಾನಿಗಳು ಮೆರವಣಿಗೆ ಮೂಲಕ ವೇದಿಕೆಗೆ ಕರೆತಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಮಹದೇವ್, ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಶ್ಯಾಂ ಸುಂದರ್, ಕೋಟೆ, ಸರಗೂರು, ಜೆಡಿಎಸ್ ಅಧ್ಯಕ್ಷರಾದ ಜಿ.ಗೋಪಾಲಸ್ವಾಮಿ, ರಾಜೇಂದ್ರ, ಮುಖಂಡರಾದ ನರಸಿಂಹೇಗೌಡ, ಶಿವಕುಮಾರ್, ಹರೀಶ್‌ಗೌಡ, ಯತೀಶ್, ಯೋಗನರಸಿಂಹೇಗೌಡ, ಶಾಂತಕುಮಾರ್, ಯಶವಂತ್, ರವಿಕುಮಾರ್, ಪ್ರಸನ್ನ, ಹರೀಶ್‌ಗೌಡ, ಸೋಮಣ್ಣ, ನಾಗೇಗೌಡ, ಸಿದ್ದೇಗೌಡ, ಗಾಯಿತ್ರಿ, ಸತೀಶ್, ಡಿ.ಆರ್.ಮಹೇಶ್, ಎಂ.ಪಿ. ಶಂಕರ್, ಪ್ರಶಾಂತ, ಪ್ರಸನ್ನ, ರಾಜೇಶ್, ವೆಂಕಟೇಶ್, ಶಶಿಧರ್‌ಗೌಡ, ಮಹೇಶ್, ಶಿವಯ್ಯ, ಉದಯ ಕುಮಾರ್, ಶಾಂತರಾಜು, ಓ.ಕೆ.ಮಹೇಂದ್ರ ಶಿವಲಿಂಗೇಗೌಡ, ನಾಗರಾಜು, ರಘು, ಕಾಳಪ್ಪಾಜಿ, ಭಾಸ್ಕರ್, ಶಿವು, ರಾಜು, ಶಿವಾಜಿ, ಡಿ.ನಾಗರಾಜು, ರಾಜು, ಸುರೇಶ್, ಕೇಶವ, ರವಿ, ತಮ್ಮಣ್ಣ ಇತರರಿದ್ದರು.



ನಿಖಿಲ್ ಕುಮಾರಸ್ವಾಮಿ ಅವರಿಗೆ ಅಭಿಮಾನಿಗಳು ಕುರಿ ನೀಡುವುದರ ಮೂಲಕ ಅಭಿನಂದಿಸಿದರು.

ಸುಂಕ ಶೂನ್ಯಕ್ಕೆ

ಗ್ರಾಹಕರಿಗೆ ಹೊರೆ ಹಾಕುವುದಿಲ್ಲ: ಜಗತ್ತಿನಲ್ಲಿ ಇಂತಹ ಸಂಕಷ್ಟಗಳು ಬಂದಾಗ ಮತ್ತು ಅದರ ಪರಿಣಾಮ ಭಾರತಕ್ಕೆ ತಟ್ಟಿದಾಗ ಹಾಗೂ ಕೋವಿಡ್ ಸಮಯದಲ್ಲೂ ಹೀಗೆಯೇ ಪ್ರಧಾನ ಮಂತ್ರಿಗಳು ತಕ್ಷಣ ಪ್ರತಿಕ್ರಿಯಿಸಿದ್ದಾರೆ. ಜನರ ಮೇಲೆ ಭಾರ ಬೀಳಬಾರದು, ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಕೊರತೆ ಎದುರಾಗಬಾರದು ಎಂಬುದು ಅವರ ಉದ್ದೇಶವಾಗಿದೆ. ಈಗ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗುತ್ತಿರುವುದರಿಂದ ಪೆಟ್ರೋಲ್, ಡೀಸೆಲ್ ಮತ್ತು ಎಟಿಎಫ್(ವಿಮಾನ ಇಂಧನ) ಬೆಲೆ ಹೆಚ್ಚಾಗುವ ಸಾಧ್ಯತೆ ಇದೆ. ಆದರೆ ಗ್ರಾಹಕರಿಗೆ ಬೆಲೆ ಏರಿಕೆಯಾಗದಂತೆ ನಾವು ತೈಲ ಮಾರುಕಟ್ಟೆ ಕಂಪನಿಗಳಿಗೆ ಬೆಂಬಲ ನೀಡಲು ನಿರ್ಧರಿಸಿದ್ದೇವೆ ಎಂದು ಹೇಳಿದರು.

ತುರ್ತು ಸಭೆಯಲ್ಲಿ ತಕ್ಷಣ ನಿರ್ಧಾರ: ರಾಮನವಮಿ ದಿನ ಪ್ರಧಾನಮಂತ್ರಿಗಳು ತುರ್ತು ಸಭೆ ಕರೆದು ಈ ವಿಷಯಗಳ ಬಗ್ಗೆ ಚರ್ಚಿಸಿದ ತಕ್ಷಣ ಈ ನಿರ್ಧಾರ ಕೈಗೊಂಡರು. ನಂತರ ನಮ್ಮ ಹಣಕಾಸು ಸಚಿವಾಲಯ ಮತ್ತು ಪೆಟ್ರೋಲಿಯಂ ಸಚಿವಾಲಯ ಒಟ್ಟಾಗಿ ಚರ್ಚಿಸಿ ಇಂದು ಈ ನಿರ್ಧಾರವನ್ನು ಘೋಷಿಸಿದ್ದೇವೆ. ಕಚ್ಚಾ ತೈಲದ ಬೆಲೆ ಏರಿಕೆಯಿಂದ ಸಮಸ್ಯೆ ಎದುರಿಸುತ್ತಿದ್ದ ತೈಲ ಮಾರುಕಟ್ಟೆ ಕಂಪನಿಗಳನ್ನು ರಕ್ಷಿಸುವುದೂ ಈ ಅಬಕಾರಿ ಸುಂಕ ಕಡಿತದ ಮತ್ತೊಂದು ಉದ್ದೇಶವಾಗಿದೆ. ಇದರಿಂದ ಇಂಧನ ಸರಬರಾಜಿನಲ್ಲಿ ಯಾವುದೇ ಕೊರತೆ ಉಂಟಾಗುವುದಿಲ್ಲ ಎಂದು ಭರವಸೆ ನೀಡಿದರು.

ವಿದೇಶದಲ್ಲಿ ಬೆಲೆ ಏರಿಕೆಯಾಗುತ್ತಿರುವುದರಿಂದ ಕಂಪನಿಗಳು ಖರೀದಿ ನಿಲ್ಲಿಸುವ ಪರಿಸ್ಥಿತಿ ಬರಬಾರದು. ಅವು ಖರೀದಿ ಮುಂದುವರಿಸಿ, ದೇಶಕ್ಕೆ ತಂದು, ಜನರಿಗೆ ಸರಿಯಾದ ಪ್ರಮಾಣದಲ್ಲಿ ಸಮಯಕ್ಕೆ ಸರಿಯಾಗಿ ಲಭ್ಯವಾಗುವಂತೆ ವ್ಯವಸ್ಥೆ ಮಾಡಬೇಕು. ಈ ನಿರ್ಧಾರದಿಂದ ಸರಬರಾಜಿನಲ್ಲಿ ಯಾವುದೇ ಕೊರತೆ ಇರುವುದಿಲ್ಲ ಎಂದು ಹೇಳಿದರು.

ವಿಮಾನ ಇಂಧನ ರಫ್ತಿಗೆ ಹೆಚ್ಚುವರಿ ಅಬಕಾರಿ ಸುಂಕ ವಿಧಿಸಿರುವುದರಿಂದ ಅದು ದೇಶೀಯ ಬಳಕೆಗೆ ಆದ್ಯತೆ ಸಿಗುತ್ತದೆ.

ತೃತೀಯ ಭಾಷೆಗಳು ನಗಣ್ಯ

ಯುಕೆಜಿಗೆ 4 ವರ್ಷ 10 ತಿಂಗಳು ವಯೋಮಿತಿ ನಿಗದಿಪಡಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಮುಂಬರುವ ಶೈಕ್ಷಣಿಕ ವರ್ಷದಿಂದಲೇ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತವಾಗಿ 'ನೈತಿಕ ಶಿಕ್ಷಣ' ಪುಸ್ತಕ ಒದಗಿಸಲಾಗುತ್ತದೆ. ಇದು ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ರೂಪಿಸುವುದು ಸರ್ಕಾರದ ಹೆಜ್ಜೆಯಾಗಿದೆ.

ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಭವಿಷ್ಯವನ್ನ ದೃಷ್ಟಿಯಲ್ಲಿಟ್ಟುಕೊಂಡು 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆ ನಿರ್ಬಂಧಿಸುವ ಮಹತ್ವದ ಪ್ರಸ್ತಾಪ ಸದನದಲ್ಲಿ ಚರ್ಚಿಸಲಾಗಿದ್ದು, ಎಲ್ಲರಿಂದಲೂ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಈ ಸಮಸ್ಯೆ ಕೇವಲ ಸರ್ಕಾರದ ಮಟ್ಟದಲ್ಲಿ ಬಗೆಹರಿಯುವುದಿಲ್ಲ, ಪೋಷಕರು ತಮ್ಮ ಮಕ್ಕಳ ಮೊಬೈಲ್ ಬಳಕೆ ಮೇಲೆ ಹೆಚ್ಚಿನ ಜವಾಬ್ದಾರಿ ವಹಿಸಬೇಕು. ಸರ್ಕಾರದ ಪ್ರಮುಖ ಉದ್ದೇಶ ಸರ್ಕಾರಿ ಶಾಲೆಗಳ ಸಬಲೀಕರಣ, ಪಾರದರ್ಶಕತೆ ಮತ್ತು ವಿದ್ಯಾರ್ಥಿಗಳನ್ನು ಪರೀಕ್ಷಾ ಒತ್ತಡದಿಂದ ಮುಕ್ತಗೊಳಿಸುವುದಾಗಿದೆ.

ಇದರ ಭಾಗವಾಗಿ ವಾರ್ಷಿಕ 3 ಪರೀಕ್ಷೆ ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಅಂಕ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಹೋಟೆಲ್‌ಗಳಿಂದ ಭಾರೀ ಡಿಮ್ಯಾಂಡ್

ಕೂಡ ಸೌದೆ ಒಲೆ ತರಿಸಿಕೊಂಡು ಮಾರಾಟ ಮಾಡುತ್ತಿದ್ದಾರೆ. ಸೌದೆ ಒಲೆಗೆ ಎಷ್ಟರ ಮಟ್ಟಿಗೆ ಡಿಮ್ಯಾಂಡ್ ಇದೆ ಎಂದರೆ, ಒಂದು ಲೋಡ್ ಒಲೆ ಬಂದರೆ ಗಂಟೆಯೊಳಗೆ ಸೇಲ್ ಆಗುತ್ತಿದೆ. ನಾಳೆ ಬಂದು ಖರೀದಿ ಮಾಡುತ್ತೇನೆ ಎಂಬ ಮಾತೆ ಇಲ್ಲ, ಲೋಡ್ ಬಂದಾಗ ಖರೀದಿ ಮಾಡಿದರೆ ಸಿಗುತ್ತೆ, ಇಲ್ಲವೆಂದರೆ ಬರಿಗೈಯ್ಯಲ್ಲಿ ಹೋಗಬೇಕಾದ ಪರಿಸ್ಥಿತಿ ಇದೆ ವಿವಿಧಗಾತ್ರಹಾಗೂ ಸಾಮರ್ಥ್ಯದ ಸೌದೆ ಒಲೆ ಇದ್ದು, ಒಂದೊಂದರ ಬೆಲೆ ನಿಗದಿ ಮಾಡಿದ್ದಾರೆ. 25 ಕೆ.ಜಿ.ಆಹಾರ ತಯಾರಿಸುವ ಸೌದೆ ಒಲೆಗೆ 24 ಸಾವಿರ ರೂ., 50 ಕೆ.ಜಿ.ಆಹಾರ ತಯಾರಿ ಸುವ ಒಲೆಗೆ 32 ಸಾವಿರ ರೂ. ಹಾಗೂ 75 ಕೆಜಿ. ಆಹಾರ ತಯಾರಿಸುವ ಸೌದೆ ಒಲೆ 45 ಸಾವಿರ ರೂ.ಗೆ ಮಾರಾಟ ಮಾಡಲಾಗುತ್ತಿದೆ.

ಮಧ್ಯಪ್ರಾಚ್ಯ ಯುದ್ಧಕ್ಕೂ ಮೊದಲು ಬೆಲೆಗೂ ಈಗಿನ ಬೆಲೆಗೂ ಅಜಗಜಾಂತರ ವ್ಯತ್ಯಾಸವಿದೆ. ಒಂದೊಂದು ಸೌದೆ ಒಲೆ ಬೆಲೆ ಈಗ ಕನಿಷ್ಟ 8 ರಿಂದ 10 ಸಾವಿರ ರೂ.ಗೆ ಏರಿಕೆಯಾಗಿದೆ. ಬೆಲೆ ಹೆಚ್ಚಾದರೂ ಹೋಟೆಲ್‌ನವರು ಸೌದೆ ಒಲೆ ಖರೀದಿಗೆ ಮುಗಿ ಬೀಳುತ್ತಿದ್ದಾರೆ. ಮಧ್ಯಪ್ರಾಚ್ಯದ ಯುದ್ಧ ಸದ್ಯಕ್ಕೆ ನಿಲ್ಲುವ ಯಾವ ಲಕ್ಷಣಗಳು ಕಾಣುತ್ತಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ರಾಜತಾಂತ್ರಿಕ ಸಂಧಾನದ ಫಲವಾಗಿ ಹಾರ್ಮುಜ್ ಜಲಸಂಧಿಯಿಂದ ಭಾರತದ ತೈಲ ಹಾಗೂ ಎಲ್ ಪಿಜಿ ಹಡಗುಗಳು ಭಾರತಕ್ಕೆ ಬರಲಾರಂಭಿಸಿದೆ. ಆದರೆ ದೇಶಕ್ಕೆ ಆಮದಾಗುತ್ತಿರುವ ತೈಲ ಹಾಗೂ ಎಲ್‌ಪಿಜಿ ಅವಶ್ಯಕ ಬೇಡಿಕೆಗೆ ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಸದ್ಯಕ್ಕೆ ವಾಣಿಜ್ಯ ಸಿಲಿಂಡರ್ ದೊರೆಯುವ ಭರವಸೆ ಇಲ್ಲ ಎಂದು ಅರಿತಿರುವ ಹೋಟೆಲ್‌ನವರು ಅನಿವಾರ್ಯವಾಗಿ ಸೌದೆ ಒಲೆ ಖರೀದಿ ಮಾಡುತ್ತಿದ್ದಾರೆ.

ಇಂದಿನಿಂದ ಐಪಿಎಲ್ ಧಮಾಕ

ತವರು ನೆಲದಲ್ಲೇ ಈ ಬಾರಿ ಐಪಿಎಲ್ 2026ರ ಉದ್ಘಾಟನಾ ಪಂದ್ಯ ನಡೆಯಲಿದ್ದರೂ, ಉದ್ಘಾಟನಾ ಸಮಾರಂಭವನ್ನು ನಡೆಸದಿರಲು ಬಿಸಿಸಿಐ ನಿರ್ಧರಿಸಿದೆ. ಕಳೆದ ವರ್ಷ (2025) ಆರ್‌ಸಿಬಿ ಚೊಚ್ಚಲ ಐಪಿಎಲ್ ಪ್ರಶಸ್ತಿ ಗೆದ್ದ ಸಂಭ್ರಮದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ವಿಜಯೋತ್ಸವದ ಮೆರವಣಿಗೆಯ ವೇಳೆ ಸಂಭವಿಸಿದ ಭೀಕರ ಕಾಲ್ತುಳಿತದಲ್ಲಿ 11 ಜನರು ಪ್ರಾಣ ಕಳೆದುಕೊಂಡಿದ್ದರು. ಈ ದುರಂತದಲ್ಲಿ ಮೃತಪಟ್ಟವರ ಗೌರವಾರ್ಥವಾಗಿ ಮತ್ತು ಸಂವೇದನಾಶೀಲತೆಯ ದೃಷ್ಟಿಯಿಂದ ಈ ಬಾರಿ ಉದ್ಘಾಟನಾ ಸಮಾರಂಭವನ್ನು ಆಯೋಜಿಸದಿರಲು ಬಿಸಿಸಿಐ ತೀರ್ಮಾನಿಸಿದೆ.

ಪೂರೈಕೆ ಶೇ.70ಕ್ಕೆ ಹೆಚ್ಚಳ

ಅಮೆರಿಕ ಹಾಗೂ ಇಸ್ರೇಲ್ ನಡೆಸುತ್ತಿರುವ ಯುದ್ಧದಿಂದಾಗಿ ಜಾಗತಿಕವಾಗಿ ಉಂಟಾಗಿರುವ ಪರಿಣಾಮವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ ಅವರು, ಕಚ್ಚಾ ತೈಲ, ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ಪೂರೈಕೆಗಳ ಮೇಲೆ ಪರಿಣಾಮ ಬೀರಿದೆ ಮತ್ತು ಅಂತರರಾಷ್ಟ್ರೀಯ ಬೆಲೆಗಳು ಏರಿದೆ. ಆದಾಗ್ಯೂ, ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ದೇಶೀಯ ಪೂರೈಕೆಯಲ್ಲಿ ಸ್ಥಿರತೆ ಖಾತ್ರಿಗೆ ಸರ್ಕಾರ ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಹೇಳಿದರು. ಪ್ರಸ್ತುತ ನಾವು ಯುದ್ಧದಂತಹ ಪರಿಸ್ಥಿತಿಯಲ್ಲಿದ್ದು, ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಕಚ್ಚಾ ತೈಲ, ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ಎಲ್ಲ ಅನಿಲಗಳ ಪೂರೈಕೆ ಮೇಲೆ ಪರಿಣಾಮ ಬೀರಿದೆ. ಕಚ್ಚಾ ಬೆಲೆಗಳು ಹೆಚ್ಚಿವೆ ಮತ್ತು ಇತರ ಉತ್ಪನ್ನಗಳ ಬೆಲೆಗಳು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಏರಿಕೆಯಾಗಿವೆ. ಆದಾಗ್ಯೂ, ಭಾರತ ಸರ್ಕಾರವು ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ. ಇಂದಿನಿಂದ, ನಾವು ಸಾಕಷ್ಟು ಕಚ್ಚಾ ದಾಸ್ತಾನುಗಳನ್ನು ಹೊಂದಿದ್ದೇವೆ. ಮುಂದಿನ ಎರಡು ತಿಂಗಳುಗಳಿಗೆ ಆಗುವಷ್ಟು ಇಂಧನ ಪೂರೈಕೆಯಿದೆ ಎಂದು ತಿಳಿಸಿದರು.

ಎಲ್‌ಪಿಜಿ ಮತ್ತು ಎಲ್‌ಎನ್‌ಜಿಗೆ ಸಂಬಂಧಿಸಿದಂತೆ ಪರಿಸ್ಥಿತಿಯು ಉತ್ತಮವಾಗಿದೆ. ನಮ್ಮ ಸಂಸ್ಕರಣಾಗಾರಗಳು ಶೇ.100 ಅಥವಾ ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ದೇಶೀಯ ಎಲ್‌ಪಿಜಿ ಉತ್ಪಾದನೆಯು ಶೇ.20 ರಷ್ಟು ಹೆಚ್ಚಾಗಿದೆ ಎಂದು ಸುಜಾತಾ ಶರ್ಮಾ ಹೇಳಿದರು. ಭಾರತ ಶೇ. 90 ರಷ್ಟು ಎಲ್‌ಪಿಜಿಯನ್ನು ಹಾರ್ಮುಜ್ ಜಲಸಂಧಿಯ ಮೂಲಕ ಆಮದು ಮಾಡಿಕೊಳ್ಳುತ್ತದೆ ವಾಣಿಜ್ಯ ಎಲ್‌ಪಿಜಿ ಪೂರೈಕೆಯನ್ನು ತಾತ್ಕಾಲಿಕವಾಗಿ ಮೊಟಕುಗೊಳಿಸಲಾಗಿತ್ತು. ಈಗ ಶೇ. 20 ರಿಂದ 70ಕ್ಕೆ ಹೆಚ್ಚಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ಮಿತ್ರ · ಶನಿವಾರ 28 ಮಾರ್ಚ್ 2026

ವಿಶಿಷ್ಟ ರೀತಿಯಲ್ಲಿ ನಿರ್ಮಾಣವಾಗಲಿದೆ ಮೈಸೂರಿನ ಅಗ್ರಹಾರ ವೃತ್ತ

ಶಾಸಕ ಟಿ.ಎಸ್.ಶ್ರೀವತ್ಸ ಪ್ರಯತ್ನದಿಂದ ಎಂಡಿಎ ವಿಶೇಷ ಅನುದಾನ


ಮೈಸೂರು, ಮಾ.27(ಜಿಎ)–ಮೈಸೂರು ಅಗ್ರಹಾರ ವೃತ್ತ (ಮಾಧವರಾವ್ ವೃತ್ತ) 50 ಲಕ್ಷ ರೂ. ವೆಚ್ಚದಲ್ಲಿ ನೂತನ ರೀತಿಯಲ್ಲಿ ನಿರ್ಮಾಣಗೊಳ್ಳಲಿದೆ.

ಅಗ್ರಹಾರ ವೃತ್ತ (ಮಾಧವರಾವ್ ವೃತ್ತ)ವು ಸೂಕ್ತ ನಿರ್ವಹಣೆ ಇಲ್ಲದೇ ಶಿಥಿಲಗೊಂಡಿದ್ದು, ಅದಕ್ಕೆ ಮರುಜೀವ ನೀಡುವ ಉದ್ದೇಶದಿಂದ ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿಶೇಷ ಅನುದಾನ ಪಡೆದು ವೃತ್ತಕ್ಕೆ ಹೊಸ ರೂಪ ನೀಡಲು ಶಾಸಕ ಟಿ.ಎಸ್.ಶ್ರೀವತ್ಸ ಮುಂದಾಗಿದ್ದಾರೆ. ಇದಕ್ಕಾಗಿ ಶಾಸಕರು ನಿರಂತರ ಪ್ರಯತ್ನ ಪಟ್ಟಿದ್ದಾರೆ.

ಮೈಸೂರು ಸಾಂಸ್ಕೃತಿಕ ರಾಜಧಾನಿ ಎಂದು ಕರೆಯಲ್ಪಡುವುದರ ಹೊರತಾಗಿಯೂ, ಪ್ರಮುಖ ವೃತ್ತಗಳು, ಬೀದಿಗಳು ಮತ್ತು ಇತರ ಸಾರ್ವಜನಿಕ ಕಟ್ಟಡಗಳ ನಿರ್ವಹಣೆಯ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿರುವುದರಿಂದ, ನಗರದ ಹೃದಯ ಭಾಗದಲ್ಲಿರುವ ಶತಮಾನದಷ್ಟು ಹಳೆಯದಾದ ಅಗ್ರಹಾರ ವೃತ್ತ (ಮಾಧವರಾವ್ ವೃತ್ತ) ಶಿಥಿಲಗೊಂಡಿತ್ತು.

ಮಾಧವರಾವ್ ವೃತ್ತವು ನಗರದ ಪ್ರಮುಖ ವೃತ್ತಗಳಲ್ಲಿ ಒಂದಾಗಿದೆ ಮತ್ತು ಹೆಚ್ಚಿನ ವಾಹನ ಸಾಂದ್ರತೆಯನ್ನು ಹೊಂದಿದೆ. ಪ್ರತಿದಿನ ಸಾವಿರಾರು ವಾಹನಗಳು ವೃತ್ತದ ಮೂಲಕವೇ ಹಾದು ಹೋಗುತ್ತವೆ. ವೃತ್ತದಿಂದ ಐದು ರಸ್ತೆಗಳು ದಾರಿ ಮಾಡಿಕೊಡುತ್ತದೆ.

ಈ ವೃತ್ತದಿಂದ ಎಂಜಿ ರಸ್ತೆ, ವಾಣಿವಿಲಾಸ ರಸ್ತೆ, ನ್ಯೂ ಸಯ್ಯಾಜಿ ರಾವ್ ರಸ್ತೆ, 101 ಗಣಪತಿ ದೇವಸ್ಥಾನ ರಸ್ತೆ ಮತ್ತು ತ್ಯಾಗರಾಜ ರಸ್ತೆ. ಈ ರಸ್ತೆಗಳು ನಗರದ ವಿವಿಧ ಪ್ರಮುಖ ಸ್ಥಳಗಳನ್ನು ಸಂಪರ್ಕಿಸುತ್ತವೆ. ಮೈಸೂರು ಮಹಾನಗರ ಪಾಲಿಕೆಯ ಮುಖ್ಯ ಕಚೇರಿಯ ಸಮೀಪದಲ್ಲೇ ವೃತ್ತವಿದ್ದರೂ, ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ವೃತ್ತವು ಶಿಥಿಲಾವಸ್ಥೆಗೆ ತಲುಪಿದೆ.



ನೂತನವಾಗಿ ನಿರ್ಮಾಣಗೊಳ್ಳಲಿರುವ ಮೈಸೂರಿನ ಅಗ್ರಹಾರ ವೃತ್ತ(ಮಾಧವರಾವ್ ವೃತ್ತ)ದ ನೀಲಿ ನಕ್ಷೆ

ಮೈಸೂರಿನಲ್ಲಿ ಕೆ.ಆರ್.ವೃತ್ತ, ಜಂಬು ಚಾಮರಾಜೇಂದ್ರ, ಫೌಂಟನ್ ವೃತ್ತ, ಆರ್‌ಟಿಓ ಮುಂಭಾಗ ವೃತ್ತಗಳು ವಿಭಿನ್ನ ಶೈಲಿಯಿಂದ ಎಲ್ಲರ ಗಮನ ಸೆಳೆಯುತ್ತವೆ. ಆದರೆ, ಅಗ್ರಹಾರ ವೃತ್ತ ದೈವಿಕ ಭಾವನೆಯನ್ನು ನೀಡುತ್ತದೆ. ಈ ವೃತ್ತ ಕೇವಲ ವೃತ್ತವಾಗಿಲ್ಲ. ನೀರಿನ ಕಾರಂಜಿ ಇದೆ. ಕಾರಂಜಿಯ ಮೇಲೆ ಶಿವನ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ವೃತ್ತದ ಹೊರ ಭಾಗವನ್ನು ಭಾರತೀಯ ಧ್ವಜದ ತ್ರಿವರ್ಣದಿಂದ ಚಿತ್ರಿಸಲಾಗಿದೆ. ಕಳಪೆ ನಿರ್ವಹಣೆ ಮತ್ತು ಅಧಿಕಾರಿಗಳ ಸಂಪೂರ್ಣ ನಿರ್ಲಕ್ಷ್ಯದಿಂದಾಗಿ ಈ ವಿಶಿಷ್ಟ ವೃತ್ತವು ಈಗ ಶಿಥಿಲಾವಸ್ಥೆಗೆ ತಲುಪಿದೆ. ವೃತ್ತದ ಪ್ರಮುಖ ಆಕರ್ಷಣೆಯಾಗಿರುವ ನೀರಿನ ಕಾರಂಜಿ ವರ್ಷಗಳಿಂದ ನಿಷ್ಪ್ರಯೋಜಕವಾಗಿದೆ. ಶಿವನ ಪ್ರತಿಮೆಯನ್ನು ಹೊಂದಿರುವ ವಿಶಿಷ್ಟ ವೃತ್ತವು ಕಣ್ಣಿಗೆ ಕಟ್ಟುವಂತೆ ಮಾಡುತ್ತಿರುವುದರಿಂದ ಸಾರ್ವಜನಿಕರು ಪಾಲಿಕೆ ಅಧಿಕಾರಿಗಳು ವೃತ್ತದ ನಿಯಮಿತ ನಿರ್ವಹಣೆಯನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು.

ಈ ಹಿಂದೆಯೂ ವೃತ್ತವನ್ನು ಅಭಿವೃದ್ಧಿ ಪಡಿಸುವಂತೆ ಸಾಕಷ್ಟು ಮನವಿ, ಪ್ರತಿಭಟನೆ ನಡೆದರೂ ಸಾಧ್ಯವಾಗಿರಲಿಲ್ಲ. ಆದರೆ, ಈಗ ಅದಕ್ಕೆ ಕಾಲಕೂಡಿ ಬಂದಿದ್ದು, ಶಾಸಕ ಟಿ.ಎಸ್.ಶ್ರೀವತ್ಸ ಮುತುವರ್ಜಿ ವಹಿಸಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಗ್ರಹಾರ ವೃತ್ತ ಅಭಿವೃದ್ಧಿ ಹಾಗೂ ವೃತ್ತದಲ್ಲಿರುವ ಕಂಠಿಮಲ್ಲಣ್ಣ ಬಸ್ ನಿಲ್ದಾಣವನ್ನು ಅಭಿವೃದ್ಧಿ ಪಡಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ 50 ಲಕ್ಷ ರೂ. ಅನುದಾನ ತಂದಿದ್ದು, ವೃತ್ತದ ನೀಲಿ ನಕ್ಷೆಯೂ ಸಿದ್ಧಗೊಂಡಿದೆ. ಮುಂದಿನ ಒಂದೆರಡು ತಿಂಗಳಿನಲ್ಲಿ ಕಾಮಗಾರಿ ಆರಂಭಗೊಳ್ಳಲಿದೆ.

ಪಾರಂಪರಿಕ ಶೈಲಿ

ಈಗ ಹೇಗೆ ಅಗ್ರಹಾರ ವೃತ್ತ ವಿಭಿನ್ನವಾಗಿ ಎಲ್ಲರನ್ನು ಆಕರ್ಷಿಸುತ್ತಿದೆ. ಹಾಗೇ ನೂತನವಾದ ವೃತ್ತವೂ ಪಾರಂಪರಿಕ ಶೈಲಿಯಲ್ಲಿ ಕಂಗೊಳಿಸಲಿದೆ. ಸುತ್ತಲೂ ಕಲ್ಲಿನಲ್ಲಿ ನಿರ್ಮಾಣಗೊಂಡ ವೃತ್ತ, ವೃತ್ತದ ಒಳಭಾಗದಲ್ಲಿ ಕಾರಂಜಿ ಹಾಗೂ ಮಧ್ಯ ಭಾಗದಲ್ಲಿ ವಿಶೇಷ ವಿನ್ಯಾಸದ ಮಂಟಪದ ಮೇಲೆ ಶಿವ ಕುಳಿತಿರುವ ಮೂರ್ತಿ ಇರಲಿದೆ. ರಸ್ತೆಯ ಇಕ್ಕೆಲಗಳಲ್ಲಿ ಪಾರಂಪರಿಕ ಶೈಲಿಯ ತಡೆಗೋಡೆ ನಿರ್ಮಾಣಗೊಳ್ಳಲಿದೆ.

ಅಗ್ರಹಾರ ವೃತ್ತದಿಂದ ಕೆ.ಆರ್. ವೃತ್ತದವರೆಗೆ ವೈಟ್ ಟ್ಯಾಪಿಂಗ್

ಅಗ್ರಹಾರ ವೃತ್ತ ಮತ್ತು ಕಂಠಿ ಮಲ್ಲಣ್ಣ ಬಸ್ ನಿಲ್ದಾಣದ ಅಭಿವೃದ್ಧಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ 50 ಲಕ್ಷ ರೂ. ಅನುದಾನದಲ್ಲಿ ಆರಂಭವಾಗಲಿದೆ. ಈಗಾಗಲೇ ನೀಲಿ ನಕ್ಷೆಯೂ ಸಿದ್ಧಗೊಂಡಿದೆ. ಇದರೊಟ್ಟಿಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ಅಗ್ರಹಾರ ವೃತ್ತದಿಂದ ಕೆ.ಆರ್. ವೃತ್ತದವರೆಗೆ ವೈಟ್ ಟ್ಯಾಪಿಂಗ್ ಆಗಲಿದೆ.

-ಟಿ.ಎಸ್.ಶ್ರೀವತ್ಸ, ಶಾಸಕ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	3 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಯುಧ (ಕ)	4 ಪ್ರದರ್ಶನಗಳು

ಮೈಸೂರಲ್ಲಿ ಮಹಿಳಾ ಕ್ರೀಡಾಕೂಟ...



ಮೈಸೂರು ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಮಹಿಳಾ ಕ್ರೀಡಾಕೂಟಕ್ಕೆ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಚಾಲನೆ ನೀಡಿದರು. ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಜಿಪಂ ಉಪ ಕಾರ್ಯದರ್ಶಿ ಸವಿತಾ, ಮುಖ್ಯ ಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕಿ ಪುಷ್ಪ, ಮಾರುಕಟ್ಟೆ ಇಲಾಖೆಯ ಉಪನಿರ್ದೇಶಕಿ ಸಂಗೀತ, ಸಹಾಯಕ ಪ್ರಾಧ್ಯಾಪಕಿ ನಿರ್ಮಲದೇವಿ, ಪ್ರಾಧ್ಯಾಪಕಿ ಲಕ್ಷ್ಮಿ ಪಲುಟಿ, ಜೋಶ್ನಾ ಕಾಮತ್, ಅಂತಾರಾಷ್ಟ್ರೀಯ ಕಾಟೆ ಪಟು ಭಾರತಿ ಹಾಗೂ ಕ್ರೀಡಾ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಚಿನ್ನದ ಬೆಲೆಯಲ್ಲಿ ಇಳಿಕೆ ; ಮೈಸೂರಲ್ಲೂ ಖರೀದಿಗೆ ಹೆಚ್ಚಿನ ಜನರ ಒಲವು



ತೊಳಸಿ ಜ್ಯೂಯಲ್ಸ್ ಮಳಿಗೆಯಲ್ಲಿ ಚಿನ್ನಾಭರಣ ಖರೀದಿಸುತ್ತಿರುವ ಗ್ರಾಹಕರು.

ಮೈಸೂರು, ಮಾ.27(ಪಿಎಂ)– ಮೈಸೂರಿನಲ್ಲೂ ಚಿನ್ನ ಖರೀದಿಗೆ ಜನ ಮುಂದಾಗಿದ್ದಾರೆ. ಬೆಲೆ ಇಳಿಕೆ ಕಾರಣಕ್ಕೆ ಚಿನ್ನ ಖರೀದಿಗೆ ಜನತೆಯಲ್ಲಿ ಮಂದಹಾಸ ಮೂಡಿದೆ.

ಮಧ್ಯಪ್ರಾಚ್ಯ ಸಂಘರ್ಷ ಸೇರಿದಂತೆ ವಿವಿಧ ಕಾರಣಕ್ಕೆ ಜಾಗತಿಕ ಮಾರುಕಟ್ಟೆಯಲ್ಲಿ ಕಳೆದೊಂದು ವಾರದಿಂದ ಚಿನ್ನದ ಬೆಲೆಯಲ್ಲಿ ಇಳಿಮುಖವಾಗುತ್ತಿದೆ. ಇದರಿಂದ ರಾಜ್ಯದಲ್ಲಿ ಆಭರಣ ಖರೀದಿಗೆ ಹೆಚ್ಚಿನ ಜನ ಒಲವು ತೋರುತ್ತಿದ್ದಾರೆ. ಇದಕ್ಕೆ ಮೈಸೂರು ಸಹ ಹೊರತಾಗಿಲ್ಲ.

ಮಧ್ಯಪ್ರಾಚ್ಯದಲ್ಲಿನ ಇಸ್ರೇಲ್–ಇರಾನ್ ಯುದ್ಧದ ಪರಿಣಾಮ ಗಗನಕ್ಕೇರಿದ್ದ ಚಿನ್ನದ ಬೆಲೆ ಈಗ ಇಳಿಕೆ ಕಂಡಿದ್ದು, ಮೈಸೂರಿನಲ್ಲಿ ಜನ ಚಿನ್ನದ ಖರೀದಿಗೆ ಮಳಿಗೆಯತ್ತ ಮುಖ ಮಾಡುತ್ತಿದ್ದಾರೆ. ಹಲವು ವರ್ಷಗಳಿಂದ ಚಿನ್ನದ ಬೆಲೆ ಭಾರೀ ಪ್ರಮಾಣದಲ್ಲಿ ಏರಿಕೆ ಕಂಡಿತ್ತು. ಇದೀಗ ಬೆಲೆ ಕಡಿಮೆಯಾಗುತ್ತಿದ್ದಂತೆ ಜನ ತಮ್ಮ ಕುಟುಂಬದ ಶುಭ ಕಾರ್ಯಗಳಿಗಾಗಿ ಚಿನ್ನದ ಖರೀದಿಯಲ್ಲಿ ಉತ್ಸಾಹ ತೋರುತ್ತಿದ್ದಾರೆ.

ಯಾವ ಸಂದರ್ಭದಲ್ಲಿ ಷೇರುಪೇಟೆ ಬಿದ್ದಿದೆ ಹಾಗೂ ಯುದ್ಧ ನಡೆದಿದೆಯೋ ಆಗೆಲ್ಲಾ ಚಿನ್ನದ ಬೆಲೆಯಲ್ಲಿ ಏರಿಕೆಯಾಗಿರುವುದು ಇದೆ. ಆದರೆ ಈಗ ಅದು ಉಲ್ಟಾ ಆಗಿದೆ ಎಂದು ವಿಶ್ಲೇಷಿಸಿದ್ದಾರೆ ಮಾರುಕಟ್ಟೆ ತಜ್ಞರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ತೊಳಸಿ ಜ್ಯೂಯಲ್ಸ್‌ನ ವ್ಯವಸ್ಥಾಪಕ ಪಾಲುದಾರ ಹರ್ಷ ನಂದನ ತೊಳಸಿ, ಚಿನ್ನದ ಬೆಲೆಯಲ್ಲಿ ಕಡಿಮೆಯಾಗಿದೆ. ಅಪರಂಜಿ ಚಿನ್ನವು ಗ್ರಾಂಗೆ 18ರಿಂದ 19 ಸಾವಿರ ರೂ.ವರೆಗೆ ಏರಿಕೆಯಾಗಿತ್ತು. ಈಗ ಇದು 15 ಸಾವಿರ ರೂ.ಗೆ ಇಳಿಕೆಯಾಗಿದೆ. ಅಲ್ಲಿಗೆ ಇವತ್ತಿಗೆ ಸುಮಾರು ಶೇ.20ರಷ್ಟು ಕಡಿಮೆಯಾಗಿದೆ. ಆದ್ದರಿಂದ ಈಗ ಜನ ಖರೀದಿಗೆ ಮುಂದಾಗಿದ್ದಾರೆ. ಅಂತೆಯೇ 22 ಕ್ಯಾರೆಟ್ ಚಿನ್ನವು ಗ್ರಾಂಗೆ ಇಂದಿನ (ಮಾ.26) ಬೆಲೆ 13,465 ರೂ. ಇದೆ. ಹೆಚ್ಚಿನ ಗ್ರಾಹಕರು ಇದೇ 22 ಕ್ಯಾರೆಟ್ ಚಿನ್ನ ಖರೀದಿಸುತ್ತಾರೆ ಎಂದು ಮಾಹಿತಿ ನೀಡಿದರು.

ರಾಜಕೀಯ, ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರಿಗೆ ನಿರೀಕ್ಷಿತ ಅವಕಾಶ ಸಿಕ್ಕಿಲ್ಲ

ಜಾನಪದ ಕಲಾವಿದೆ ಡಾ.ಶ್ವೇತಾ ಮಡಪ್ಪಾಡಿ ಅಭಿಮತ

ಮೈಸೂರು, ಮಾ.27(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಯೂತ್ ರೆಡ್‌ಕ್ರಾಸ್ ಹಾಗೂ ಮಹಿಳಾ ಸಬಲೀಕರಣ ಕೋಶದ ವತಿಯಿಂದ ಶುಕ್ರವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು

ಕಾರ್ಯಕ್ರಮ ಉದ್ಘಾಟಿಸಿದ ಜಾನಪದ ಕಲಾವಿದೆ ಹಾಗೂ ಉದ್ಯಮಿ ಡಾ.ಶ್ವೇತಾ ಮಡಪ್ಪಾಡಿ ಮಾತನಾಡಿ, ದೇಹದಲ್ಲಿನ ಬಿಸಿರಕ್ತ ಹಾರಿ ಹೋಗುವ ಮುನ್ನ ಹೊಸ ನಾಡನ್ನು ಕಟ್ಟುವ ಕೆಲಸ ಮಾಡಬೇಕು ಎಂಬ ಗೋಪಾಲಕೃಷ್ಣ ಅಡಿಗರ ಆಶಯದಂತೆ ವಿದ್ಯಾರ್ಥಿಯಾಗಿದ್ದಾಲೇ ಕೀರ್ತಿ ತರುವ ಕೆಲಸಗಳನ್ನು ಮಾಡಬೇಕು ಎಂದು ತಿಳಿಸಿದರು.

ಸಮಾಜದಲ್ಲಿ ಗಂಡು–ಹೆಣ್ಣಿನ ಸಮಾನ ನಡೆ ಮುಖ್ಯ. ಪ್ರಸ್ತುತ ದಿನಗಳಲ್ಲಿ ಹೆಣ್ಣಿನ ಬಗೆಗಿನ ಆಲೋಚನೆಗಳು ಬದಲಾವಣೆಯಾಗುತ್ತಿವೆ. ಆದರೆ, ರಾಜಕೀಯ ಮತ್ತು ಸಿನಿಮಾ ಕ್ಷೇತ್ರದಲ್ಲಿ ಮಾತ್ರ ಹೆಣ್ಣಿಗೆ ಸಿಗಬೇಕಾದ ಅವಕಾಶ ಸಿಗುತ್ತಿಲ್ಲ. ಹೆಣ್ಣಿಗೆ ಜನಪ್ರತಿನಿಧಿಯಾಗುವ ಶಕ್ತಿ–ಸಾಮರ್ಥ್ಯ ವಿದ್ದರೂ ಕಡೆಗಣಿಸಲಾಗುತ್ತಿದೆ. ಹಾಗೆಯೇ ಸಿನಿಮಾ ಕ್ಷೇತ್ರಕ್ಕೆ ಕಳುಹಿಸುವ ಪೋಷಕರ ಸಂಖ್ಯೆ ಕಡಿಮೆ ಎಂದು ಬೇಸರ ವ್ಯಕ್ತಪಡಿಸಿದರು.

ಮಹಿಳಾ ಡಾಕ್ಟರ್ಸ್, ಇಂಜಿನಿಯರ್ಸ್ ಪುರುಷರಷ್ಟೇ ಇದ್ದಾರೆ. ಆದರೆ, ರಾಜಕಾರಣಿಗಳಲ್ಲಿ ಗಾಸಿಪ್‌ಗಳನ್ನು ಎದುರಿಸುವ ಶಕ್ತಿ ಇಲ್ಲದೆಯೂ ಮಹಿಳೆಯರೂ ರಾಜಕಾರಣದಿಂದ ಹೊರಗುಳಿಯುತ್ತಿದ್ದಾರೋ ಅಥವಾ ಅವಕಾಶ ದೊರೆಯದೆ ಸಾಧ್ಯವಾಗುತ್ತಿಲ್ಲವೋ ಎಂಬುದನ್ನು ಅರಿತು ಸಮಾನ ಅವಕಾಶ ಮಾಡಿಕೊಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ವೊರಬದ ಮಲ್ಲಿಕಾರ್ಜುನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕಾರ್ಯಕ್ರಮ ಸಂಯೋಜಕಿ ಡಾ.ಹೇಮ ಪಾಟೀಲ್, ಚಾರ್ಟರ್ಡ್ ಅಕೌಂಟೆಂಟ್ ಜಿ.ಎ.ಅಕ್ಷರಿ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ರೇಚಣ್ಣ, ಎನ್.ನಾಗಲಾಂಬಿಕೆ, ಪಿ.ವಸುಮತಿ ಮತ್ತಿತರರು ಉಪಸ್ಥಿತರಿದ್ದರು.

ಐಶ್ವರ್ಯ ಬಡಾವಣೆಗೆ ಪಾಲಿಕೆ ಆಯುಕ್ತರ ಭೇಟಿ



ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 2ರ ವ್ಯಾಪ್ತಿಯ 58ನೇ ವಾರ್ಡ್ ಐಶ್ವರ್ಯ ಬಡಾವಣೆಗೆ ಗುರುವಾರ ಪಾಲಿಕೆಯ ಆಯುಕ್ತ ಶೇಕ್ ತನ್ವೀರ್ ಆಸೀಫ್ ಭೇಟಿ ನೀಡಿ, ಮೂಲಭೂತ ಸೌಕರ್ಯ ಹಾಗೂ ಸ್ವಚ್ಛತೆ ನಿರ್ವಹಣೆ ಪರಿಶೀಲಿಸಿದರು. ಈ ವೇಳೆ ವಲಯ ಆಯುಕ್ತ ಜಿ.ಗಿರೀಶ್, ಪರಿಸರ ಕಾರ್ಯಪಾಲಕ ಇಂಜಿನಿಯರ್ ಕೆ.ಎಸ್.ಮೃತ್ಯುಂಜಯ, ಪರಿಸರ ಇಂಜಿನಿಯರ್ ಎನ್.ಮಹದೇವಮ್ಮ, ಸ್ಥಳೀಯ ನಿವಾಸಿ, ಜೆಎಸ್‌ಎಸ್ ಸಂಸ್ಥಾಪಕ ಶ್ರೀಹರಿ ಮತ್ತಿತರರಿದ್ದರು.

ನಾಳೆ ಸಿದ್ಧಾರ್ಥ ಬುದ್ಧ ವಿಹಾರ ಉದ್ಘಾಟನೆ

ಇದೇ ವೇಳೆ ಬುದ್ಧಮೂರ್ತಿ ಪ್ರತಿಷ್ಠಾಪನೆ

ಮೈಸೂರು, ಮಾ.27(ಜಿಎ)–ಮೈಸೂರಿನ ವಿಜಯನಗರ ಮೊದಲ ಹಂತ, ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಿರ್ಮಾಣಗೊಂಡಿರುವ ಸುಸಜ್ಜಿತ ಸಿದ್ಧಾರ್ಥ ಬುದ್ಧ ವಿಹಾರ ಉದ್ಘಾಟನೆ ಹಾಗೂ ಬುದ್ಧ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಮಾ.29ರಂದು ನಡೆಯಲಿದೆ ಎಂದು ಕರ್ನಾಟಕ ಬುದ್ಧ ಧಮ್ಮ ಸಮಿತಿ, ಮೈಸೂರು ಘಟಕದ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2004 ರಿಂದಲೂ ಬುದ್ಧ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳನ್ನು ಸಿದ್ಧಾರ್ಥ ಬುದ್ಧ ವಿಹಾರದಿಂದ ಪ್ರಚಾರಪಡಿಸಲಾಗುತ್ತಿದೆ. ವಿಹಾರದ ಮುಖ್ಯದ್ವಾರದಲ್ಲಿ ಮಧ್ಯ ಪ್ರದೇಶದ ಸಾಂಚಿ ಮಾದರಿಯ ಅಮೋಘವಾದ ಸಾಂಚಿ ಗೇಟ್ ನಿರ್ಮಾಣ ಮಾಡಲಾಗಿದೆ ಎಂದರು.

ಅಂದು ಬೆಳಗ್ಗೆ 9 ಗಂಟೆಗೆ ನಾಗಪುರ ಅಲೋಕ ಬುದ್ಧವಿಹಾರದ ವಿನಯರಕ್ಷಿತ ಭಂತೇಜಿ ಅವರ ಸಮ್ಮುಖದಲ್ಲಿ ಪರಿತ್ರಾಣ ಪಠಣ, ಪಂಚಶೀಲ ಬೋಧನೆ, ಮೈತ್ರಿ ಧ್ಯಾನ, ಧಮ್ಮೋಪದೇಶಗಳ ಧಾರ್ಮಿಕ ಸಭೆಯ ಮೂಲಕ ಬುದ್ಧರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಚೆನ್ನಲಿಂಗನಹಳ್ಳಿಯ ಮನೋರಕ್ಷಿತ ಭಂತೇಜಿ, ಬೈಲಕುಪ್ಪೆಯ ಕರ್ಮರಿಂಪೂಜಿ ಭಂತೇಜಿ, ಕೂಡ್ಲೂರು ಬೋಧಿರತ್ನ ಭಂತೇಜಿ, ಚೆನ್ನೈನ ಬುದ್ಧಪ್ರಕಾಶ್ ಭಂತೇಜಿ, ಚಾಮರಾಜನಗರ ಬೋಧಿರತ್ನ ಭಂತೇಜಿ, ಮೈಸೂರಿನ ಬಿಎಸ್‌ಐ ಸಂಘನಾಯಕ ಭಂತೆ ಡಾ. ಕಲ್ಯಾಣಸಿರಿ ಅವರು ಉಪಸ್ಥಿತರಿರುವರು ಎಂದರು.

ನಂತರ ಬೆಳಿಗ್ಗೆ 11.30ಗಂಟೆಗೆ ಮೈಸೂರು ಉರಿಲಿಂಗಪೆದ್ದಿ ಮಹಾಸಂಸ್ಥಾನದ ಶ್ರೀ ಜ್ಞಾನಪ್ರಕಾಶ್‌ಸ್ವಾಮೀಜಿ ಸಮ್ಮುಖದಲ್ಲಿ ನಡೆಯಲಿರುವ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಬುದ್ಧ ಧಮ್ಮ ಸಮಿತಿ, ಮೈಸೂರು ಘಟಕದ ಅಧ್ಯಕ್ಷ ಪ್ರೊ.ಡಿ. ನಂಜುಂಡಯ್ಯ ಅವರು ವಹಿಸುವರು. ಕರ್ನಾಟಕ ಬುದ್ಧ ಧಮ್ಮ ಸಮಿತಿಗಳ ಒಕ್ಕೂಟದ ಗೌರವ ಅಧ್ಯಕ್ಷ ಬಿ.ಗೋಪಾಲ್ ಅವರು ಸಿದ್ಧಾರ್ಥ ಬುದ್ಧವಿಹಾರ ನಡೆದು ಬಂದ ದಾರಿ ಪುಸ್ತಕವನ್ನು ಬಿಡುಗಡೆ ಮಾಡುವರು. ಮೈಸೂರು ಬೆಸ್ಟ್ ಸಂಸ್ಥೆ ಕಾರ್ಯದರ್ಶಿ ಡಾ.ಜಗನ್ನಾಥ್, ಬೆಂಗಳೂರು ಪ್ರದೇಶಾಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕರಾದ ಡಿ.ಚಂದ್ರಶೇಖರಯ್ಯ ಉಪಸ್ಥಿತರಿರುವರು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರೊ.ನಂಜುಂಡಯ್ಯ, ಹೆಚ್.ಶಿವರಾಜು, ಅಹಿಂದ ಜವರಪ್ಪ, ಡಾ.ಟಿ.ಮಂಜು, ಕೆ.ಆರ್.ಗೋಪಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ನಡೆದ ಏಕತ್ಮಾ ಮಾನವ ದರ್ಶನ ಸಮಾರೋಪ

ನಮಗೆ ಇಂಗ್ಲಿಷ್, ವಿಜ್ಞಾನ, ತಂತ್ರಜ್ಞಾನದ ಅವಶ್ಯಕತೆ ಇದೆಯೇ ಹೊರತು ಪಾಶ್ಚಾತ್ಯ ಆಲೋಚನೆ, ಜೀವನ ಶೈಲಿಯಲ್ಲ

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅಭಿಪ್ರಾಯ

ಮೈಸೂರು, ಮಾ.27(ಬಿಎಲ್‌ಯು)– ನಮಗೆ ಇಂಗ್ಲಿಷ್, ವಿಜ್ಞಾನ, ತಂತ್ರಜ್ಞಾನ ಅಳವಡಿಕೆಯ ಅವಶ್ಯಕತೆ ಇದೆ. ಆದರೆ ಪಾಶ್ಚಿಮಾತ್ಯ ಆಲೋಚನೆ ಹಾಗೂ ಜೀವನ ಶೈಲಿಯ ಅವಶ್ಯಕತೆ ಇಲ್ಲ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದು ನಡೆದ ಏಕತ್ಮಾ ಮಾನವ ದರ್ಶನ ಕಾರ್ಯಕ್ರಮದಲ್ಲಿ ಭಾರತದ ವಿಶ್ವ ದೃಷ್ಟಿಕೋನ ಕುರಿತು ಉಪನ್ಯಾಸ ನೀಡಿ ಮಾತನಾಡಿದ ಅವರು, ವಿಶ್ವದಲ್ಲೇ ಮಾದರಿಯಾದ ಭಾರತದ ಆಲೋಚನೆ ಹಾಗೂ ಜೀವನ ಶೈಲಿಯನ್ನು ಹಲವು ದೇಶಗಳು ಅನುಸರಿಸುವಾಗ ನಾವೇಕೆ ಪಾಶ್ಚಿಮಾತ್ಯ ಆಲೋಚನೆ, ಜೀವನ ಶೈಲಿ ಅನುಸರಿಸಬೇಕು ಎಂದು ಪ್ರಶ್ನಿಸಿದರು.

ಭಾರತಕ್ಕೆ ತನ್ನದೆ ಆದ ಆಡಳಿತ ವ್ಯವಸ್ಥೆ, ಸಂಸ್ಕೃತಿ ಇದ್ದು, ಇದನ್ನು ಸಂರಕ್ಷಣೆ ಮಾಡಬೇಕಾದ ಹೊಣೆಗಾರಿಕೆ ದೇಶದ ಎಲ್ಲರ ಮೇಲಿದೆ ಎಂದು ಸಂತೋಷ್ ಸಲಹೆ ನೀಡಿದರು.

ಋಷಿ ಹಾಗೂ ರಾಜ ಎಂಬ ಎರಡು ವಿಶಿಷ್ಟ ಗುಣಗಳ ಸಮ್ಮಿಳಿತವಾಗಿರುವ ಬಹಳಷ್ಟು ರಾಜರನ್ನು ರಾಜರ್ಷಿ ಎಂದು ಕರೆಯಲಾಗುತ್ತದೆ. ಭಾರತದ ಬಹಳಷ್ಟು ರಾಜರು ದೇಶಕ್ಕೆ ಸ್ಮರಣೀಯ ಕೊಡುಗೆ ನೀಡಿದ್ದಾರೆ. ಅವರು ಅನುಷ್ಠಾನಗೊಳಿಸಿದ ಯೋಜನೆಯ ಫಲವನ್ನು ನಾವು ಇಂದೂ ಕೂಡ ಅನುಭವಿಸುತ್ತಿದ್ದೇವೆ ಎಂದು ತಿಳಿಸಿದರು.

ಪ್ರಖ್ಯಾತ ಶಿಕ್ಷಣ ತಜ್ಞರು, ನೀತಿ ನಿರೂಪಕರ ಅಭಿಪ್ರಾಯವನ್ನು ಪರಿಗಣಿಸಿ ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ (ಎನ್ ಇಪಿ) ರೂಪಿಸಿದೆ. ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆ ತರಲು ಹಾಗೂ ದೇಶದ ಭವಿಷ್ಯದ ಬೆಳವಣಿಗೆಯ ದಿಕ್ಸೂಚಿಯಾದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬಹಳಷ್ಟು ರಾಜ್ಯಗಳು ಅನುಸರಿಸುತ್ತಿವೆ. ಆದರೆ, ದುರದೃಷ್ಟಕರ ಸಂಗತಿಯೆಂದರೆ ಮತ್ತೆ ಕೆಲವು ರಾಜ್ಯಗಳು ಎನ್‌ಇಪಿ ಬದಲಿಗೆ ಎಸ್‌ಇಪಿ ಜಾರಿಗೊಳಿಸಿವೆ ಎಂದು ಸಂತೋಷ್ ಅವರು ಅಸಮಾಧಾನ ವ್ಯಕ್ತಪಡಿಸಿದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಶುಕ್ರವಾರ ನಡೆದ ಏಕತ್ಮಾ ಮಾನವ ದರ್ಶನ ಕಾರ್ಯಕ್ರಮದಲ್ಲಿ ಭಾರತದ ವಿಶ್ವ ದೃಷ್ಟಿಕೋನ ಕುರಿತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮಾತನಾಡಿದರು.

ತರುವಾಯ ಮಾತನಾಡಿದ ದೆಹಲಿಯ ಜೆಎನ್‌ಯು ಕುಲಪತಿ ಪ್ರೊ.ಶಾಂತಿಶ್ರೀ ಡಿ.ಪಂಡಿತ್ ಅವರು, ಜೆಎನ್‌ಯು ಬಗ್ಗೆ ಈ ಹಿಂದೆ ಇದ್ದ ಪರಿಕಲ್ಪನೆಯಿಂದ ಈಗ ಹೊರ ತರಲಾಗಿದೆ. ಆಡಳಿತಾತ್ಮಕ ಹಾಗೂ ಪಾಠ–ಪ್ರವಚನದಲ್ಲಿ ಬಹಳಷ್ಟು ಬದಲಾವಣೆ ತಂದು ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಪ್ರೊ.ಕೆ.ವಿ.ರಾಜು ಅವರು, ನಿನ್ನೆಯಿಂದ ನಡೆಯುತ್ತಿರುವ ಏಕತ್ಮಾ ಮಾನವ ದರ್ಶನ ಕಾರ್ಯಕ್ರಮದಲ್ಲಿ 180 ವಿಚಾರಗಳನ್ನು ಮಂಡನೆ ಮಾಡಲಾಗಿದೆ. ಆದರೆ ಇಲ್ಲಿ ಮಂಡನೆಯಾದ ವಿಚಾರಗಳನ್ನು ಯಾರು ಕೊಂಡೊಯ್ಯಬೇಕು, ಇದರ ದಿಕ್ಕು ದೆಸೆ ಏನು ಎಂಬ ಪ್ರಶ್ನೆಗಳು ಎದುರಾಗಿವೆ ಎಂದರು.

ದೇಶದ ಬೆಳವಣಿಗೆಗೆ ಪೂರಕವಾದ ಇಲ್ಲಿನ ವಿಚಾರಗಳನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಅಡಕಗೊಳಿಸಬೇಕೇ, ಸರ್ಕಾರಗಳು ಇದನ್ನು ಅನುಸರಿಸುತ್ತವೆಯೇ ಎಂಬಿವೆ ಪ್ರಶ್ನೆಗಳಿಗೆ ಉತ್ತರ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ಇದರ ಬಗ್ಗೆ ಸ್ಪಷ್ಟತೆ ಹೊಂದಬೇಕು ಎಂದು ಪ್ರೊ. ರಾಜು ಸಲಹೆ ನೀಡಿದರು.

ಏಕತ್ಮಾ ಮಾನವ ದರ್ಶನದ ಸಹ ಸಂಚಾಲಕ ಡಾ. ಪುನೀತ್ ರಾಜ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ರಾಮಾಯಣ ಬದುಕಿನ ಕಥಾಸಾರ; ಹಾಗಾಗಿ ಇದನ್ನು ನಂಬುವವರು ಹೆಚ್ಚು

ಹಿರಿಯ ಲೇಖಕಿ ಉಷಾ ನರಸಿಂಹನ್ ಅಭಿಮತ

ಮೈಸೂರು, ಮಾ.27(ಎಂಕೆ)– ರಾಮಾಯಣ ಈ ಮಣ್ಣಿನ ಅಸ್ಮಿತೆ, ಉದಾತ್ತ ಚರಿತ್ರೆ ಬದುಕನ್ನು ಕಲಿಸುವ ಕಥಾ ಹಂದರ. ಪರ–ವಿರೋಧ ಸಂಘರ್ಷವಿದ್ದರೂ ನಂಬುವವರ ಸಂಖ್ಯೆ ಹೆಚ್ಚು ಎಂದು ಹಿರಿಯ ಲೇಖಕಿ ಉಷಾ ನರಸಿಂಹನ್ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಚಂದ್ರಶೇಖರ ಪಾಟೀಲ, ಗುಂಡ್ಲುಪೇಟೆ ಬಿ.ಎನ್. ನಂಜುಂಡಯ್ಯ ಹಾಗೂ ರಾಮಚಂದ್ರ ಗುಪ್ತ ಸ್ಮರಣಾರ್ಥ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಕುವೆಂಪು ರಾಮಾಯಣ ದರ್ಶನದ ಅವಲೋಕನ' ಕುರಿತು ಮಾತನಾಡಿದ ಅವರು, ಮೌಖಿಕ ಪರಂಪರೆಯಲ್ಲಿ ಜನಮಾನಸಗೊಂಡಿರುವ ರಾಮಾಯಣ ಮಹಾಕಾವ್ಯ, ದೇಶದಲ್ಲಿನ ಎಲ್ಲಾ ಭಾಷೆಗಳಲ್ಲಿಯೂ ಭಾಷಾಂತರಗೊಂಡಿದೆ ಎಂದರು.

ಹಾಗೆಯೇ ಕಾಂಬೋಡಿಯಾ ಮತ್ತು ಶ್ರೀಲಂಕಾ ದೇಶದಲ್ಲಿ ರಾಮಾಯಣದ ಅಸ್ತಿತ್ವವಿದೆ. ಮಹರ್ಷಿ ವಾಲ್ಮೀಕಿ ರಚಿತ ರಾಮಾಯಣ ಮಹಾಕಾವ್ಯದ ಬಳಿಕ ಅನೇಕ ಮಹನೀಯರು ಕೂಡ ರಾಮಾಯಣ ಉಲ್ಲೇಖಿಸಿ, ರಾಮಾಯಣಕ್ಕೆ ತಮ್ಮದೇ ರೀತಿಯಲ್ಲಿ ವ್ಯಾಖ್ಯಾನ ಬರೆದಿದ್ದಾರೆ. 12ನೇ ಶತಮಾನದಲ್ಲಿ ಅಭಿನವ ಪಂಪ ಎಂದೇ ಖ್ಯಾತರಾದ ರಚಿತ ನಾಗಚಂದ್ರ 'ರಾಮಚಂದ್ರ ಚರಿತ ಪುರಾಣಂ' (ಪಂಪ ರಾಮಾಯಣ) ಕನ್ನಡ ಸಾಹಿತ್ಯದ ಅತ್ಯಂತ ಉತ್ಕೃಷ್ಟ ಮತ್ತು ಮಹತ್ವದ ಕೃತಿಗಳಲ್ಲಿ ಒಂದಾಗಿದೆ. 16ನೇ ಶತಮಾನದಲ್ಲಿ ತುಳಸಿದಾಸರು ರಚಿಸಿದ 'ರಾಮಚರಿತ ಮಾನಸ(ತುಳಸಿ ರಾಮಾಯಣ)', ತಮಿಳು ಭಾಷೆಯಲ್ಲಿ ಬಂದ 'ಕಂಬ ರಾಮಾಯಣ', ಮುಂಗೋಳಿ ಎಂದೇ ಪ್ರಸಿದ್ಧರಾದ ಮುದ್ದಣರ 'ಶ್ರೀ ರಾಮಾಶ್ವಮೇಧ, ಅದ್ಭುತ ರಾಮಾಯಣ' ಹಾಗೂ ಲಕ್ಷ್ಮೀಶ ಕವಿಯ 'ಜೈಮಿನಿ ಭಾರತ' ಪ್ರಮುಖವಾದವುಗಳು ಎಂದರು.



ಮೈಸೂರಿನ ಕುವೆಂಪುನಗರದಲ್ಲಿರುವ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಶುಕ್ರವಾರ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು

ಅದರಂತೆ 20ನೇ ಶತಮಾನದಲ್ಲಿ ಪ್ರಕಟವಾದ ಮೇರು ಕೃತಿ ಎಂದರೆ ರಾಷ್ಟ್ರಕವಿ ಕುವೆಂಪು ರಚಿತ 'ಶ್ರೀ ರಾಮಾಯಣ ದರ್ಶನಂ'. ಕುವೆಂಪು ಅವರು ಸುಮ್ಮನೆ ದರ್ಶನಂ ಎಂದು ಉಲ್ಲೇಖಿಸಲಿಲ್ಲ. ಮಾನವೀಯತೆ, ಅರ್ಪಣೆ, ಸಮನ್ವಯತೆ ಮತ್ತು ಉದಾತ್ತತೆಯ ದರ್ಶನವನ್ನು ಮಾಡಿಸಿದ್ದಾರೆ ಎಂದು ವಿವರಿಸಿದರು. ನಂತರ 'ಪ್ರವಾಸ ಸಾಹಿತ್ಯ ಬದುಕಿಗೆ ಲಾಲಿತ್ಯ' ಕುರಿತು ಆಕಾಶವಾಣಿ ವಿಶ್ರಾಂತ ಅಧಿಕಾರಿ ಎನ್.ವಿ.ರಮೇಶ್ ಮಾತನಾಡಿದರು.

ಜ್ಞಾನದ ಬುತ್ತಿಗಳು: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಹಿರಿಯ ನಾಗರಿಕರು ಎಂದರೆ ದತ್ತಿ ಕಾರ್ಯಕ್ರಮಗಳಂತೆ ಜ್ಞಾನದ ಬುತ್ತಿಗಳು. ಸಾಹಿತ್ಯ ಪರಿಷತ್‌ನಲ್ಲಿ ಕೇವಲ 250 ರೂ. ನಿಂದಲೂ ದತ್ತಿ ಇಟ್ಟು ಉಪನ್ಯಾಸ ಕಾರ್ಯಕ್ರಮದ ಮೂಲಕ ಸ್ಮರಿಸುವ ಕಾರ್ಯಗಳಾಗುತ್ತಿದೆ. ಈ ನಿಟ್ಟಿನಲ್ಲಿ ಕುವೆಂಪು ಅವರ ಕವಿ ಶೈಲದಲ್ಲಿಯೂ ಕಾರ್ಯಕ್ರಮ ಆಯೋಜನೆ ಮಾಡುತ್ತೇವೆ ಎಂದು ತಿಳಿಸಿದರು. ಕವಯತ್ರಿ ನಾಗಮ್ಮ, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ ಮತ್ತಿತರರಿದ್ದರು.


ಶಿವಕುಮ್ಮಾರ್ ಜೆ.ಬಿ.
ಸಂಘಟನಾ ಚತುರ, ಯುವಕರ ಆಶಾಕಿರಣ,
ಯುವಕರ ಕಣ್ಮಣಿ, ಸಮಾಜ ಸೇವಕರು,
ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷರು
ಹಾಗೂ ಕೆ.ಪಿ.ಸಿ.ಸಿ. ಸದಸ್ಯರಾದ
ಶ್ರೀ ಬಿ.ರೇವಣ್ಣ
ಜನ್ಮದಿನದ ಶುಭಾಶಯಗಳು
ಶುಭಕೋರುವವರು
ಸಂಕ್ರಾಂತಿ ಪ್ರಾಪರ್ಟೀಸ್, ಬೋಗಾದಿ, ಮೈಸೂರು
ನಂದಿ ಇನ್ಫ್ರಾ ಸಿದ್ಧಾರ್ಥ ಲೇಔಟ್, ಮೈಸೂರು